ಮಾನಸಿ

ತಿಂಗಳ ಪತ್ರಿಕೆ ಫೆಬ್ರವರಿ/ಮಾರ್ಚ್ : 1997

ವಿಶೇಷ ಸಂಚಿಕೆ

- ಮೀಸಲಾತಿ ಮತ್ತು ಮಹಿಳಾ ಚಳುವಳಿ
- ಮೀಸಲಾತಿ-ಸಮಾನತೆಯತ್ತ ಒಂದು ಹೆಜ್ಜೆ
- ರಾಜಕೀಯ ಮತ್ತು ಮಹಿಳೆಯರಿಗೆ ಮೀಸಲಾತಿ
- ಮಹಿಳೆಯರು ರಾಜಕೀಯವಾಗಿ ಹಿಂದುಳಿಯಲು ಪಿತೃಪ್ರಧಾನ ವ್ಯವಸ್ಥೆ ಕಾರಣ
- ಮೀಸಲಾತಿ-ಮಹಿಳಾ ಚಳವಳಿಯ ಅಲ್ಪಾವಧಿ, ಧೀರ್ಘಾವಧಿ ತಂತ್ರಗಳ ಒಂದು ಭಾಗ ಮಾತ್ರ

ಮಾನಸ

ತಿಂಗಳ ಪತ್ರಿಕೆ

ಸಂಪುಟ : 12 ಸಂಚಿಕೆ : 13

ಫೆಬ್ರವರಿ/ಮಾರ್ಚ್ : 1997

ವಿಳಾಸ :

"ಮಾನಸ" ತಿಂಗಳ ಪತ್ರಿಕೆ

ಪಂಚಾಯಿತಿ ರಸ್ತೆ

ಕಾಡುಗೋಡಿ ಪೋಸ್ಟ್

ಬೆಂಗಳೂರು - 560 067

ಸೂಚನೆ : ಬಿಡಿ ಪ್ರತಿ **3-00** ರೂ.

ವಾರ್ಷಿಕ ಚಂದಾ **40-00** ರೂ.

ಒಂದು ವಿಶೇಷ ಸಂಚಿಕೆಯೊಂದಿಗೆ

ಒಟ್ಟು ಹನ್ನೊಂದು ಸಂಚಿಕೆಗಳು

ಈ ಸಂಚಿಕೆಯಲ್ಲಿ....

ಸಂಪಾದಕರು, ಪ್ರಕಾಶಕರು ಹಾಗೂ ಮುದ್ರಕರು : ಮಾನವಿ ಮುದ್ರಣಾಲಯ

ಪಂಚಾಯಿತಿ ರಸ್ತೆ, ಕಾಡುಗೋಡಿ ಅಂಚೆ, ಬೆಂಗಳೂರು - ೫೬೦ ೦೬೭

ಮೀಸಲಾತಿ ಮತ್ತು ಮಹಿಳಾ ಚಳುವಳಿ

'ಮಾನಸ'

ರಾಜ್ಯ ವಿಧಾನಸಭೆಗಳು ಹಾಗೂ ಲೋಕಸಭೆಯಲ್ಲಿ ಪ್ರತಿ ಶತ 33ರಷ್ಟು ಸ್ಥಾನಗಳನ್ನು ಮಹಿಳೆಯರಿಗೆ ಮೀಸಲಿಡಬೇಕು ಎಂಬ ಮಸೂದೆಯನ್ನು ಸಂಯುಕ್ತರಂಗ ಸರ್ಕಾರವು ಸಂಸತ್ತಿನ ಮುಂದೆ ಮಂಡಿಸಿತು. ಈ ಮಸೂದೆ ಅಂಗೀಕೃತವಾಗಲು ಅಗತ್ಯವಾಗಿದ್ದ ಸದಸ್ಯರ ಸಂಖ್ಯೆ 275. ಮಸೂದೆ ಅಂಗೀಕೃತವಾದರೆ 181 ಜನ ಮಹಿಳೆಯರು ಸಂಸತ್ತನ್ನು ಪ್ರವೇಶಿಸುತ್ತಾರೆ. ಚುನಾವಣೆಯ ಸಂದರ್ಭದಲ್ಲಿ ಎಲ್ಲಾ ಮುಖ್ಯ ರಾಜಕೀಯ ಪಕ್ಷಗಳು ತಮ್ಮ ಚುನಾವಣಾ ಪ್ರಣಾಳಿಕೆಗಳಲ್ಲಿ ಮಹಿಳೆಯರಿಗೆ ಮೀಸಲಾತಿ ನೀಡುವ ಭರವಸೆಯನ್ನು ನೀಡಿದ್ದವು. ಆದರೆ ಮಸೂದೆ ಸಂಸತ್ತಿನ ಮುಂದೆ ಮಂಡಿಸಿ - ಅಂಗೀಕಾರವಾಗುವ ಸಂದರ್ಭದಲ್ಲಿ ಅಗತ್ಯವಾಗಿದ್ದ ಸದಸ್ಯರ ಸಂಖ್ಯೆ ಇರದಂತೆ ಬಹುತೇಕ ರಾಜಕೀಯ ಪಕ್ಷಗಳು ನೋಡಿಕೊಂಡವು. ಎಲ್ಲಾ ರಾಜಕೀಯ ಪಕ್ಷಗಳ 'ಹಿಪೋಕ್ರಸಿ' ಸದನದಲ್ಲಿ ವ್ಯಕ್ತಗೊಂಡ ನಂತರದ ಹಂತದಲ್ಲಿ ಮೀಸಲಾತಿ ಬಗ್ಗೆಗಿನ ಪರ/ವಿರೋಧ ಚರ್ಚೆಗಳು ಅವಿರತವಾಗಿ ನಡೆಯತೊಡಗಿವೆ. ಮಹಿಳೆಯರಿಗೆ ಈ ಮೀಸಲಾತಿ ಅಗತ್ಯವೇ? ಈ ಮೀಸಲಾತಿಯನ್ನು ತಮ್ಮ 'ಚುನಾವಣಾ ಪ್ರಣಾಳಿಕೆಗಳಲ್ಲಿ ಸಾರಿಕೊಂಡ ರಾಜಕೀಯ ಪಕ್ಷಗಳ ಉದ್ದೇಶವೇನು? ಮೀಸಲಾತಿಯನ್ನು 'ಸಾಂಕೇತಿಕ'-ವಾಗಿ ಮಾತ್ರ ರಾಜ್ಯ/ಸರ್ಕಾರ ಬಳಸುತ್ತಿದೆಯೇ? ರಾಜಕೀಯ ಪಕ್ಷಗಳು ಮೀಸಲಾತಿಯನ್ನು 'ತಂತ್ರ'ವಾಗಿ ಬಳಸುತ್ತಿವೆಯೇ? ಈ ಎಲ್ಲಾ ಪ್ರಶ್ನೆಗಳ ಹಿನ್ನೆಲೆಯಲ್ಲಿ ಸ್ವಾಯತ್ತ ಮಹಿಳಾ ಗುಂಪುಗಳ ನಿಲುವು/ಜವಾಬ್ದಾರಿಯನ್ನು ಚರ್ಚಿಸಲು ಇಲ್ಲಿ ಪ್ರಯತ್ನಿಸಿದ್ದೇವೆ.

ಮೀಸಲಾತಿಯ ಇತಿಹಾಸ

ಮೀಸಲಾತಿಯು ರಾಜಕೀಯ ಪ್ರಶ್ನೆಯಾಗಿರುವುದು ಈಗ ಮಾತ್ರವಲ್ಲ. ಇತಿಹಾಸದ ಪುಟಗಳಲ್ಲಿ ಹಿಂದಕ್ಕೆ ಹೋದರೆ ಈ ಪ್ರಶ್ನೆ ನಮ್ಮ ರಾಷ್ಟ್ರೀಯ ಚಳುವಳಿಯ ಹಂತದಲ್ಲಿಯೇ ರಾಜಕೀಯ ಪ್ರಶ್ನೆಯಾಗಿರುವುದನ್ನು ನಾವು ಗಮನಿಸಬಹುದಾಗಿದೆ. 1957 ಜನವರಿಯಲ್ಲಿ ಸ್ಥಳೀಯ ಸಂಸ್ಥೆ ಬಲಪಡಿಸಲು ರಚಿತವಾದ ಬಲವಂತ್‌ರಾಯ್ ಸಮಿತಿ ಮಹಿಳೆಯರಿಗೆ ಮೀಸಲಾತಿಯನ್ನು ನೀಡುವ ಅಗತ್ಯವನ್ನು ಒತ್ತಿ ಹೇಳಿತ್ತು. ಸಮಾಜ ಕಲ್ಯಾಣ ಚಟುವಟಿಕೆಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿರುವ ಇಬ್ಬರು ಮಹಿಳೆಯರನ್ನು ಪ್ರತಿ ಪಂಚಾಯಿತಿಗೂ ನಾಮಕರಣ ಮಾಡಬೇಕೆಂದು ಅದು ಹೇಳಿತ್ತು. ಉತ್ತರ ಪ್ರದೇಶ ಬಿಟ್ಟರೆ ಮಿಕ್ಕೆಲ್ಲ ರಾಜ್ಯಗಳೂ ಈ ವರದಿಯನ್ನು ಒಪ್ಪಿಕೊಂಡಿದ್ದವು.

1974ರಲ್ಲಿ ಮಹಿಳೆಯರ ಸ್ಥಾನ-ಮಾನ ಕುರಿತು ವರದಿ ನೀಡಲು ರಚಿತವಾದ ಸಮಿತಿಯು ಸ್ಥಳೀಯ ಸಂಸ್ಥೆಗಳಲ್ಲಿ ಮಹಿಳೆಯರಿಗೆ 30% ಮೀಸಲಾತಿ ನೀಡಬೇಕೆಂದು ಶಿಫಾರಸ್ಸು ಮಾಡಿತು. 1978ರಲ್ಲಿ ಪಂಚಾಯತ್ ವ್ಯವಸ್ಥೆಯ ಬಗ್ಗೆ ಸಲ್ಲಿಸಿದ ಅಶೋಕ್ ಮೆಹ್ತಾ ಸಮಿತಿಯು ಪಂಚಾಯತ್ ಚುನಾವಣೆಯಲ್ಲಿ ಅತಿ ಹೆಚ್ಚು ಮತ ಗಳಿಸಿದ ಇಬ್ಬರು ಮಹಿಳಾ ಅಭ್ಯರ್ಥಿಗಳು ವಿಜೇತರಾಗಿರದಿದ್ದರೂ ಕೂಡಾ ಅವರನ್ನು ಪಂಚಾಯಿತಿಗೆ ನಾಮಕರಣ ಮಾಡಿಕೊಳ್ಳಬೇಕೆಂದು ಶಿಫಾರಸ್ಸು ಮಾಡಿತ್ತು.

ಪಂಚಾಯತ್ ವ್ಯವಸ್ಥೆಯಲ್ಲಿ ಮಹಿಳೆಯರಿಗೆ ಶಾಸನಬದ್ಧ ಮೀಸಲಾತಿ ನೀಡುವ ಪ್ರಯತ್ನ ಮೊದಲು ನಡೆದದ್ದು ಕರ್ನಾಟಕದ ಜನತಾ ಪಕ್ಷ ಸರ್ಕಾರದಿಂದ. 1983ರಲ್ಲಿ ಕಾಯಿದೆ ತಿದ್ದುಪಡಿ ತಂದ ಸರ್ಕಾರ ಶೇಕಡಾ 25ರಷ್ಟು ಸ್ಥಾನಗಳನ್ನು ಮಹಿಳೆಯರಿಗೆ ಕಡ್ಡಾಯ ಮಾಡಿತು. 1987ರಲ್ಲಿ ಪಂಚಾಯತ್ ಚುನಾವಣೆಯಲ್ಲಿ ಇದನ್ನು ಜಾರಿಗೆ ತರಲಾಯಿತು. ದೇಶದಲ್ಲಿ ಮೊದಲ ಬಾರಿಗೆ ನೂರಾರು ಮಹಿಳೆಯರು ಚುನಾಯಿತರಾದರು.

ಈ ಮೀಸಲಾತಿಯ ಸಲಹೆಯನ್ನು ರಾಜೀವ್‌ಗಾಂಧಿ ಸರ್ಕಾರದಲ್ಲಿ ಪಂಚಾಯತ್ ರಾಜ್ ಬಿಲ್‌ನಲ್ಲಿ ಮತ್ತೆ ಸೂಚಿಸಲಾಯಿತು. 1988ರಲ್ಲಿ ಮಹಿಳೆಯರಿಗಾಗಿ ತಯಾರಾದ

ಸಂವಿಧಾನವನ್ನು ರಚಿಸುವಾಗ - ಮಹಿಳೆಯರಿಗೆ ಪುರುಷರೊಂದಿಗೆ ಸಮಾನತೆಯನ್ನು ಕಲ್ಪಿಸಲಾಯಿತು. ಪುರುಷರು ಇದನ್ನು ವಿರೋಧಿಸಲಿಲ್ಲ. ಆದರೆ ಹಿಂದೂ ಕೋಡ್ ಬಿಲ್‌ನಲ್ಲಿ ಮಹಿಳೆಯರಿಗೆ ಆಸ್ತಿ ಹಕ್ಕನ್ನು ನೀಡುವ ಸೂಚನೆ ನೀಡಿದಾಗ ರಾಜೇಂದ್ರ ಪ್ರಸಾದಂತಹ ವ್ಯಕ್ತಿಯೇ ಇದನ್ನು ತಿರಸ್ಕರಿಸಿದರು.

'ರಾಷ್ಟ್ರೀಯ ದೃಷ್ಟಿಕೋನ ಯೋಜನೆ' ಸಹ ಪಂಚಾಯಿತಿಯಿಂದ ಲೋಕಸಭೆಯವರೆಗೆ 1/3ಭಾಗ ಮಹಿಳಾ ಮೀಸಲಾತಿಯನ್ನು ಎತ್ತಿ ಹಿಡಿಯಲಾಯಿತು.

1990ರಲ್ಲಿ ಶರದ್‌ಪವಾರ್ ಸರ್ಕಾರವು ಮಹಾರಾಷ್ಟ್ರದಲ್ಲಿ 30% ಮೀಸಲಾತಿಯನ್ನು ಮುನ್ಸಿಪಲ್ ಕಾರ್ಪೋರೇಷನ್, ಮುನ್ಸಿಪಲ್ ಕೌನ್ಸಿಲ್, ಜಿಲ್ಲಾ ಪರಿಷತ್, ಹಳ್ಳಿ ಪಂಚಾಯಿತಿಗಳಲ್ಲಿ ನೀಡುವುದಾಗಿ ಘೋಷಿಸಿತು.

1990ರಲ್ಲಿ ಸಂಸತ್ತಿನಲ್ಲಿ ಈ ಪಂಚಾಯತ್ ಮೀಸಲಾತಿ ಬಿಲ್ ಅಂಗೀಕಾರವಾಗುವಾಗ ಈಗಿನ ಮಟ್ಟಿಗಿನ ಚರ್ಚೆಗಳಿರದೇ - ಸುಲಭವಾಗಿ ಅಂಗೀಕೃತವಾಯಿತು. ಸಂವಿಧಾನದ 73 ಹಾಗೂ 74ನೇ ತಿದ್ದುಪಡಿಯ ಅಂಗೀಕಾರದಿಂದ ಮಹಿಳೆಯರಿಗೆ ಪಂಚಾಯತ್ ಸಂಸ್ಥೆಗಳಲ್ಲಿ ಮೀಸಲಾತಿ ದೊರತಿ ಲಕ್ಷಾಂತರ ಮಹಿಳೆಯರು ರಾಜಕೀಯ ಮುಖ್ಯವಾಹಿನಿಯಲ್ಲಿ ಸೇರಿಕೊಳ್ಳುವಂತಾಯಿತು.

ನಾವು ಗಮನಿಸಬೇಕಾದ ಅಂಶವೆಂದರೆ ಲೋಕಸಭೆ/ ವಿಧಾನಸಭೆಯಲ್ಲಿ ಮೀಸಲಾತಿ ಬೇಕು ಎಂದು ಕೇಳುವ ಬೇಡಿಕೆಗೆ ಈಗಾಗಲೇ ಒಂದು ಇತಿಹಾಸವಿದೆ. ಕೆಳಹಂತದ ಮೀಸಲಾತಿಯ ಬಗ್ಗೆ ಅಸಹನೆ/ವಿರೋಧಗಳಿದ್ದರೂ ಅದು ಈಗಿನ ಮಟ್ಟದಷ್ಟು ಉಗ್ರ ರೂಪದಲ್ಲಿ ಕಾಣಿಸಿಕೊಂಡಿರಲಿಲ್ಲ. ಕೆಳಹಂತದ ಮೀಸಲಾತಿಯಲ್ಲಿಯೂ ಮಹಿಳೆಯರನ್ನು ರಾಜಕೀಯದ ಮುಖ್ಯವಾಹಿನಿಗೆ ಸೇರಿಸಿಕೊಳ್ಳುವುದೇ ಮುಖ್ಯ ಉದ್ದೇಶವಾಗಿತ್ತು ಎಂದು ಸರ್ಕಾರ/ಪಕ್ಷಗಳು ಹೇಳಿಕೊಂಡಿದ್ದಾಗ್ಯೂ ಕೂಡಾ ಈ ಮೀಸಲಾತಿ ನೀಡುವುದು ಸರ್ಕಾರಗಳಿಗೆ ಅನಿವಾರ್ಯ ಅಗತ್ಯವಾಗಿತ್ತು ಎಂಬುದನ್ನೂ ಕೂಡಾ ನಾವು ಗಮನಿಸಬೇಕಾಗುತ್ತದೆ. ಮಹಿಳೆಯರ 'ಸಮೂಹ ಓಟನ್ನು' ಗಳಿಸುವ ತಂತ್ರವೇ ಇದರ ಹಿಂದಿರುವ ವಿಶೇಷ ಕಾಳಜಿ ಎಂಬುದು ಸರ್ವ ವಿಧಿತವಾಗಿರುವ ವಿಚಾರ. 1957ರಿಂದ ಈ ಮೀಸಲಾತಿಯ ಪ್ರಶ್ನೆ ಚರ್ಚೆಗೆ ಬರುತ್ತಲೇ ಇರುವುದರಿಂದ ಲೋಕಸಭೆ/ ವಿಧಾನಸಭೆಯ 33% ಮೀಸಲಾತಿ ಇಷ್ಟೊಂದು ಬಗೆಯ ಚರ್ಚೆಗೆ ಒಳಗಾಗದೇ ಅಂಗೀಕಾರವಾಗಬೇಕಿತ್ತು. ಈ ಪ್ರಶ್ನೆ ಸುಲಭವಾಗಿ ಇತ್ಯರ್ಥವಾಗಬೇಕಿತ್ತು. ಆದರೆ ಈಗಿನ ಮೀಸಲಾತಿ 181 ಜನ ಮಹಿಳೆಯರನ್ನು ಅಧಿಕಾರ ಸ್ಥಾನಗಳಿಗೆ ಹೋಗುವಂತೆ ಮಾಡುತ್ತದೆ, ಮೇಲ್ಮಟ್ಟದ ಅಧಿಕಾರದ ಸ್ಥಾನಗಳಿಂದ ಪುರುಷರು ವಂಚಿತರಾಗುತ್ತಾರೆ ಎಂಬ ಆತಂಕಗಳಲ್ಲಿ ರಾಜಕೀಯ ಪಕ್ಷದ ಧುರೀಣರೆಲ್ಲರೂ ಈ ಮಸೂದೆ ಅಂಗೀಕಾರವಾಗದ ಹಾಗೆ ಸದನದಲ್ಲಿ ವರ್ತಿಸಿದ್ದು ನಮಗೆಲ್ಲರಿಗೂ ತಿಳಿದಿರುವ ಅಂಶವೇ ಆಗಿದೆ. 1996ರ ಚುನಾವಣಾ ಸಂದರ್ಭದಲ್ಲಿ 'ಮಹಿಳಾ ಮೀಸಲಾತಿ'ಯ ಬಗ್ಗೆ ಮಾತನಾಡಲೇ ಬೇಕಾದ ಅನಿವಾರ್ಯತೆ ಹೊಂದಿದ್ದ ರಾಜಕೀಯ ಪಕ್ಷಗಳು ಇಂದು ಮಸೂದೆ ಅಂಗೀಕೃತವಾಗದಂತೆ ನೋಡಿಕೊಳ್ಳುತ್ತಿರುವ ವಿರೋಧಾಭಾಸಗಳು ನಮ್ಮನ್ನು ಜಾಗೃತಗೊಳಿಸಬೇಕಾಗುತ್ತದೆ. ಈ ವಿರೋಧಾಭಾಸಗಳಲ್ಲಿಯೇ ನಾವು ರಾಜಕೀಯ ಪಕ್ಷಗಳು ಮತ್ತು ಅವರ ಉದ್ದೇಶಗಳನ್ನು ಜಾಗರೂಕವಾಗಿ ಗಮನಿಸಬೇಕಾದ ಅಗತ್ಯ ಕಂಡುಬರುತ್ತದೆ.

ರಾಜಕೀಯ ಪಕ್ಷಗಳು - ಹಾಗೂ ಅವರ ಉದ್ದೇಶಗಳು

ಬರಿಯ ದಕ್ಷಿಣ ಏಷಿಯಾದಲ್ಲಿ ಮಾತ್ರವಲ್ಲ, ಇಡಿಯ ಪ್ರಪಂಚದಲ್ಲಿ ರಾಜಕೀಯ ಹೋರಾಟದ ವಿಚಾರಧಾರೆ ರೂಪುಗೊಳ್ಳುವ ಹಂತದಲ್ಲಿ ಮಹಿಳೆಯರು ಯಾವಾಗಲೂ ಹೋರಾಟದ ಮುಂಚೂಣಿಯಲ್ಲಿ ಇದ್ದಾರೆ. ಆದರೆ ಅಧಿಕಾರದ ಹಣ್ಣುಗಳನ್ನು ಹಂಚಿಕೊಳ್ಳುವ ರಾಜಕೀಯ ಹಂತದಲ್ಲಿ ಮಾತ್ರ ಅವರ ಅಸ್ತಿತ್ವವೇ ಕಾಣಿಸುವುದಿಲ್ಲ. ಇಂಡಿಯಾದ ರಾಜಕೀಯದಲ್ಲಿ ಮಹಿಳೆಯರ ಸ್ಥಿತಿಯೂ ಇದೇ ಆಗಿದೆ. ರಾಜಕೀಯ ಹೋರಾಟಗಳಲ್ಲಿ, ವಸಾಹತುಶಾಹಿ ವಿರುದ್ಧ, ಕೂಲಿಗಾಗಿ, ಬೆಲೆ ಏರಿಕೆ ವಿರುದ್ಧ, ಭೂಮಿಯ ಒಡೆತನಕ್ಕಾಗಿ - ಮಹಿಳೆಯರು ಧರಣಿ ಕೂತಿದ್ದಾರೆ, ಅಧಿಕಾರಿಗಳನ್ನು ಗೆರಾವ್ ಮಾಡಿದ್ದಾರೆ, ಜೈಲಿಗೆ ಹೋಗಿದ್ದಾರೆ, ಪೋಲೀಸ್ ಒದೆತ ತಿಂದಿದ್ದಾರೆ, ಹೋರಾಟದ ಹೊರೆಗಳನ್ನು ಹೊತ್ತಿದ್ದಾರೆ. ಭೂಗತರಾದವರಿಗೆ ಸುದ್ದಿಗಾರರಾಗಿ ಕೆಲಸ ಮಾಡಿದ್ದಾರೆ. ತುರ್ತು ಸ್ಥಿತಿಗಳಲ್ಲಿ ನಾಯಕತ್ವ ವಹಿಸಿದ್ದಾರೆ. ಹಾಗಿದ್ದಾಗ್ಯೂ ಈ ದೇಶದ ರಾಜಕೀಯದಲ್ಲಿ ಅವರಿಗೆ ನಿಜವಾದ ನ್ಯಾಯ ದೊರಕಿದೆಯೇ? 57ರಿಂದ ಮೀಸಲಾತಿಯ ಬಗ್ಗೆ ಆಶಯ ವ್ಯಕ್ತಪಡಿಸುತ್ತಾ

ಮಸೂದೆಯ ಮುಖ್ಯಾಂಶಗಳು

1. *ರಾಜ್ಯ ವಿಧಾನಸಭೆ ಹಾಗೂ ಲೋಕಸಭೆಯಲ್ಲಿ 33% ಸ್ಥಾನ ಮಹಿಳೆಯರಿಗೆ ಮೀಸಲಿಡಬೇಕು.*
2. *ಇದರಲ್ಲಿ 1/3 ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಮಹಿಳೆಯರಿಗೆ ಮೀಸಲಿಡಬೇಕು.*
3. *ಮುಂದಿನ ಚುನಾವಣೆಗೆ ಈ ಮಸೂದೆ ಅನ್ವಯವಾಗುತ್ತದೆ.*
4. *ಕ್ಷೇತ್ರಗಳನ್ನು ರೊಟೇಶನ್ ಹಾಗೂ ಆಯ್ಕೆ ಪದ್ಧತಿಯ ಮೂಲಕ ಮಾಡಲಾಗುತ್ತದೆ.*

ಬಂದಿದ್ದಾಗ್ಯೂ ರಾಜಕೀಯ ಪಕ್ಷಗಳು ಮಹಿಳೆಯರನ್ನು 'ರಾಜಕೀಯ ಶಕ್ತಿ'ಯಾಗಿ ಪರಿಗಣಿಸಲು ಸಿದ್ಧತೆ ನಡೆಸಿವೆಯೆ? ಈ ನಲವತ್ತು ದಶಕದಲ್ಲಿ ಮಹಿಳೆಯರು ರಾಜಕೀಯದ ಮುಖ್ಯವಾಹಿನಿಯಲ್ಲಿ ಒಂದು 'ರಾಜಕೀಯ ಶಕ್ತಿ'ಯಾಗುವಂತಹ ಪ್ರಾಮಾಣಿಕ ಪ್ರಯತ್ನಗಳನ್ನು ರಾಜಕೀಯ ಪಕ್ಷಗಳು ಮಾಡಿವೆಯೇ? 'ಇಲ್ಲ' ಎನ್ನುವ ಉತ್ತರ ಸ್ಪಷ್ಟವಾಗಿರುವುದರಿಂದಲೇ ಮಹಿಳೆಯರು ಅವರಿಗೆ 'ಓಟಿನ ಶಕ್ತಿ'ಯಾಗಿ ಮಾತ್ರ ಧ್ವನಿಸಿಬಿಡುತ್ತಾರೆ. ಹಾಗಾಗಿ ರಾಜಕಾರಣದ ಜನಪ್ರಿಯತೆಯ ಮೆರವಣಿಗೆಯಲ್ಲಿ ಜನಪ್ರಿಯತೆಯಿಂದ ಓಟು ಗಳಿಸುವ ಒತ್ತಡ ಹೊಂದಿರುವುದರಿಂದ ಎಲ್ಲಾ ರಾಜಕೀಯ ಪಕ್ಷಗಳು 96ರ ಚುನಾವಣೆಯ ಪ್ರಣಾಳಿಕೆಯಲ್ಲಿ ಮಹಿಳೆಯರ ಮೀಸಲಾತಿಯನ್ನು ಬಳಸಿಕೊಂಡವು. ರಾಜಕೀಯ ಪಕ್ಷಗಳ ಜನಪ್ರಿಯತೆಯ ಸೋಗಿನಿಂದಾಗಿಯೇ - ಅವರ ಉದ್ದೇಶ/ಗುರಿಗಳನ್ನು ಚರ್ಚಿಸುವುದು, ರಾಜಕೀಯ ಪಕ್ಷಗಳ ನಿಲುವುಗಳ ಬಗ್ಗೆ ಟೀಕಾತ್ಮಕವಾಗಿರುವುದು - ಸ್ವಾಯತ್ತ ಮಹಿಳಾ ಗುಂಪುಗಳಿಗೆ ಅಗತ್ಯವಾಗುತ್ತದೆ. 181 ಮಹಿಳೆಯರನ್ನು ಲೋಕಸಭೆ/ವಿಧಾನಸಭೆಗೆ ಕಳಿಸುವ 33% ಮೀಸಲಾತಿಯ ಹಿಂದೆ ಮಹಿಳೆಯರನ್ನು ಪುರುಷರಿಗೆ ಸಮಾನರಾಗಿ ಅಲ್ಲದಿದ್ದರೂ ಗಣ್ಯ ರೀತಿಯಲ್ಲಿ ಇಂಡಿಯಾದ ಪ್ರಜಾಪ್ರಭುತ್ವದಲ್ಲಿ ಕಾಣಿಸಿಕೊಳ್ಳುವಂತೆ ಮಾಡುವ ಕ್ರಮ ಸ್ವಾಗತಾರ್ಯವಾದರೂ - ಅನೇಕ ಪ್ರಶ್ನೆಗಳನ್ನು ನಾವು ಸೂಕ್ಷ್ಮವಾಗಿ ಅವಲೋಕಿಸಬೇಕಾಗುತ್ತದೆ. ಮಹಿಳಾ ಮೀಸಲಾತಿಯ ಬಗ್ಗೆ-ಮಾತನಾಡುವ ಪಕ್ಷಗಳು ಅದರ ನಿಜವಾದ ಉದ್ದೇಶ ಈಡೇರುವಿಕೆಯಲ್ಲಿ ಬೇಕಾದ ಸರಿಯಾದ ನಿಲುವು/ಕಾರ್ಯಕ್ರಮಗಳನ್ನು ತಮ್ಮ ಪಕ್ಷಗಳಲ್ಲಿ ರೂಪಿಸಿಕೊಳ್ಳುತ್ತವೆಯೇ? ಇಲ್ಲಿಯವರೆಗೆ ಮಹಿಳೆಯರನ್ನು ಸಾಮಾಜಿಕ/ರಾಜಕೀಯ ಚಟುವಟಿಕೆಗಳಲ್ಲಿ ತೊಡಗಿಸುವಂತಹ ಪ್ರಯತ್ನಗಳನ್ನು ಯಾವುದೇ ರಾಜಕೀಯ ಪಕ್ಷಗಳು ತಮ್ಮ ಉದ್ದೇಶ/ಗುರಿಯನ್ನಾಗಿ ಮಾಡಿಕೊಂಡಿಲ್ಲ. ತಮ್ಮ ಪಕ್ಷಗಳಲ್ಲಿ ಇರುವ ಹೆಂಗಸರು ಕ್ರಿಯಾಶೀಲರಾಗಿ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಲು ಇರುವ ತೊಂದರೆಗಳನ್ನು ಪಕ್ಷಗಳು ಗಮನಿಸುವುದೇ ಇಲ್ಲ. ಮನೆಯಿಂದ-ಆಚೆ ಬರಲು, ಕ್ರಿಯಾಶೀಲರಾಗಲು ಮಹಿಳೆಯರಿಗಿರುವ ತೊಂದರೆಗಳನ್ನು ರಾಜಕೀಯ ಪಕ್ಷಗಳು ತಮ್ಮ ಪಕ್ಷದ ಉದ್ದೇಶಗಳನ್ನಾಗಿ ಮಾಡಿಕೊಂಡಿರುವುದೇ ಇಲ್ಲ. ಕೆಳಹಂತದಲ್ಲಿ ಇಂದು ಚುನಾಯಿತರಾದ ತಮ್ಮ ಪಕ್ಷದ ಮಹಿಳೆಯರ ಸಾಮರ್ಥ್ಯಗಳನ್ನು ಹೆಚ್ಚು ಪಡಿಸುವಂತಹ ಕಾರ್ಯಕ್ರಮಗಳ ಬಗ್ಗೆ ರಾಜಕೀಯ ಪಕ್ಷಗಳು ಗಮನ ವಹಿಸುವುದೇ ಇಲ್ಲ. ಹೆಚ್ಚು ಹೆಚ್ಚು ಮಹಿಳೆಯರನ್ನು ತಮ್ಮ ಪಕ್ಷದ ಸದಸ್ಯರನ್ನಾಗಿ ಮಾಡಿಕೊಳ್ಳುವ ಅಥವಾ ಅವರನ್ನು ಪದಾಧಿಕಾರಿಗಳನ್ನಾಗಿಸಿ ರಾಜಕೀಯ ಜವಾಬ್ದಾರಿ ಹೊರಿಸುವಂತಹ ಪ್ರಯತ್ನಗಳನ್ನೂ ನಡೆಸುವುದು ಕಂಡು ಬರುವುದಿಲ್ಲ. ಮಹಿಳೆಯರಿಗೆ ವಿರೋಧವಾದ ನಡವಳಿಕೆಗಳು ಕುಟುಂಬದಲ್ಲಿ, ರಾಜಕೀಯ ಪಕ್ಷದಲ್ಲಿ ಕಂಡು ಬರುತ್ತವೆ. ಇಂತಹ ವಿರೋಧಾಭಾಸದ ನಡವಳಿಕೆಯ ಬಗ್ಗೆ ಪಕ್ಷಗಳು ಮಾತನಾಡುವುದೇ ಇಲ್ಲ. ಬದಲಾಗಿ ಮೀಸಲಾತಿಯ ಬಗ್ಗೆ ಮಾತನಾಡುತ್ತವೆ. ಇಂದು ರಾಜಕೀಯ ಪಕ್ಷಗಳು ಹಾಗೂ ಮಹಿಳಾ ಗುಂಪುಗಳ ಮುಂದಿರುವ ದೊಡ್ಡ ಸವಾಲೆಂದರೆ ಕುಟುಂಬ, ಕೆಲಸದ ಸಂದರ್ಭ, ಸಂಘಟನೆ - ಇಂತಹ ಎಲ್ಲಾ ಕಡೆಗಳಲ್ಲಿಯೂ ನಾವು ಮಹಿಳೆಯರ ಭಾಗವಹಿಸುವಿಕೆಯನ್ನು ಎಷ್ಟರ ಮಟ್ಟಿಗೆ ಸಮರ್ಥವಾಗಿ ತೊಡಗಿಸುತ್ತೇವೆ ಎಂಬುದು. ರಾಜಕೀಯ ಪಕ್ಷಗಳು ಒಂದೆರಡು ಮಹಿಳಾ ಮೋರ್ಚಾ ಮಾಡುವುದು, ಮುಖ್ಯವಲ್ಲದ ಕೆಲಸಗಳನ್ನು ಅವರಿಗೆ ವಹಿಸುವುದು, ನಿರ್ಧರಿತ ಹಂತಗಳಲ್ಲಿ ಅವರನ್ನು ಒಳಗೊಳ್ಳದಿರುವುದು - ಮಹಿಳೆಯರ ಅಭಿವೃದ್ಧಿಯ ಬಗ್ಗೆಗಿರುವ ಅವರ ನಿರಾಸಕ್ತಿಯನ್ನು ತೋರಿಸುತ್ತದೆ. ಆದರೆ ಚುನಾವಣೆಯ ಸಂದರ್ಭದಲ್ಲಿ ಮಾತ್ರ ಅವರನ್ನು 'ರಾಜಕೀಯ ಶಕ್ತಿ' ಎಂಬಂತೆ ಕಾಣುವ ಮೀಸಲಾತಿಯ ಸೋಗನ್ನು ಹಾಕಿ ಓಟಿನ ತಂತ್ರವನ್ನು ಬಳಸಿಕೊಳ್ಳಲು ಪ್ರಯತ್ನಿಸುತ್ತಾರೆ. 96ರ ಚುನಾವಣೆಯಲ್ಲಿ ಮೀಸಲಾತಿ ಘೋಷಿಸಿಕೊಂಡ ರಾಜಕೀಯ ಪಕ್ಷಗಳಲ್ಲಿ ಮಹಿಳಾ ಅಭ್ಯರ್ಥಿಗಳ ಸಂಖ್ಯೆಯನ್ನು ಗಮನಿಸಿಕೊಂಡರೆ ಸಾಕು - ರಾಜಕೀಯ ಪಕ್ಷಗಳ 'ಮೀಸಲಾತಿ'ಯ ಬಗ್ಗೆಗಿನ ವಿರೋಧಾಭಾಸವಾದ ಕಾಳಜಿಯನ್ನು ನಾವು ಗುರುತಿಸಬಹುದಾಗಿದೆ. ಸಾಮಾಜಿಕ/ರಾಜಕೀಯ ಕ್ಷೇತ್ರಗಳಲ್ಲಿ ಮಹಿಳೆ ಕ್ರಿಯಾಶೀಲಳಾಗಲು ಆತಂಕವಾಗಿರುವ ಮನೆಗೆಲಸದ ಹೊರೆ, ಪಕ್ಷದೊಳಗಿರುವ ಪುರುಷ ಪ್ರಾಧಾನ್ಯತೆ, ಮಹಿಳೆಯ ಚಾರಿತ್ರ್ಯವಧೆ ಇಂತಹ ಸಮಸ್ಯೆಗಳನ್ನು ಪಕ್ಷಗಳು ಕೈಗೆತ್ತಿಕೊಳ್ಳುವುದೇ ಇಲ್ಲ. ಏಕೆಂದರೆ ಇಂತಹ ಸಮಸ್ಯೆಗಳು ಆಮೂಲಾಗ್ರವಾದ ಬದಲಾವಣೆಗಳನ್ನು ನಿರೀಕ್ಷಿಸುತ್ತವೆ. ಈ ಎಲ್ಲಾ ಪ್ರಶ್ನೆಗಳ ಹಿನ್ನೆಲೆಯಲ್ಲಿ ಗಮನಿಸಿದಾಗ ರಾಜಕೀಯ ಪಕ್ಷಗಳು 'ಮೀಸಲಾತಿ'ಯ ಬಗ್ಗೆ ಎಷ್ಟು ಮೇಲುನೋಟ ಆಸಕ್ತಿಗಳನ್ನು, ರಾಜಕೀಯ ತಂತ್ರಗಳನ್ನು ಹೊಂದಿದ್ದಾವೆಂಬುದು ನಮಗೆ ಅರ್ಥವಾಗುತ್ತದೆ. ಹಾಗಾಗಿಯೇ 'ಮೀಸಲಾತಿ' - ಹೇಳುತ್ತಲೇ ತಮ್ಮ ಅಧಿಕಾರದ ಸಂಚಿಗಾಗಿ - ರಾಜಕಾರಣಿಗಳ ಹೆಂಡತಿ/

> ಸಂವಿಧಾನಾತ್ಮಕ ಒತ್ತಡವಿಲ್ಲದಿದ್ದರೆ ಪುರುಷರು ಮಹಿಳೆಯರಿಗೆ ಸ್ಥಳಾವಕಾಶ ಮಾಡಿಕೊಡುವುದಿಲ್ಲ.

ಮಗಳು/ಸೊಸೆಯಂದಿರೇ ಅಧಿಕಾರಕ್ಕೆ ಬರಬಹುದು, ಅಲ್ಲಿ ಪ್ರಾಕ್ಸಿ ರಾಜಕಾರಣಕ್ಕೆ ಅವಕಾಶವಿರುತ್ತದೆ ಎಂಬ ವಿರೋಧಾತ್ಮಕ ಟೀಕೆಗಳು ಕಂಡುಬರುತ್ತವೆ. ಮೀಸಲಾತಿಯನ್ನು ಸ್ವಾಗತಿಸುವ ಹಂತದಲ್ಲಿಯೂ ಸಹ ರಾಜಕೀಯ ಪಕ್ಷಗಳಿರುವ ಜವಾಬ್ದಾರಿ/ಕಾಳಜಿಗಳ ಬಗ್ಗೆ ಪ್ರಶ್ನೆ ಮಾಡುತ್ತಾ ಹೋಗುವುದು, ಮೀಸಲಾತಿ ಅದರ ಸರಿಯಾದ ಉದ್ದೇಶ/ಕಾಳಜಿಯಲ್ಲಿ ವಾಸ್ತವಕ್ಕೆ ಬರಬೇಕೆನ್ನುವ ಒತ್ತಡಗಳನ್ನು ತರುವುದು ಮಹಿಳಾ ಸಂಘಟನೆಯ ಜವಾಬ್ದಾರಿಯಾಗಿದೆ.

ಮೀಸಲಾತಿ - 'ಸಾಂಕೇತಿಕ'ವಾಗುವಲ್ಲಿ ರಾಜ್ಯದ ಪಾತ್ರ

ಮೊದಲೇ ಹೇಳಿದ ಹಾಗೆ ಮೀಸಲಾತಿಯ ಬಗ್ಗೆ ಮಾತನಾಡಬೇಕಾದ ತುರ್ತು ಆಳುವ ಪಕ್ಷ/ಸರ್ಕಾರಕ್ಕಿದೆ. ಇಡಿಯ ದೇಶದ ಆರ್ಥಿಕ ವ್ಯವಸ್ಥೆಯಲ್ಲಿ ರಚನಾತ್ಮಕ ಬದಲಾವಣೆಗಳಾಗುತ್ತಿರುವ ಸಂದರ್ಭದಲ್ಲಿ ಈ ಮೀಸಲಾತಿಯ ಮಾತು ಕೇಳಿ ಬರುತ್ತಿರುವುದು ಆಕಸ್ಮಿಕವೇನಲ್ಲ. ಸ್ಥಳೀಯರಿಗೆ ಸವಲತ್ತು ನೀಡುವ ಸಂದರ್ಭದಲ್ಲಿ ಬ್ಯಾಂಕ್ ಹಾಗೂ ಫಂಡ್‌ಗಳು ಇಂದು ಸರ್ಕಾರೇತರ ಸಂಸ್ಥೆಗಳನ್ನು ಇಂದು ಸರ್ಕಾರಕ್ಕೆ ಪರ್ಯಾಯವಾಗಿ ತೆಗೆದುಕೊಳ್ಳತೊಡಗಿವೆ. ಮೀಸಲಾತಿಯ ಮೂಲಕ ಆಳುವ ಪಕ್ಷ ಮಹಿಳೆ-ಪುರುಷರ ನಡುವೆ ಅಸಮಾನತೆಯನ್ನು ಕಾಪಾಡಿಕೊಂಡು ಹೋಗುವಂತಹ ಅಭಿವೃದ್ಧಿ ಯೋಜನೆಗಳನ್ನು, ಅರ್ಥಮರ್ಥ ಕಾನೂನುಗಳನ್ನು ಮಾಡಿಬಿಡುತ್ತದೆ. ಅಂದರೆ ರಾಜ್ಯ ಯಾವುದೇ ಚಳುವಳಿಯನ್ನು ಅಥವಾ ಜನಾಂಗ/ಪಂಗಡವನ್ನು ತನ್ನ ಬುಟ್ಟಿಗೆ ಹಾಕಿಕೊಳ್ಳಲು ಪ್ರಯತ್ನಿಸುತ್ತದೆ. ಏಕೆಂದರೆ ಆ ಚಳುವಳಿ ಅಥವಾ ಜನಾಂಗ ಸರ್ಕಾರಕ್ಕೆ ಸವಾಲಾಗಿ ಅವರ ಅಧಿಕಾರಕ್ಕೆ ಧಕ್ಕೆ ತರುವಂತದ್ದಾಗಿರುತ್ತದೆ. ಹಾಗಾಗಿ ಯಾವುದೇ ಬಲವತ್ತರವಾದ ಚಳುವಳಿಯನ್ನು ರಾಜ್ಯ ತನ್ನ ಬುಟ್ಟಿಗೆ ಹಾಕಿಕೊಳ್ಳುವ ಯತ್ನವನ್ನು ಮಾಡುತ್ತಲೇ ಇರುತ್ತದೆ. ಮಹಿಳಾ ಚಳುವಳಿ/ದಲಿತ ಚಳುವಳಿ ಅಥವಾ ಆದಿವಾಸಿಗಳ ಚಳುವಳಿ ತುಂಬಾ ಆಮೂಲಾಗ್ರವಾದ ಬದಲಾವಣೆ ಬಯಸುವಂತಹ ಬೇಡಿಕೆಗಳನ್ನು ಮುಂದಿಟ್ಟಾಗ ರಾಜ್ಯವು ಅವುಗಳನ್ನು ಒಪ್ಪಿಕೊಂಡ ರೀತಿಯಲ್ಲಿ ಒಂದು ಭ್ರಮಾತ್ಮಕ ವಾತಾವರಣವನ್ನು ಸೃಷ್ಟಿ ಮಾಡುತ್ತದೆ. ಹಾಗಾಗಿಯೇ ರಾಜ್ಯ 1975ರಲ್ಲಿ ಅಂತರ್‌ರಾಷ್ಟ್ರೀಯ ಮಹಿಳಾ ವರ್ಷದ ಅಂಗವಾಗಿ ಜಾರಿಗೆ ತರಲಾಗದ ಸಮಾನ ವೇತನ ಮಸೂದೆಯನ್ನು ಅಂಗೀಕರಿಸಿ ಜಾರಿಗೆ ತಂದಿತು. 1983ರಲ್ಲಿ ಅತ್ಯಾಚಾರ ಕುರಿತಾದ ಹಲವಾರು ಕಾನೂನುಗಳಲ್ಲಿ ಬದಲಾವಣೆ ಆಯಿತು. ಆದರೆ ಅತ್ಯಾಚಾರ-ವಿರುದ್ಧದ ಚಳುವಳಿಯು ಇಟ್ಟ ಎಲ್ಲಾ ಬೇಡಿಕೆಗಳನ್ನು ರಾಜ್ಯ ಗಮನಕ್ಕೇ ತೆಗೆದುಕೊಳ್ಳಲಿಲ್ಲ. 1986ರ ಅಂತರ್‌ರಾಷ್ಟ್ರೀಯ ಮಹಿಳಾ ದಿನದಂದು ಮಾರ್ಗರೇಟ್ ಆಳ್ವ ಇಂದಿರಾಗಾಂಧಿ ಸಮಾಧಿಯ ಮೇಲೆ ಮಹಿಳಾ ದಿನದ ಅಂಗವಾಗಿ ಪುಷ್ಪಗುಚ್ಛ ಏರಿಸಿದರು. ಅದೇ ವರ್ಷ ಅತೀ ಧಾರುಣವಾದ ಶಾಬಾನು ತೀರ್ಪು ಹೊರಬಿದ್ದು ಮಹಿಳಾ ಸಂಘಟನೆಗಳಿಗೆ ಇಡೀ ದೇಶದ ಮಹಿಳೆಯರಿಗೆ ಶಾಕ್ ಹುಟ್ಟಿಸಿತು. ಈಗ 'ಮೀಸಲಾತಿ ಮಹಿಳಾ ಸಶಕ್ತತೆ'ಯನ್ನು ಮಾತನಾಡುತ್ತಲೇ ರಾಜ್ಯವು ಅನೇಕ ವಿರೋಧಾಭಾಸಗಳನ್ನು ವ್ಯಕ್ತಪಡಿಸುತ್ತಲೇ ಇರುತ್ತದೆ. ಹಾಗಾಗಿ 'ಮೀಸಲಾತಿ' - ಕೇವಲ ಸಾಂಕೇತಿಕವಾದ ಅರ್ಥದಲ್ಲಿ ಮಾತ್ರ ಧ್ವನಿಸಿಬಿಡುತ್ತದೆ. ಹೀಗೆ ವಿರೋಧಾಭಾಸಗಳನ್ನು ವ್ಯಕ್ತಪಡಿಸುತ್ತಲೇ ಬಂದ ರಾಜ್ಯವು 33% ಮೀಸಲಾತಿ ನೀಡುವಾಗ ಸ್ತ್ರೀವಾದಿಗಳು ಜಾಗ್ರತವಾದ ನಿಲುವುಗಳನ್ನು ತೆಗೆದುಕೊಳ್ಳಬೇಕಾಗುತ್ತದೆ. ಮೀಸಲಾತಿಯನ್ನು ಮಹಿಳಾ ಚಳುವಳಿಯ 'ಬದಲಿಗಾಗಿ' ತೆಗೆದುಕೊಳ್ಳಬಾರದು. ಸುಮ್ಮನೇ ಮೀಸಲಾತಿಯ ಪರವಾಗಿರುವುದು ಸ್ತ್ರೀವಾದಿಗಳಿಗೆ ಸುಲಭವಾದ ಕೆಲಸವೇನಲ್ಲ. ಅಂದರೆ ಇದರರ್ಥ ಸ್ತ್ರೀವಾದಿಗಳು ತಮ್ಮ 'ಅಜೆಂಡಾ'ಗಳನ್ನು ಮುಖ್ಯವಾಹಿನಿಗೆ ತರುವುದಾಗುತ್ತದೆ. ಅಂದರೆ ರಾಜ್ಯವು ವ್ಯಕ್ತಪಡಿಸುವ ವಿರೋಧಾಭಾಸಗಳನ್ನು ಇದರೊಂದಿಗೆ ಒಪ್ಪಿಕೊಳ್ಳಬೇಕಾಗುತ್ತದೆ. ವಿಧಾನಸಭೆ/ಲೋಕಸಭೆಗೆ ಚುನಾಯಿತರಾಗುವ ಮಹಿಳೆಯರು ಮಹಿಳಾ ಸಮಸ್ಯೆಗಳಿಗೆ ಹಾಗೂ ಎಲ್ಲಾ ಚರ್ಚೆಗಳಿಗೆ ಬಂದು ಸ್ತ್ರೀವಾದಿ ದೃಷ್ಟಿಕೋನ ನೀಡಬೇಕಾಗುತ್ತದೆ. ಹಾಗಿಲ್ಲವಾದರೆ ರಾಜ್ಯವು ಮಹಿಳೆ/ಪುರುಷರನ್ನು ಪ್ರತ್ಯೇಕಿಸುವಂತಹ ಯೋಜನಾ ಅಭಿವೃದ್ಧಿ/ನೀತಿಗಳ ಜೊತೆಗೆ ಮಹಿಳಾ ಚಳುವಳಿಗೆ 'ಮೀಸಲಾತಿ'ಯನ್ನು 'ಬದಲಾಗಿ' ನೀಡಿ ಚಳುವಳಿಯನ್ನು ತಡೆಯಲು ಅಥವಾ ತನ್ನ ಬುಟ್ಟಿಗೆ ಹಾಕಿಕೊಳ್ಳುವುದನ್ನು ಯಶಸ್ವಿಯಾಗಿ ನಡೆಸುತ್ತದೆ. ಪ್ರಸ್ತುತ ರಾಜಕಾರಣದಲ್ಲಿ ಮಹಿಳೆಯರು ರಾಜಕೀಯದಲ್ಲಿ ಭಾಗವಹಿಸಲು ಸಾಧ್ಯವಾಗದೇ ಇರುವಂತಹ ವಾತಾವರಣದ ಹಂತದಲ್ಲಿ ನಾವು ಮೀಸಲಾತಿಯನ್ನು ಸ್ವಾಗತಿಸಿದ್ದಾಗ್ಯೂ ಕೂಡಾ ಅದು ಚಳುವಳಿ ಬಯಸುವ ಆಮೂಲಾಗ್ರ ಬದಲಾವಣೆಗೆ 'ಬದಲಿಯಾಗಿ' ಅಲ್ಲ ಎಂಬುದನ್ನು ನಾವು ಸ್ಪಷ್ಟಪಡಿಸ ಬೇಕಾಗುತ್ತದೆ.

ಮಹಿಳಾ ಮೀಸಲಾತಿಯ ಬಗ್ಗೆಗಿನ ಪರ/ವಿರೋಧಗಳು

ಮಹಿಳಾ ಮೀಸಲಾತಿಯ ಬಗ್ಗೆಗಿನ ಮುಖ್ಯವಾದ ಪರ/ವಿರೋಧಗಳನ್ನು ಇಲ್ಲಿ ಗುರುತಿಸಲು ಪ್ರಯತ್ನಿಸಿದ್ದೇವೆ.

1. 33% ಮೀಸಲಾತಿಯಿಂದಾಗಿ ರಾಜಕೀಯ ಪಕ್ಷಗಳು ಮಹಿಳೆಯರಿಗೆ ಪಕ್ಷದಿಂದ ಟಿಕೇಟ್ ಕೊಡಬೇಕಾಗುತ್ತದೆ. ಹಾಗಾಗಿ ಮಹಿಳೆಯರು ರಾಜಕೀಯದ ಮುಖ್ಯವಾಹಿನಿಯಲ್ಲಿ

ಅನಿವಾರ್ಯವಾಗಿ ಭಾಗವಹಿಸುತ್ತಾರೆ - ಎಂಬುದು ಒಂದು ವಾದವಾದರೆ ಈಗಿರುವ ಸ್ಥಿತಿಯಲ್ಲಿ ರಾಜಕೀಯ ಧುರೀಣರ ಹೆಂಡತಿ/ಮಗಳು/ಸೊಸೆ ಮೀಸಲಾತಿಯನ್ನು ಕಬಳಿಸಿಬಿಡುತ್ತಾರೆ ಎನ್ನುವುದು ವಿರೋಧದ ಧ್ವನಿಯಾಗಿದೆ. ಪ್ರಾಕ್ಸಿ ರಾಜಕಾರಣ ದಿಂದಾಗಿ ಮಹಿಳೆಯರು ರಾಜಕೀಯ ನಾಯಕಿಯರಾಗು ವುದಕ್ಕಿಂತ ಅವರ ಹಿಂದಿರುವ ಗಂಡಸರೇ ರಾಜಕೀಯ ಸೂತ್ರಧಾರಿಗಳಾಗಿ ಬಿಡುತ್ತಾರೆ. ಈ ವಾದವನ್ನೂ ತಳ್ಳಿ ಹಾಕಿ ಪುರುಷ ರಾಜಕಾರಣಿಯ ಮಗ/ಅಳಿಯ ಇತರ ಸಂಬಂಧಿಗಳು ಪಾಲುಗೊಳ್ಳುತ್ತಿರುವಾಗ ಹೆಂಗಸರಿಗೆ ಮಾತ್ರ ಇದು ವಿಶೇಷವೇ ಎನ್ನುತ್ತಾರೆ. ಮೀಸಲಾತಿಯನ್ನು ತಡೆಗಟ್ಟುವುದಕ್ಕೆ, ಹೆಂಗಸರ ಪ್ರವೇಶವನ್ನು ತಡೆಗಟ್ಟುವುದಕ್ಕೆ ಇದೊಂದು ನೆಪ ಅಷ್ಟೇ ಎಂದು ಹೇಳಲಾಗುತ್ತಿದೆ.

2. 'ರೊಟೇಶನ್' - ಪದ್ಧತಿಯಿಂದ, ಲಾಟರಿ ಮೂಲಕ ಕ್ಷೇತ್ರಗಳನ್ನು ಮೀಸಲಾತಿಗೆ ಆಯ್ಕೆ ಮಾಡುವುದರಿಂದ - ಎರಡು ಚುನಾವಣೆ ಅಂದರೆ ಹತ್ತು ವರ್ಷಗಳ ಅವಧಿಯಲ್ಲಿ ತನ್ನ ಕ್ಷೇತ್ರದಲ್ಲಿ ಸಾಧನೆ ಸಾಧಿಸುವ ಮಹಿಳಾ ಅಭ್ಯರ್ಥಿಯು ನಂತರದ ಅವಧಿಯಲ್ಲಿ ಭರವಸೆಯಿಂದ ಸಾಮಾನ್ಯ ಚುನಾವಣೆಯಲ್ಲಿ ಸ್ಪರ್ಧಿಸಲು ಸಾಧ್ಯವಾಗುತ್ತದೆ ಎನ್ನುವ ವಾದಕ್ಕೆ ವಿರೋಧವಾದ ಅಭಿಪ್ರಾಯವೂ ಇದೆ. ಒಂದು ಕಡೆ ತನ್ನ ಬೇಸ್ ಕಂಡುಕೊಳ್ಳುವ ಅಭ್ಯರ್ಥಿಯು ಮತ್ತೊಂದು ಕಡೆ ಸ್ಪರ್ಧಿಸಲಾರದೇ ರಾಜಕಾರಣದಿಂದ ಹಿಂದೆ ಸರಿಯುತ್ತಾರೆ ಎಂಬ ಮೂಲಕ ರೊಟೇಶನ್/ಲಾಟರಿ ಪದ್ಧತಿಯ ಬಗ್ಗೆ ಆತಂಕ ವ್ಯಕ್ತಪಡಿಸಲಾಗಿದೆ.

3. 181 ಮಹಿಳೆಯರು ಸಂವಿಧಾನ/ಲೋಕಸಭೆ ಪ್ರವೇಶಿಸುವುದರಿಂದ ಇಂಡಿಯಾದ ಪ್ರಜಾಪ್ರಭುತ್ವದಲ್ಲಿ ಮಹಿಳೆಯರು ಗಣನೀಯವಾಗಿ ಕಾಣಿಸಿಕೊಳ್ಳುತ್ತಾರೆ ಹಾಗೂ ಮುಖ್ಯ ಪಾತ್ರ ವಹಿಸುತ್ತಾರೆ ಎಂಬ ಅಭಿಪ್ರಾಯಕ್ಕೆ ವ್ಯತಿರಿಕ್ತವಾಗಿ ಹೀಗೆ ಬರುವ ಮಹಿಳೆಯರಿಗೆ ರಾಜಕೀಯ ಅನುಭವವೇ ಇರುವುದಿಲ್ಲ. ಹಾಗಾಗಿ ಪ್ರಾಕ್ಸಿ ರಾಜಕಾರಣದಿಂದಾಗಿ ಪುರುಷರೇ ನಿಜವಾದ ನಾಯಕರಾಗಿಬಿಡುತ್ತಾರೆ.

4. ಇಂದು ಸಾಮಾನ್ಯ ಚುನಾವಣೆಯಲ್ಲಿ ಸ್ಪರ್ಧಿಸಲು ಮಹಿಳೆಯರಿಗೆ ಸಾಧ್ಯವೇ ಆಗದಂತಹ ರಾಜಕೀಯ ಸ್ಥಿತಿ ನಮ್ಮಲ್ಲಿರುವುದರಿಂದ ಈ ಮೀಸಲಾತಿ ಬಹುಮಂದಿ ಮಹಿಳೆಯರು ರಾಜಕಾರಣಕ್ಕೆ ಬರಲು ಸಾಧ್ಯವಾಗುತ್ತದೆ ಎಂಬುದೊಂದು ವಾದವಾದರೆ ಹೆಂಗಸರ ವಿರುದ್ಧ ಹೆಂಗಸರೇ ಸ್ಪರ್ಧಿಸುವುದರಿಂದ ಸಾಂಪ್ರದಾಯಿಕವಾಗಿರುವ 'ಹೆಂಗಸರಿಗೆ ಹೆಂಗಸರೇ ವಿರುದ್ಧ' - ಎನ್ನುವಂತಹ ಅಭಿಪ್ರಾಯವನ್ನು ಇದು ಬಲಪಡಿಸುತ್ತದೆ ಎನ್ನುವ ಅಭಿಪ್ರಾಯವೂ ವ್ಯಕ್ತಗೊಂಡಿದೆ.

5. ಮಹಿಳೆಯರು ಅಧಿಕಾರಕ್ಕೆ ಬಂದರೆ ಮಹಿಳಾ ಪ್ರಶ್ನೆಗಳು ಹೆಚ್ಚು ಹೆಚ್ಚು ಪ್ರಾಮುಖ್ಯತೆ ಗಳಿಸುತ್ತವೆ ಎನ್ನುವುದು ಮೀಸಲಾತಿಯ ಪರವಾಗಿರುವ ವಾದವಾದರೆ ಆಯ್ಕೆಯಾದ ಮಹಿಳೆಯರು ಮಹಿಳೆಯರ ಪರವಾಗಿಯೇ ಇರುತ್ತಾರೆ ಎಂಬುದನ್ನು ನಿರೀಕ್ಷಿಸುವುದಕ್ಕಾಗುವುದಿಲ್ಲ. ಇರುವ ವ್ಯವಸ್ಥೆಯಲ್ಲಿ ಪುರುಷರ ಮೌಲ್ಯಗಳನ್ನೇ ಅಳವಡಿಸಿಕೊಳ್ಳುವ ಸಾಧ್ಯತೆಗಳಲ್ಲಿ - ಚುನಾಯಿತಗೊಂಡ ಮಹಿಳೆಯರು ಮಹಿಳೆಯರ ಪ್ರಶ್ನೆಗಳಿಗೆ ಸ್ಪಂದಿಸದೇ ಹೋಗಬಹುದು ಎನ್ನುವ ವಾದವೂ ಇದೆ.

6. ಮೀಸಲಾತಿಗೆ ಇರುವ ಮುಖ್ಯವಾದ ವಿರೋಧವೆಂದರೆ ಹಿಂದುಳಿದ ವರ್ಗ/ಪಂಗಡದ ಮಹಿಳೆಯರಿಗೂ 33% ಮೀಸಲಾತಿ ನೀಡಬೇಕೆಂಬುದು. ಪರಿಶಿಷ್ಟ ಜಾತಿ/ವರ್ಗದವರಿಗೆ ಮೀಸಲಾತಿ ಇರುವುದರಿಂದ 33% ಮೀಸಲಾತಿಯಲ್ಲಿ ಅವರಿಗೆ ಮೀಸಲಾತಿ ಸಿಗುತ್ತದೆ. ಹಿಂದುಳಿದ ವರ್ಗ/ಪಂಗಡಗಳಿಗೆ ಮೀಸಲಾತಿ ನೀಡಬೇಕು ಎನ್ನುವ ಲಾಬಿಯು ಮಹಿಳೆಯರ 33% ಮೀಸಲಾತಿಯನ್ನು ತೀವ್ರವಾಗಿ ವಿರೋಧಿಸುತ್ತದೆ. ಆದರೆ ಹಿಂದುಳಿದ ವರ್ಗ/ಪಂಗಡಗಳಿಗೆ ಸಾಮಾನ್ಯ ಮೀಸಲಾತಿ ಸಿಕ್ಕಾಗ 33% ಮಹಿಳಾ ಮೀಸಲಾತಿಯಲ್ಲಿಯೂ ಆ ವರ್ಗದ ಮಹಿಳೆಯರು ಮೀಸಲಾತಿ ಪಡೆಯುತ್ತಾರೆ. ಹಾಗಾಗಿ ಮಹಿಳೆಯರ ಮೀಸಲಾತಿಗೆ ಧಕ್ಕೆ ತರಲು, ಅದನ್ನು ಜಾರಿಗೆ ಬರದಂತೆ ಮಾಡಲು ಹಿಂದುಳಿದ ವರ್ಗ/ಪಂಗಡದ ಮೀಸಲಾತಿಯನ್ನು ನೆಪವಾಗಿ ಬಳಸಿಕೊಳ್ಳಲಾಗುತ್ತಿದೆ ಎಂಬ ಆರೋಪವನ್ನು ಮೀಸಲಾತಿಯ ಪರವಾಗಿರುವವರು ಮಾಡುತ್ತಾರೆ.

ಸ್ತ್ರೀವಾದಿಗಳ ನಿಲುವು ಹಾಗೂ 'ಮಾನಸ'ದ ಅಭಿಪ್ರಾಯಗಳು

ಮೀಸಲಾತಿ ಬರಿಯ ಕಲ್ಯಾಣಾಭಿವೃದ್ಧಿ ಅಲ್ಲ - 81ರ ಸಂವಿಧಾನದ ತಿದ್ದುಪಡಿಯು ಸ್ತ್ರೀವಾದಿಗಳು ಹಾಗೂ ರಾಜ್ಯದ ನಡುವಿನ ಹೋರಾಟ. ರಾಜ್ಯವು ಸ್ತ್ರೀವಾದಿಗಳಿಗೆ ಸೋಲುವ ಹಂತದಲ್ಲಿ ಪುರುಷರ ವಿರೋಧದ ಒಂದು ಸ್ಥಿತಿಯನ್ನು ಹುಟ್ಟು ಹಾಕುತ್ತಿದೆ. ಹಾಗಾಗಿ ಇಂದು ಮಹಿಳೆಯರ ಪರವಾಗಿರುವ ಯಾವುದೇ ಯೋಜನೆಗಳು/ಕಾನೂನುಗಳು ಸ್ತ್ರೀವಾದಿಗಳು ಹಾಗೂ ರಾಜ್ಯದ ವಿವಿಧ ಘಟಕಗಳ ನಡುವೆ ಸಂಘರ್ಷ ಹುಟ್ಟು ಹಾಕುತ್ತಿದೆ. ಸ್ತ್ರೀವಾದಿಗಳು ಹಾಗೂ ಮಹಿಳೆಯರ ನಡುವಿನ ಗೆರೆ ಅಳಿಸಿ ಹೋಗುತ್ತಿರುವ ಸಂದರ್ಭದಲ್ಲಿ ಮೀಸಲಾತಿ ಅತ್ಯಗತ್ಯ ಹಾಗೂ 81ನೆಯ ಸಂವಿಧಾನದ ತಿದ್ದುಪಡಿ ಅಂಗೀಕಾರವಾಗದಿದ್ದಲ್ಲಿ ಅಲ್ಲಿ ತುಂಬಾ ಗಂಭೀರವಾದ ಪರಿಸ್ಥಿತಿ ನಿರ್ಮಾಣವಾಗುತ್ತದೆ ಎನ್ನುತ್ತಾರೆ ವಸಂತ ಕಣ್ಣಬೀರನ್ ಹಾಗೂ ಕಲ್ಪನಾ ಕಣ್ಣಬೀರನ್. 'ಮಾನುಷಿ'ಯ ಸಂಪಾದಕಿ

ಮಧುಕೇಶ್ವರ್‌ರವರು ಇತರ ದೇಶಗಳಲ್ಲಿಯಂತೆ ಇಲ್ಲಿನ ರಾಜಕೀಯ ಪಕ್ಷಗಳಲ್ಲೂ ಮಹಿಳೆಯರಿಗೆ ಮೀಸಲಾತಿ ಇರಬೇಕೆಂದು ವಾದಿಸುತ್ತಾರೆ. ರಾಜಕೀಯ ಪಕ್ಷದಲ್ಲಿನ ಮೀಸಲಾತಿಯಿಂದಾಗಿ ಪಕ್ಷಗಳ ಹಂತದಲ್ಲಿಯೇ ಮಹಿಳೆಯರು ಹೆಚ್ಚು ಹೆಚ್ಚಾಗಿ ರಾಜಕೀಯ ಪರಿಣಿತಿ ಪಡೆಯುತ್ತಾರೆ ಎಂದು ಇವರು ಅಭಿಪ್ರಾಯ ಪಡುತ್ತಾರೆ. ಮಹಿಳೆಯರು ಎಲ್ಲಾ ಹೋರಾಟಗಳಲ್ಲಿಯೂ ಹೋರಾಡಿದ್ದಾರೆ. ಈ ಹೋರಾಟಕ್ಕೆ ಅವರಿಗೆ ಪ್ರತಿಫಲ ಸಿಕ್ಕಬೇಕು. ಹಾಗಾಗಿ ಅವರಿಗೆ ಮೀಸಲಾತಿಯ ಹಕ್ಕಿದೆ. 81ನೇ ಸಂವಿಧಾನದ ತಿದ್ದುಪಡಿಯ ಅಂಗೀಕಾರ ಪುರುಷರ ರಾಜಕೀಯ ಭದ್ರತೆಯನ್ನು ಅಲುಗಾಡಿಸುತ್ತದೆ. ಈಗಿರುವ ಸಾಮಾಜಿಕ ವ್ಯವಸ್ಥೆಯಲ್ಲಿ ಇರುವ ಸಾಮಾಜಿಕ - ರಾಜಕೀಯ ಪಟ್ಟಭದ್ರತೆಯನ್ನು ಅಲುಗಾಡಿಸುತ್ತದೆ. ಹಾಗಾಗಿ ಮೀಸಲಾತಿಗೆ ಹಲವಾರು ರೀತಿಯ ವಿರೋಧಗಳಿವೆ. ಆದರೆ ಮಹಿಳೆಯರ ಪರವಾದ ಆಸಕ್ತಿಗಳನ್ನು ರಾಜಕೀಯ ಆಸಕ್ತಿಗಳಿಗಾಗಿ ಬಿಟ್ಟು ಕೊಡಬಾರದೆಂದು ಹಲವಾರು ಸ್ತ್ರೀವಾದಿಗಳು ಅಭಿಪ್ರಾಯಪಡುತ್ತಾರೆ.

ಭಾರತೀಯ ಮಹಿಳೆಯರ ನಿತ್ಯ ಜೀವನದ ಬದಲಾವಣೆಯ ಹಂತದಲ್ಲಿ ಮೀಸಲಾತಿಯನ್ನು ನೋಡಬೇಕಾಗುತ್ತದೆಯೆಂದು ದೆಹಲಿಯ ಸ್ವಾಯತ್ತ ಮಹಿಳಾ ಸಂಘಟನೆಯಾದ 'ಸಹೇಲಿ'ಯು ಅಭಿಪ್ರಾಯಪಡುತ್ತದೆ. ಇಷ್ಟು ವರ್ಷಗಳಲ್ಲಿ ರಾಜ್ಯವು ಹೆಂಗಸರ ವಿರುದ್ಧದ ಹಿಂಸೆಯನ್ನಾಗಲೀ, ಇಳಿಮುಖವಾಗುತ್ತಿರುವ ಹೆಣ್ಣು ಮಕ್ಕಳ ಸಂಖ್ಯೆಯ ಬಗ್ಗೆಯಾಗಲೀ, ಲೈಂಗಿಕ ಕಿರುಕುಳದ ಬಗ್ಗೆಯಾಗಲೀ, ವೈಯಕ್ತಿಕ ಕಾನೂನುಗಳ - ಬಗ್ಗೆಯಾಗಲೀ ಏನನ್ನೂ ಮಾಡಿಲ್ಲ. ಈಗ 33% ಮೀಸಲಾತಿಯ ಬಗ್ಗೆ ಮಾತನಾಡುತ್ತಿದೆ. ಇದನ್ನು ವಿಶಾಲವಾದ ಚೌಕಟ್ಟಿನಲ್ಲಿ ನೋಡಬೇಕೆಂದು ಇವರು ಅಭಿಪ್ರಾಯಪಡುತ್ತಾರೆ. ಯಾಕೆ ಕೇವಲ 33% ಎನ್ನುವ ಇವರು ರಾಜಕೀಯ ಪಕ್ಷಗಳು ಮಹಿಳೆಯರನ್ನು ತಮ್ಮ ಪಕ್ಷಗಳಲ್ಲಿ ಹೆಚ್ಚಿಸುವಂತಹ ಯಾವುದೇ ಒತ್ತಡ ಮಸೂದೆಯಲ್ಲಿಲ್ಲದಿರುವುದು 33% ಮಸೂದೆಯ ಮಿತಿ ಎನ್ನುತ್ತಾರೆ. ಇಡಿಯ ರಾಜಕಾರಣವೇ ಬದಲಾಗಿ ಮಹಿಳೆಯರ ನಿತ್ಯ ಜೀವನದಲ್ಲಿ ಬದಲಾವಣೆ ತರುವಂತಾಗಬೇಕು. ಮೀಸಲಾತಿಯು ಮಹಿಳಾ ಚಳುವಳಿಯನ್ನು ತನ್ನ ಬುಟ್ಟಿಗೆ ಹಾಕಿಕೊಂಡು ಬಿಡುವ ಸಂಭವವೇ ಹೆಚ್ಚು. ಲೋಕಸಭೆಗೆ ಆಯ್ಕೆಯಾದ ಮಹಿಳೆಯರು ಮಹಿಳಾ ಚಳುವಳಿಯ ಧ್ವನಿಯನ್ನು ಬಲಪಡಿಸುವಂತಾಗಬೇಕು ಎಂಬ ಅಭಿಪ್ರಾಯ ಸಹೇಲಿಯವರದು. ಈಗಿರುವ ರಾಜಕಾರಣದಲ್ಲಿ ಕೆಲವೇ ಮಹಿಳೆಯರು ಸ್ವಚ್ಛವಾದ, ಮೌಲ್ಯಾಧಾರಿತ ರಾಜಕೀಯ ನಡೆಸುತ್ತಾರೆ ಎನ್ನುವುದು ಸಾಧ್ಯವಿಲ್ಲದ ಮಾತು. ಜೊತೆಗೆ ಮಹಿಳೆಯರಿದ್ದರೆ ಸಾಕು, ಅಲ್ಲಿ ಬದಲಾವಣೆ ಆಗಿ ಬಿಡುತ್ತದೆ ಎನ್ನುವ ಮಾತೂ ಕೂಡಾ ಸುಳ್ಳು. ಚಳುವಳಿಯಿಂದ ಮಾತ್ರ ಯಾವುದೇ ಮಹತ್ತರ ಬದಲಾವಣೆ ಸಾಧ್ಯ. ಮೀಸಲಾತಿಯು ಮಹಿಳಾ ಚಳುವಳಿಯ ಅಲ್ಪಾವಧಿಯ ಅಥವಾ ಧೀರ್ಘಕಾಲದ ತಂತ್ರಗಳು ಮಾತ್ರ ಆಗಬಹುದು. ಮಹಿಳೆಯರ ಸಮಾನತೆ ಹಾಗೂ ಹಕ್ಕುಗಳಲ್ಲಿ ಮೂಲಭೂತ ಬದಲಾವಣೆಯಾಗಬೇಕು. ಇದು ಮಹಿಳಾ ಚಳುವಳಿಯಿಂದ ಮಾತ್ರ ಸಾಧ್ಯ. ಅಧಿಕಾರದಲ್ಲಿರುವ ಮಹಿಳೆಯರು ಸಾಮಾಜಿಕ ಬದಲಾವಣೆಯಲ್ಲಿ ಯಾವ ರೀತಿಯ ಪಾತ್ರ ವಹಿಸುತ್ತಾರೆ ಎಂಬುದನ್ನು ಕಾದು ನೋಡಬೇಕಾಗಿದೆ ಎನ್ನುವುದು 'ಸಹೇಲಿ'ಯವರ ಅಭಿಪ್ರಾಯ.

ರಾಜ್ಯದ ವಿರೋಧಾಭಾಸಗಳನ್ನು ಹಾಗೂ 'ಸಾಂಕೇತಿಕ' ಮೀಸಲಾತಿಯಿಂದ ಮಹಿಳಾ ಚಳುವಳಿಯನ್ನು ಅಶಕ್ತಗೊಳಿಸುವ, ಮೀಸಲಾತಿಯನ್ನು ಕಬಳಿಸಿಬಿಡುವ 'ಮೀಸಲಾತಿ' - ಯಂತಹ ಪ್ರಯತ್ನಗಳು ಪ್ರಶ್ನಾರ್ಹವಾದರೂ ಇರುವ ಪ್ರಸ್ತುತ ವ್ಯವಸ್ಥೆಯಲ್ಲಿ 'ಮೀಸಲಾತಿ' ಬಹುತೇಕ ಮಹಿಳೆಯರ ರಾಜಕೀಯ ಪ್ರವೇಶಕ್ಕೆ ಅನುವು ಮಾಡಿಕೊಡುತ್ತದೆ ಎಂಬ ಹಂತದಲ್ಲಿ 'ಮಾನಸ' ಮೀಸಲಾತಿಯನ್ನು ಸ್ವಾಗತಿಸುತ್ತದೆ. ಆದರೆ ರಾಜ್ಯ ಸ್ತ್ರೀವಾದಿಗಳ ಭಾಷೆಯನ್ನೇ ಬಳಸಿಕೊಳ್ಳುತ್ತಿರುವುದರಿಂದ - ನಮಗೊಂದು ಸವಾಲಾಗಿಯೇ ಈ ಪ್ರಶ್ನೆ ಕಾಣಿಸಿಕೊಳ್ಳುತ್ತದೆ. ಮಹಿಳಾ ಚಳುವಳಿಯ ಮುಂದೆ ಬರುವ ಸವಾಲುಗಳು ಸಂಕೀರ್ಣ ಸ್ವರೂಪದವುಗಳಾಗಿರುತ್ತವೆಯೆಂದು 'ಮಾನಸ' ಭಾವಿಸುತ್ತದೆ. ನಾವು ಹೇಳುತ್ತಿರುವುದು, ನಂಬಿರುವುದು - ರಾಜ್ಯ ಹೇಳುತ್ತಿರುವುದಕ್ಕಿಂತ ಭಿನ್ನ ಎಂಬುದನ್ನು ನಾವು ಸ್ಪಷ್ಟಪಡಿಸಬೇಕಾಗುತ್ತದೆ. 'ಸಮಾನ ನಾಗರಿಕ ಸಂಹಿತೆ'ಯ ಬೇಡಿಕೆಯಲ್ಲಿಯೂ ಸಹ ನಾವು ಕೇಳುತ್ತಿರುವ 'ಲಿಂಗ ಸಮಾನತೆ' - ಕೋಮುವಾದಿಗಳ ಬೇಡಿಕೆಗಳಿಗಿಂತ ಭಿನ್ನ ಎಂಬುದನ್ನು ಸ್ಪಷ್ಟಪಡಿಸಿದ್ದೇವೆ. ಪಿತೃಪ್ರಧಾನತೆಯ ಶೋಷಿತ ಸ್ವರೂಪವನ್ನು ಎತ್ತಿ ಹಿಡಿದ 15 ವರ್ಷಗಳ ಹಿಂದೆ - ಮಹಿಳಾ ಚಳುವಳಿ ಕಾರ್ಮಿಕ ಚಳುವಳಿಯನ್ನು ಮುರಿಯುತ್ತದೆ ಎಂಬ ಆರೋಪ ಕೇಳಿ ಬಂತು. ಈಗ ಮೀಸಲಾತಿಯ ಸಂದರ್ಭದಲ್ಲಿ ಎಲ್ಲಾ ರಾಜಕೀಯ ಪಕ್ಷಗಳೂ ಮಹಿಳೆಯ ಹಿಂದುಳಿದಿರುವುದಕ್ಕೆ ಪಿತೃಪ್ರಾಧಾನ್ಯತೆಯೇ ಕಾರಣವೆಂದು ಸ್ತ್ರೀವಾದಿಗಳಿಗಿಂತ ಜೋರಾಗಿ ಹೇಳುತ್ತಾರೆ. ಹೀಗೆ ನಮ್ಮ ಭಾಷೆ/ಉದ್ದೇಶಗಳನ್ನು ತಮ್ಮ ಉದ್ದೇಶಗಳಿಗಾಗಿ ಬಳಸಿಕೊಳ್ಳುವ ರಾಜ್ಯದ, ಪಕ್ಷಗಳ ತಂತ್ರಗಳ ಬಗ್ಗೆ ನಾವು ಜಾಗರೂಕವಾಗಿ ಇರಬೇಕಾಗುತ್ತದೆ. ಮಹಿಳೆಯರ ಸಮಸ್ಯೆಗಳನ್ನು ಮಹಿಳೆಯರು ಅರ್ಥಮಾಡಿಕೊಳ್ಳಬಲ್ಲರು ಎಂಬುದನ್ನು ಈಗ ಎಲ್ಲರೂ ಮಾತನಾಡುತ್ತಾರೆ. ಈ ಅರ್ಥದಲ್ಲಿಯೇ ಮಹಿಳಾ ಗುಂಪುಗಳು ಪ್ರಾರಂಭವಾದಾಗ ಮಹಿಳೆಯರನ್ನು,

ಸ್ತ್ರೀವಾದಿಗಳನ್ನು 'ಪ್ರತ್ಯೇಕ ವಾದಿಗಳು' ಎಂದು ಎಲ್ಲಾ ಪಕ್ಷಗಳು ಆರೋಪಿಸಿದ್ದವು. ಈಗ ಎಲ್ಲಾ ಪಕ್ಷಗಳೂ ಈ ಮಾತನ್ನೇ ಹೇಳುತ್ತಿವೆ. ಇಂದು ಕಲುಷಿತಗೊಂಡಿರುವ ರಾಜಕೀಯ ವಾತಾವರಣವನ್ನು ಸುಧಾರಿಸುವುದು ಮಹಿಳೆಯರ ಹೊರೆಯೇ? ಇಲ್ಲಿಯೂ ಮಹಿಳೆಯರು ಪಾಪ ತೊಳೆಯುವ ಪಾಪನಾಶಿನಿಯರ ಸಾಂಪ್ರದಾಯಕ ಪಾತ್ರವನ್ನೇ ವಹಿಸಬೇಕೇ? ಮಹಿಳೆಯರ ಪ್ರಶ್ನೆಗಳ ಹೊರೆ ಮಹಿಳೆಯದಷ್ಟೇ ಅಲ್ಲ, ಪ್ರಜ್ಞಾವಂತರಾಗಿರುವ ಎಲ್ಲರ ಕರ್ತವ್ಯವೂ ಇದಾಗಿದೆ. ಯಾಕೆಂದರೆ ಎಂತಹ ಮಹಿಳೆಯರು 'ಅಧಿಕಾರ' ಹೊಂದುತ್ತಾರೆ ಎಂಬುದನ್ನು ನಾವು ವಿಶ್ಲೇಷಿಸಿ ನೋಡಬೇಕಾಗುತ್ತದೆ. ಪುರುಷ ಪ್ರಾಧಾನ್ಯತೆಯ ಮೌಲ್ಯಗಳನ್ನೇ ರೂಢಿಸಿಕೊಂಡಿರುವ ಮಹಿಳೆಯರಿಂದ ನಾವು ನಿರೀಕ್ಷಿಸಬಹುದಾದರೂ ಏನನ್ನು? ಹಾಗಾಗಿ ಮಹಿಳಾ ಚಳುವಳಿಯ ಉದ್ದೇಶ/ಗುರಿಗಳು ರಾಜ್ಯದ ಜನಪ್ರಿಯತೆಯ ರಾಜಕಾರಣದ ವಾಹಿನಿಯಲ್ಲಿ ಸೇರಿ ಹೋಗದಂತೆ ನಾವು ಎಚ್ಚರಿಕೆ ವಹಿಸಬೇಕು. ಚಳುವಳಿಗೆ ಮೂಲಭೂತ ಬದಲಾವಣೆ ಆಶಿಸುವ, ತರುವ ಶಕ್ತಿಯಿದೆ. ಮೀಸಲಾತಿ ಚಳುವಳಿಗೆ ಬದಲಾಗಿ ರೂಪುಗೊಳ್ಳದಂತೆ ನಾವು ನೋಡಿಕೊಳ್ಳಬೇಕು. ಹಾಗಾಗಿ ಮೀಸಲಾತಿಯನ್ನು ಸ್ವಾಗತಿಸಿದ್ದಾಗ್ಯೂ ಕೂಡಾ ಅದನ್ನು ಮುಖ್ಯ 'ಅಜೆಂಡಾ' ಆಗಿ ಇಟ್ಟು ಹೋರಾಡುವುದನ್ನು ಮಾನಸ ಅಲ್ಲಗೆಳೆಯುತ್ತದೆ. ಪ್ರಸ್ತುತ ರಾಜಕಾರಣದಲ್ಲಿ ಮೇಲ್ವರ್ಗ/ಮೇಲ್ಜಾತಿ ಮಹಿಳೆಯರೇ 'ಮೀಸಲಾತಿ' ಕಬಳಿಸಿ ಬಿಡುವ ಸಾಧ್ಯತೆಗಳಿರುವುದರಿಂದ ಸಾಮಾನ್ಯವಾಗಿ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ವರ್ಗಗಳಿಗಿರುವ ಮೀಸಲಾತಿ 33% ಮಹಿಳಾ ಮೀಸಲಾತಿಯಲ್ಲೂ ಇರಬೇಕು ಎಂಬುದು 'ಮಾನಸ'ದ ನಿಲುವು. ರಾಜಕೀಯ ಬಿಕ್ಕಟ್ಟು ತೀವ್ರವಾಗಿರುವ ಈ ಸಂದರ್ಭದಲ್ಲಿ ಈ ದೇಶದ ರಾಜಕಾರಣ ಮಹಿಳೆಯರಿಗೆಷ್ಟು ನ್ಯಾಯ ಒದಗಿಸುತ್ತದೆ ಎಂಬುದನ್ನು ನಾವು ಕಾದು ನೋಡಬೇಕಾಗಿದೆ.

●

ಉನ್ನತಮಟ್ಟದಲ್ಲಿ ನಿರ್ಧಾರ ಕೈಗೊಳ್ಳುವ ಸಮಿತಿಗಳಲ್ಲಿ ಮಹಿಳೆಯರ ಭಾಗವಹಿಸುವಿಕೆ

ಪಕ್ಷ	ಸಮಿತಿ	ಒಟ್ಟು ಸಂಖ್ಯೆ	ಮಹಿಳೆಯರ ಸಂಖ್ಯೆ	ಶೇಕಡಾವಾರು ಮಹಿಳೆಯರು
ಸಿ.ಪಿ.ಎಂ.	ಪಾಲಿಟ್‌ಬ್ಯೂರೊ	15	0	0
	ಸೆಂಟ್ರಲ್ ಕಮಿಟಿ	70	5	7
ಸಿ.ಪಿ.ಐ.	ಸೆಕ್ರೇಟರಿಯಟ್	9	0	0
	ನ್ಯಾಶನಲ್ ಎಕ್ಸಿಕುಟಿವ್	31	3	10
	ನ್ಯಾಶನಲ್ ಕೌನ್ಸಿಲ್	125	6-7*	5
ಜನತಾ ದಳ	ಪೊಲಿಟಿಕಲ್ ಅಫೇರ್ಸ್ ಕಮಿಟಿ	15	0	0
	ಪಾರ್ಲಿಮೆಂಟರಿ ಬೋರ್ಡ್	15	0**	0
	ನ್ಯಾಶನಲ್ ಎಕ್ಸಿಕುಟಿವ್	75	11	15
ಸಂಯುಕ್ತರಂಗ	ಸ್ಟಿರಿಂಗ್ ಕಮಿಟಿ	15-17**	0	0
ಬಿ.ಜೆ.ಪಿ.	ಪಾರ್ಲಿಮೆಂಟರಿ ಬೋರ್ಡ್	9	1	11
	ಎಲೆಕ್ಷನ್ ಕಮಿಟಿ	17	2	12
ಕಾಂಗ್ರೆಸ್	ವರ್ಕಿಂಗ್ ಕಮಿಟಿ	19	2	11

* - 7ನೇ ಸದಸ್ಯೆಯು ಚರ್ಚೆಯಲ್ಲಿ ಭಾಗವಹಿಸುವ ಸದಸ್ಯೆಯಷ್ಟೆ ಆದರೆ ಮತ ಚಲಾಯಿಸುವುದಿಲ್ಲ.

** - ಸಾಮಾನ್ಯವಾಗಿ, ರಾಜ್ಯ ಜನತಾದಳ ಮಹಿಳಾ ವಿಂಗ್‌ನ ಅಧ್ಯಕ್ಷೆಯಷ್ಟೆ ಭಾಗವಹಿಸುವುದು ಮತ್ತು ಸಲಹೆಗಳನ್ನು ನೀಡುವುದು. ಮತ ಚಲಾಯಿಸುವಂತಿಲ್ಲ. ಭಾಗವಹಿಸಲು ಕರೆ ನೀಡುವುದೂ ಸಹ ಪಾರ್ಲಿಮೆಂಟರಿ ಬೋರ್ಡ್ ಅಧ್ಯಕ್ಷರ ಇಷ್ಟಕ್ಕೆ ಬಿಟ್ಟದ್ದು.

*** ಸಂದರ್ಶಕರಿಗನುಗುಣವಾಗಿ ಒಟ್ಟು ಮಹಿಳೆಯರ ಸಂಖ್ಯೆ ಬದಲಾಗುತ್ತಿರುತ್ತದೆ.

ಕೃಪೆ : ಮಾನು ಪತ್ರಿಕೆ

ಸಮಾನತೆಯತ್ತ ಒಂದು ಹೆಜ್ಜೆ ಮೀಸಲಾತಿ

ವಿಮಲ (ಜನವಾದಿ ಮಹಿಳಾ ಸಂಘಟನೆ)

ಆರ್ಥಿಕ ಸ್ವಾವಲಂಬನೆ, ಉದ್ಯೋಗ, ಶಿಕ್ಷಣಗಳಲ್ಲಿ ಸಮಾನ ಅವಕಾಶ, ಭೂ ಒಡೆತನವನ್ನೂ ಒಳಗೊಂಡಂತೆ ಆಸ್ತಿಯಲ್ಲಿ ಸಮಾನ ಹಕ್ಕು ಇವು ಮಹಿಳಾ ಸಮಾನತೆಯ ಸಾಧನೆಗೆ ಅಡಿಪಾಯ ಎಂಬುದು ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆಯ ನಂಬಿಕೆ. ಪ್ರಸಕ್ತ ದೇಶದ ಪರಿಸ್ಥಿತಿಯನ್ನು ಅವಲೋಕಿಸಿದರೆ ಇದು ಅಡಿ ಮೇಲಾಗುತ್ತಿದೆ. ಹೊಸ ಆರ್ಥಿಕ ನೀತಿಯ ಪರಿಣಾಮವಾಗಿ ಹೆಚ್ಚುತ್ತಿರುವ ನಿರುದ್ಯೋಗ, ಏರುತ್ತಿರುವ ಬೆಲೆಗಳು, ಉಲ್ಬಣಿಸುತ್ತಿರುವ ಸಾಮಾಜಿಕ ಸಮಸ್ಯೆಗಳು ಇವು ಎಲ್ಲ ಜನರನ್ನೂ ಕಾಡುತ್ತಿವೆ. ಇದರ ನೇರ ಹೊಡೆತ ಮಹಿಳೆಯರ ಮೇಲೆ ಬೀಳುತ್ತಿದೆ. ಉದಾರೀಕರಣದ ಫಲವಾಗಿ ಜಾರಿಗೆ ಬರುತ್ತಿರುವ ಖಾಸಗೀಕರಣ ಹೆಚ್ಚು ಸಂಖ್ಯೆಯಲ್ಲಿ ಮಹಿಳೆಯರನ್ನು ಅಸಂಘಟಿತ ವಲಯಕ್ಕೆ ನೂಕುತ್ತಿದೆ. ಇಂತಹ ಪರಿಸ್ಥಿತಿಯಲ್ಲಿ ಹೆಚ್ಚಿನ ಉದ್ಯೋಗಾವಕಾಶ, ಸಮಾನ ಹಕ್ಕುಗಳು ಜಂಟಿ ಪಟ್ಟಾ ಮತ್ತು ಸಮಾನ ವೇತನದಂತಹ ಹಕ್ಕುಗಳಿಗೆ ಹೋರಾಟ ನಡೆಸುವ ಜೊತೆಗೆ ಸರ್ಕಾರ ಜಾರಿಗೆ ತರುವ ಎಲ್ಲ ಯೋಜನೆಗಳಲ್ಲಿಯೂ ಮಹಿಳೆಯರಿಗೆ ವಿಶೇಷ ಸೌಲಭ್ಯ ನೀಡುವುದೂ ಮಹಿಳಾ ಚಳುವಳಿಯ ಬೇಡಿಕೆಯಾಗಿದೆ.

ಕಳೆದ ದಶಕದಲ್ಲಿ ಗ್ರಾಮೀಣ ಯೋಜನೆಗಳಲ್ಲಿ ಶೇಕಡಾ 30ರಿಂದ 40ರಷ್ಟನ್ನು ಮಹಿಳೆಯರಿಗಾಗಿಯೇ ಮೀಸಲಿಡುವಂತಹ ಒತ್ತಡವನ್ನು ಸರ್ಕಾರದ ಮೇಲೆ ತರುವಲ್ಲಿ ಮಹಿಳಾ ಚಳುವಳಿ ಯಶಸ್ವಿಯಾಯಿತು. ರಾಷ್ಟ್ರೀಕೃತ ಬ್ಯಾಂಕುಗಳಲ್ಲಿ ಕೂಡ ಸಾಲ-ಸೌಲಭ್ಯಗಳ ಕೆಲ ಅಂಶಗಳನ್ನೂ ಮಹಿಳೆಯರಿಗಾಗಿಯೇ ಮೀಸಲಿಡುವಂತೆ ಕೂಡ ಆಯಿತು. ಈ ಸೌಲಭ್ಯಗಳು ದೊರೆಯಲು ಸಾಕಷ್ಟು ಹೆಣಗಬೇಕಾದ ಪರಿಸ್ಥಿತಿ ಇದೆಯಾದರೂ ಅಂತಹ ಒಂದು ಸೌಲಭ್ಯದ ಲಭ್ಯತೆಯ ಅವಕಾಶವನ್ನು ಅಲ್ಲಗಳೆಯಲು ಸಾಧ್ಯವಿಲ್ಲ. ಈ ಬೆಳವಣಿಗೆಯಿಂದ ಒಂದಿಷ್ಟು ಅವಕಾಶಗಳ ಸೃಷ್ಟಿಯಾಗುತ್ತಿರುವುದು ಮೀಸಲಾತಿಯ ಬಗ್ಗೆ ಏಳುತ್ತಿರುವ ಪ್ರಶ್ನೆಗಳಿಗೆ ಉತ್ತರವಾಗುತ್ತದೆ.

"ಸಮಾನತೆಗೆ ನಡೆಯುತ್ತಿರುವ ಹೋರಾಟದ ಮಧ್ಯ ಮೀಸಲಾತಿಯ ಮಾತೇಕೆ".... ಇದು ಅಲ್ಲಲ್ಲಿ ಕೇಳಿಬರುತ್ತಿರುವ ವಾದ. ಸಂವಿಧಾನ ದತ್ತವಾದ ಹಕ್ಕುಗಳು ಇಂದಿಗೂ ಔಪಚಾರಿಕ ಹಕ್ಕುಗಳಾಗಿಯೇ ಉಳಿದಿವೆ. ಎಲ್ಲ ಕ್ಷೇತ್ರಗಳಲ್ಲಿಯೂ ಇರುವ ಅಸಮಾನತೆಗಳನ್ನು ಹೋಗಲಾಡಿಸಲು, ಸರ್ಕಾರದ ನೀತಿ, ನಿರೂಪಣೆಯ ಹಂತದಲ್ಲಿ ಆಗಬೇಕಾದ ಮೂಲಭೂತ ಬದಲಾವಣೆಗೆ ದಾರಿಯಾಗಲು ಮಹಿಳೆಯರಿಗಾಗಿಯೇ ವಿಶೇಷ ಸೌಲಭ್ಯ ಕಲ್ಪಿಸುವ ಅವಶ್ಯಕತೆ ಇದೆ. ಹೀಗೆ ಸಿಗುವ ಒಂದಿಷ್ಟು ರಿಯಾಯಿತಿ ಮೀಸಲಾತಿಗಳು ಒಮ್ಮೆಗೇ ಮಹಿಳೆಯರ ಬದುಕನ್ನು ಉತ್ತಮಗೊಳಿಸುತ್ತವೆ ಎಂಬ ಭ್ರಮೆ ಮಹಿಳಾ ಚಳುವಳಿಗಿಲ್ಲ. ಆದರೆ ಆಮೂಲಾಗ್ರ ಬದಲಾವಣೆಗೆ ಸಮಾಜವನ್ನು ಒಳಗಾಗಿಸುವ ನಿಟ್ಟಿನಲ್ಲಿ ಇದು ಒಂದು ಪ್ರಯತ್ನ. ಲಿಂಗ ತಾರತಮ್ಯಕ್ಕೆ ಒಳಗಾಗಿರುವ ಮಹಿಳೆಯರ ವಿಮೋಚನೆಗೆ ಇದು ದಾರಿಯನ್ನು ಕಲ್ಪಿಸುತ್ತದೆ ಅಷ್ಟೆ.

ರಾಜಕೀಯದಲ್ಲಿ ಮಹಿಳೆ : ಮಹಿಳೆಯರಿಗೇಕೆ ರಾಜಕೀಯ ಎಂಬ ವಾದ ಇಂದಿಗೂ ಕೇಳಿಬರುತ್ತಿದೆ. ರಾಜಕೀಯ ಎಂದಾಕ್ಷಣ ಕೇವಲ ಚುನಾಯಿತ ಪ್ರತಿನಿಧಿಗಳಷ್ಟೇ ಅಲ್ಲ. ಬೇರೆ ಬೇರೆ ರೀತಿಯಲ್ಲಿ ಮಹಿಳೆಯರು ರಾಜಕೀಯ ಪ್ರಕ್ರಿಯೆಗಳಲ್ಲಿ ಪಾಲ್ಗೊಳ್ಳುತ್ತಿದ್ದಾರೆ. ಆದರೆ ಮತದಾನದ ಹಂತದವರೆಗೆ ಪುರುಷನಷ್ಟೇ ಪ್ರಾಧಾನ್ಯತೆ ಪಡೆಯುವ ಮಹಿಳೆಯರು ಮೇಲೆ ಹೋದಂತೆಲ್ಲ ನೇಪಥ್ಯಕ್ಕೆ ಸರಿಸಲ್ಪಡುತ್ತಿದ್ದಾರೆ. ಪ್ರಸಕ್ತ ಇರುವ ಸಾಮಾಜಿಕ, ಕೌಟುಂಬಿಕ ಚೌಕಟ್ಟಿನಲ್ಲಿ ಬಂಧಿತರಾಗಿರುವ ಹಿನ್ನೆಲೆಯಲ್ಲಿ ಮಹಿಳೆಯರು ನೇರವಾಗಿ ರಾಜಕೀಯ ಕ್ಷೇತ್ರದಲ್ಲಿ ನಾಯಕತ್ವದ ಮಟ್ಟದಲ್ಲಿ ಬರಲು ಸಾಧ್ಯವಾಗುತ್ತಿಲ್ಲ. ಈ ಹಿನ್ನೆಲೆಯಲ್ಲಿ ರಾಜಕೀಯ ಕ್ಷೇತ್ರದಲ್ಲಿ ಹೆಚ್ಚು ಸಂಖ್ಯೆಯಲ್ಲಿ ಮಹಿಳೆಯರು ಕಂಡು ಬರುತ್ತಿಲ್ಲ. ಇದರ ಅರ್ಥ ಮಹಿಳೆಯರಿಗೆ ಆಸಕ್ತಿ ಇಲ್ಲ ಎಂಬುದೂ ಅಲ್ಲ, ಅರ್ಹತೆ ಇಲ್ಲ ಎಂಬ ವಾದವೂ ಸರಿಯಲ್ಲ. ಸ್ವಾತಂತ್ರ್ಯ ಸಂಗ್ರಾಮದ ಸಂದರ್ಭದಲ್ಲಿ ಎಲ್ಲ ಒತ್ತಡಗಳನ್ನೂ ಮೀರಿ ಮಹಿಳೆಯರು ಸಹಸ್ರ ಸಂಖ್ಯೆಯಲ್ಲಿ ಪಾಲ್ಗೊಂಡ ಚರಿತ್ರೆ ನಮ್ಮ ಮುಂದಿದೆ. ದಾಸ್ಯದಿಂದ ಬಿಡುಗಡೆಗಾಗಿ ಸ್ವಾತಂತ್ರ್ಯ ಗಳಿಕೆಯ ಮಹದಾಶಯದಿಂದ ಮಹಾನ್ ಸಂಗ್ರಾಮದಲ್ಲಿ ಪಾಲ್ಗೊಂಡ ಮಹಿಳೆಯರೂ ಕೂಡ ಸ್ವಾತಂತ್ರ್ಯಾ ನಂತರ ಪುರುಷ ಪ್ರಧಾನ ಮೌಲ್ಯಗಳ ಅಡಿಯಲ್ಲಿ ಸಿಲುಕಿ ಎರಡನೇ ದರ್ಜೆಯ ಪ್ರಜೆಯಾಗಿಯೇ ಪರಿಗಣಿಸಲ್ಪಡು ತ್ತಿದ್ದಾರೆ. ಸ್ವತಂತ್ರ ಭಾರತದ ಆಡಳಿತದ ಚುಕ್ಕಾಣಿ ಹಿಡಿದ ರಾಜಕೀಯ ನಾಯಕರೂ ಕೂಡ ಸಮಾಜದ ವಕ್ರಗತಿಯ ಚಲನೆಯನ್ನು ನಿಯಂತ್ರಿಸುವಲ್ಲಿ, ಮಹಿಳಾ ಸಮಾನತೆಯ ಕಲ್ಪನೆಗೆ ಸಾಕಾರ ನೀಡುವಲ್ಲಿ ತೋರುತ್ತಿರುವ ಅನಾಸಕ್ತಿಯಿಂದಾಗಿ ಮಹಿಳೆಯರ ಸಮಸ್ಯೆಗಳು ಉಲ್ಬಣಿಸುತ್ತಿವೆ. ಈ ಪರಿಸ್ಥಿತಿ ಬದಲಾಗಬೇಕಾದರೆ ಎಲ್ಲ ಹಂತಗಳಲ್ಲಿಯೂ ಸ್ತ್ರೀ-ಪುರುಷರು ಸರಿಸಮಾನವಾಗಿ ಪಾಲ್ಗೊಳ್ಳಬೇಕು. ನೀತಿ, ನಿರೂಪಣೆಯ, ಯೋಜನೆಗಳ ಜಾರಿಯ, ತೀರ್ಮಾನ ತೆಗೆದುಕೊಳ್ಳುವ ಸ್ಥಾನಗಳಲ್ಲಿ

ಮಹಿಳೆಯರಿಗೆ ಅವಕಾಶಗಳು ಸಿಗಬೇಕು. ಇಂತಹ ವಾತಾವರಣ ನಿರ್ಮಾಣಕ್ಕೆ ಮಹಿಳಾ ಚಳುವಳಿ ನಡೆಸಿದ ಹೋರಾಟಕ್ಕೆ ಪ್ರತಿಯಾಗಿ ಹಲವು ವರ್ಷಗಳಿಂದ ಹಲವಾರು ರೂಪಗಳಲ್ಲಿ ಪ್ರಸ್ತಾಪಿಸಲ್ಪಡುತ್ತಿದ್ದ "ರಾಜಕೀಯದಲ್ಲಿ ಮಹಿಳಾ ಪ್ರಾತಿನಿಧ್ಯ" ಪ್ರಯತ್ನಗಳು ಈಗ 33% ಮೀಸಲಾತಿ ಮಸೂದೆಯ ಮಂಡನೆಯವರೆಗೆ ಬಂದು ನಿಂತಿದೆ.

ಮಹಿಳಾ ಸಂಘಟನೆಗಳ ಅವಿರತ ಶ್ರಮದ ಫಲವಾಗಿ ಹನ್ನೊಂದನೇ ಲೋಕಸಭಾ ಚುನಾವಣೆಯ ಸಂದರ್ಭದಲ್ಲಿ ಎಲ್ಲ ರಾಷ್ಟ್ರೀಯ ಪಕ್ಷಗಳೂ ತಮ್ಮ ಚುನಾವಣಾ ಪ್ರಣಾಳಿಕೆಯಲ್ಲಿ ಘೋಷಿಸಿದ "ಮಹಿಳಾ ಮೀಸಲಾತಿ"ಯ ನೀತಿಗೆ ಒಂದು ಇತಿಹಾಸವೇ ಇದೆ. ಇಂದು ಮೀಸಲಾತಿಯನ್ನು ವಿರೋಧಿಸುತ್ತಿರುವ - ಮಹಿಳಾ ಪರ ಎಂದು ಹೇಳಿಕೊಂಡು ನೇಪಥ್ಯದಲ್ಲಿ ಮಹಿಳಾ ವಿರೋಧಿ ನಿಲುವುಗಳನ್ನು ತಳೆದಿರುವ ಪಕ್ಷಗಳು, ವ್ಯಕ್ತಿಗಳ ವಾದದಲ್ಲಿ ಹುರುಳಿಲ್ಲ. ಮೀಸಲಾತಿಯ - ಆ ಮೂಲಕ ಸಮಾನತೆಯತ್ತ ಹೆಜ್ಜೆಯಿಡುವ ಕಲ್ಪನೆ 1957ರಿಂದಲೇ ಪ್ರಾರಂಭವಾಗಿದೆ.

ಜನವರಿ 57ರಲ್ಲಿ ಬಲವಂತ್‌ರಾಯ್ ಕಮಿಟಿ - ಸ್ಥಳೀಯ ಸ್ಥಾನಗಳಿಗೆ ಮಹಿಳಾ ಪ್ರತಿನಿಧಿಗಳನ್ನು ಆಯ್ಕೆ ಮಾಡುವ, ಸಮಾಜದ ಬೆಳವಣಿಗೆಗೆ ಅವರು ನೀಡುವ ಕೊಡುಗೆಯನ್ನು ಗುರುತಿಸುವ ಕ್ರಿಯೆಯಾಗಬೇಕು ಎಂದು ಶಿಫಾರಸು ಮಾಡಿತ್ತು.

1975ರಲ್ಲಿ "ಮಹಿಳೆಯರ ಸ್ಥಾನ-ಮಾನಗಳ ಪರಿಶೀಲನೆಗೆ" ರಚಿಸಿದ ಸಮಿತಿ ಕೂಡ ಮಹಿಳೆಯರಿಗೆ ನ್ಯಾಯವಾಗಿ ಸಿಗಬೇಕಾದ ಸ್ಥಾನ ಸಿಗದ ಬಗ್ಗೆ ಸ್ಪಷ್ಟವಾಗಿ ತಿಳಿಸಿತ್ತು.

1978ರಲ್ಲಿ ಅಶೋಕ ಮೆಹ್ತ ಕಮಿಟಿ ಪಂಚಾಯತ್ ವ್ಯವಸ್ಥೆಯ ಕುರಿತು ತನ್ನ ವರದಿ ನೀಡಿತು. ಅದು ಕೂಡ ಮಹಿಳೆಯರಿಗೆ ಪ್ರಾತಿನಿಧ್ಯ ನೀಡುವ ಕುರಿತು ಒತ್ತಾಯ ಮಾಡಿತು.

1983ರಲ್ಲಿ ಕರ್ನಾಟಕ ಸರ್ಕಾರ ಸ್ಥಾನಿಕ ಚುನಾವಣೆಗಳಲ್ಲಿ 25 ಪ್ರತಿ ಶತ ಮಹಿಳೆಯರಿಗಾಗಿ ಮೀಸಲಿಡುವ ಕಾಯ್ದೆಯನ್ನು ಮಾಡಿತು ಮತ್ತು 1987ರಲ್ಲಿ ಅದನ್ನು ಜಾರಿಗೆ ತಂದಿತು. ಇದು ಮಹಿಳೆಯರು ಹೆಚ್ಚಿನ ಸಂಖ್ಯೆಯಲ್ಲಿ ರಾಜಕೀಯ ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳಲು ಅನುವು ಮಾಡಿಕೊಟ್ಟಿತು. 1988ರಲ್ಲಿ "ರಾಷ್ಟ್ರೀಯ ಮಹಿಳಾ ಅಭಿವೃದ್ಧಿ ಯೋಜನೆ" ಪಂಚಾಯತ್‌ನಿಂದ ಲೋಕಸಭೆಯವರೆಗೆ 1/3 ಭಾಗದಷ್ಟು ಮಹಿಳೆಯರಿಗೆ ಮೀಸಲಿಡಬೇಕೆಂಬ ಶಿಫಾರಸು ಮಾಡಿತು.

1991ರಲ್ಲಿ ಪಂಚಾಯತ್ ರಾಜ್ ಕಾನೂನಿಗೆ ತಿದ್ದುಪಡಿ - ಪಾರ್ಲಿಮೆಂಟಿನಲ್ಲಿ ಮಂಡನೆಯಾಯಿತು. ಎಲ್ಲ ಪಕ್ಷಗಳೂ ಒಪ್ಪಿದವು ಕೂಡ.

1992ರಲ್ಲಿ ಪ. ಬಂಗಾಲದಲ್ಲಿ ನಡೆದ ಪಂಚಾಯತ್ ಮತ್ತು ನಗರಸಭಾ ಚುನಾವಣೆಗಳಲ್ಲಿ ಸಂವಿಧಾನದ 73 ಮತ್ತು 74ನೇ ತಿದ್ದುಪಡಿಯಾದುವುದಕ್ಕೂ ಮೊದಲೇ 33% ಮಹಿಳಾ ಮೀಸಲಾತಿ ಜಾರಿಗೆ ಬಂತು.

1993ರಲ್ಲಿ 73-74ನೇ ತಿದ್ದುಪಡಿಗಳು ಅಂಗೀಕಾರವಾಗಿ ಸ್ಥಾನಿಕ ಚುನಾವಣೆಗಳಲ್ಲಿ ಮಹಿಳೆಯರಿಗೂ ಪ್ರಾತಿನಿಧ್ಯ ಸಿಗುವಂತಾಯಿತು.

ಎಲ್ಲ ಸಮಿತಿಗಳ ವರದಿಗಳೂ ಒಟ್ಟಾರೆಯಾಗಿ ಮಹಿಳೆಯರಿಗೆ ಪ್ರಾತಿನಿಧ್ಯ ಕೊಡುವ ನಿಟ್ಟಿನಲ್ಲಿ ಸ್ವಾಗತಾರ್ಹವಾದ ನಿಲುವುಗಳನ್ನು ತೆಗೆದುಕೊಂಡಿದ್ದವಾದರೂ ಸಮಗ್ರವಾದ ಒಂದು ನೀತಿ ರೂಪಿಸುವಲ್ಲಿ ವಿಫಲವಾಗಿದ್ದವು. ಈಗ ಚರ್ಚೆಯಲ್ಲಿರುವ "ಶಾಸನ ಸಭೆಗಳಲ್ಲಿ ಮಹಿಳಾ ಮೀಸಲಾತಿ" ಮಸೂದೆ ಕೂಡ ಕೆಲವು ಲೋಪ-ದೋಷಗಳನ್ನು ಹೊಂದಿದೆ. ಹಾಗೆಂದ ಮಾತ್ರಕ್ಕೆ ಅದನ್ನು ಅನುಷ್ಠಾನಕ್ಕೆ ತರಲು ಅಡ್ಡಿ ಮಾಡುವುದು ಸರಿಯಲ್ಲ ಮತ್ತು ಮಸೂದೆಯ ವಿರೋಧಿಗಳು ಎತ್ತುವ - "ಮಹಿಳೆಯರು ರಾಜಕೀಯಕ್ಕೆ ಬಂದರೆ ಕುಟುಂಬದ ವಾತಾವರಣ ಹದಗೆಡುತ್ತದೆ" "ಚುನಾವಣೆಯ ಸಂದರ್ಭದಲ್ಲಿ ಗೆಲ್ಲುವ ಅಭ್ಯರ್ಥಿಗಳು ಸಿಗುವುದಿಲ್ಲ", "ಪ್ರತಿಷ್ಠಿತರ, ಮೇಲ್ವರ್ಗದ ಜನರ ಮನೆಯ ಮಹಿಳೆಯರಿಗೆ ಮಾತ್ರ ಅವಕಾಶ ಸಿಗುತ್ತದೆ" ಆದ್ದರಿಂದ ಈ ಮಸೂದೆಯಲ್ಲಿ "ಇತರ ಹಿಂದುಳಿದ ವರ್ಗಗಳ ಮಹಿಳೆಯರಿಗೂ ಮೀಸಲಾತಿ ಕಲ್ಪಿಸಬೇಕು ಎಂಬಿತ್ಯಾದಿ ಬಾಲಿಷ ವಾದಗಳಲ್ಲಿ ಹುರುಳಿಲ್ಲ ವಾಗುತ್ತದೆ. ಯಾವುದೇ ಬದಲಾವಣೆಯಾಗುವಾಗ ಒಮ್ಮೆಗೇ ಎಲ್ಲವೂ ಸರಿ ಹೊಂದುವಂತೆ ಆಗುವುದು ಸಾಧ್ಯವಿಲ್ಲ. ಅನುಭವಗಳ ಆಧಾರದಲ್ಲಿ ಮತ್ತೆ ಮತ್ತೆ ಬದಲಾವಣೆ ಯಾಗುತ್ತಲೇ ಇರುತ್ತದೆ. ಅದು ಅನಿವಾರ್ಯ ಕೂಡ. ನಮ್ಮ ದೇಶದಲ್ಲಿ ಈಗಾಗಲೇ ಕುಟುಂಬದ ಆಡಳಿತದ ಪದ್ಧತಿ ನಡೆಯುತ್ತಲೇ ಬಂದಿದೆ. ಬೇಟಾಬ್ರಿಗೇಡ್ ಬಗ್ಗೆ ಇದುವರೆಗೂ ಸೊಲ್ಲೆತ್ತದ ಜನ ಇಂದು ಮಹಿಳೆಯರ ಬಗ್ಗೆ ಮಾತ್ರ ಇದ್ದಕ್ಕಿದ್ದಂತೆ ಜಾಗೃತರಾಗಿರುವ ಹಿನ್ನೆಲೆ ಏನು?

ಈ ಹಿನ್ನೆಲೆಯಲ್ಲಿ ಮಹಿಳಾ ಸಮಾನತೆಯ ಹಾದಿಯಲ್ಲಿ ಧೃಢ ಹೆಜ್ಜೆಯಾಗಿ ಮೂಡಿ ಬರಲಿರುವ "ಮೀಸಲಾತಿ" ಅತ್ಯಗತ್ಯ. ಕಳೆದ ಎರಡು ಅಧಿವೇಶನದಲ್ಲಿ ಎಡ ಪಕ್ಷಗಳನ್ನು ಹೊರತು ಪಡಿಸಿ ಉಳಿದ ಎಲ್ಲ ಪಕ್ಷಗಳೂ ತಮ್ಮ ಚುನಾವಣೆಯ ಘೋಷಣೆಗಳನ್ನೇ ಧಿಕ್ಕರಿಸಿ ವ್ಯತಿರಿಕ್ತ ನಡವಳಿಕೆಯನ್ನು ತೋರ್ಪಡಿಸಿದ್ದಾರೆ. ಇದು ಇಂದೀಗ ಕೇವಲ ಸಂಸತ್ತಿನ ಒಳಗಿರುವ ಸಂಸದರ ಮೇಲಿನ ಜವಾಬ್ದಾರಿಯಾಗಿ ಉಳಿದಿಲ್ಲ. ಈಗ ಇದು ದೇಶದ ಪ್ರಜ್ಞಾವಂತ ಜನರ ಮೇಲಿರುವ ಜವಾಬ್ದಾರಿಯಾಗಿದೆ. ಸಮಾನತೆಯಲ್ಲಿ ನಂಬಿಕೆ ಇರುವ ಸ್ತ್ರೀ-ಪುರುಷರೆಲ್ಲರೂ ಒಂದಾಗಿ ಮಸೂದೆಯ ಸಮರ್ಪಕ ಜಾರಿಗೆ ಶ್ರಮಿಸಬೇಕು. ●

1974ರ "ಮಹಿಳೆಯರ ಸ್ಥಾನಮಾನ ಕುರಿತ ವರದಿಯಲ್ಲಿ ದಾಖಲಾದ ಎರಡು ಧ್ವನಿಗಳು ಬಹುಮುಖ್ಯವಾದ ಪ್ರಶ್ನೆಗಳನ್ನು ಎತ್ತುತ್ತವೆ. ಫುಲ್‌ರೇನು ಮಹಾ ಹಾಗೂ ಮಣಿಬೆನ್ ತಾರಾರವರು ಮಹಿಳೆಯರಿಗೆ ಮೀಸಲಾತಿಯನ್ನು ವಿರೋಧಿಸಿದ್ದರು. ಇವರ ಅಭಿಪ್ರಾಯದಂತೆ ಮೀಸಲಾತಿಯ ಹೆಜ್ಜೆ ಒಂದು ಪುರೋಗಾಮಿ ನಿಲುವಾಗಿದೆ. ಪುರುಷರಿಗೆ ಸಮಾನವಾಗಿ ಮಹಿಳೆಯರು ಸ್ಪರ್ಧಿಸುವುದನ್ನು ಬಿಟ್ಟು ಮಹಿಳೆಯರು ದುರ್ಬಲ ಎಂಬ ವಾದವನ್ನು ಬಲಪಡಿಸಿದಂತಾಗುತ್ತದೆ. ಎಲ್ಲಾ ವರ್ಗದ ಸ್ತ್ರೀಯರು ಪುರುಷರಿಗೆ ಸರಿಸಮಾನವಾದ ಸ್ಥಿತಿಯನ್ನು ತಲುಪುವುದು ನಮ್ಮ ಗುರಿಯಾಗಬೇಕು. ಪ್ರತ್ಯೇಕ ಸ್ಥಾನಗಳನ್ನು ಮಹಿಳೆಯರಿಗೆ ಮೀಸಲಾಗಿಡುವುದು ಸ್ತ್ರೀಯರ ಸ್ಥಾನವನ್ನು ದುರ್ಬಲಗೊಳಿಸುತ್ತದೆ. ಮಹಿಳೆಯರು ಸ್ವಯಂ ಶಕ್ತಿ ಹಾಗೂ ಸಾಮರ್ಥದಿಂದ ಮುಂದೆ ಬರಬೇಕೆ ಹೊರತು ರಿಯಾಯಿತಿಯಿಂದಲ್ಲ.

ಎರಡನೆಯದಾಗಿ ಮೀಸಲಾತಿಯನ್ನು ತಾತ್ಕಾಲಿಕವೆಂದು ಭಾವಿಸಿದರೂ, ಇದು ಮೇಲುವರ್ಗದ ಹಾಗೂ ಮೇಲು ಜಾತಿಯ, ಅನುಕೂಲಸ್ಥ ಮಹಿಳೆಯರ ಪರವಾಗಿದೆ. ಒಮ್ಮೆ ಮೀಸಲಾತಿಯನ್ನು ಜಾರಿಗೆ ತಂದರೆ ಅದನ್ನು ರದ್ದು ಪಡಿಸುವುದು ಕಷ್ಟಕರ. ಇದು ಸ್ತ್ರೀಯರ ಅಸಮಾನತೆಯನ್ನು ಮುಂದುವರಿಸುತ್ತದೆ. ಮೀಸಲಾತಿಯ ಬದಲಾಗಿ ಮಹಿಳೆಯರ ಹಕ್ಕು ಬಾಧ್ಯತೆಗಳ ಬಗ್ಗೆ ಪ್ರಜ್ಞೆ ಬೆಳೆಸುವುದು, ರಾಜಕೀಯದಲ್ಲಿ ಅವರು ಭಾಗವಹಿಸುವಂತೆ ಪ್ರೇರೇಪಿಸುವಂತೆ ಸಾರ್ವಜನಿಕ ಅಭಿಪ್ರಾಯಗಳನ್ನು ಮಾಡಿಸಬೇಕು.

"ಮಾನಸ" ಓದುಗರಿಗೊಂದು ಮನವಿ

ಕಳೆದ ಹತ್ತು ವರ್ಷಗಳಿಂದ ಮಾನಸ ತಿಂಗಳ ಪತ್ರಿಕೆಯನ್ನು ಓದುಗರ ಹಾಗೂ ಸಹೃದಯರ ಸಹಕಾರದಿಂದ ಪ್ರಕಟಿಸುತ್ತಿದ್ದೇವೆ. ಯಾವುದೇ ಸಂಸ್ಥೆಯ ಹಾಗೂ ಸರ್ಕಾರದ ನೆರವಿಲ್ಲದೆ, ಸ್ವಾಯತ್ತವಾಗಿ ಮಹಿಳೆಯರೇ ಮಾನಸ ಪತ್ರಿಕೆಯನ್ನು ಪ್ರಕಟಿಸುತ್ತಿದ್ದೇವೆ.

ಕರ್ನಾಟಕದ ಮಹಿಳಾ ಚಳುವಳಿಯಲ್ಲಿ ಮಾನಸದಂತಹ ಪತ್ರಿಕೆಯ ಪಾತ್ರ ಮಹತ್ತರವಾದುದೆಂದು ನಾವು ನಂಬಿದ್ದೇವೆ. ನಮ್ಮ ಈ ನಂಬಿಕೆಗೆ ಕಳೆದ ಹತ್ತು ವರ್ಷಗಳಿಂದ ನೀರೆರೆದು ಪೋಷಿಸಿದವರು ನೀವು. ಆದರೆ ಮಾನಸ ಪ್ರಕಟಣೆಯ ಹಾದಿ ಸುಗಮವಾದುದೇನಲ್ಲ. ಪ್ರತಿ ವರ್ಷವೂ, ಗೊಂದಲ, ಹತಾಷೆ, ಆಧೈರ್ಯದ ಸ್ಥಿತಿಯಲ್ಲಿಯೇ ಮಾನಸವನ್ನು ಪ್ರಕಟಿಸುತ್ತಾ ಬಂದಿದ್ದೇವೆ.

ಮಾನಸದ ಪ್ರಕಟಣೆಯಲ್ಲಿ ಎದುರಾಗುವ ದೊಡ್ಡ ಸಮಸ್ಯೆ ಹಣಕಾಸಿನದು. ಮಾನಸಕ್ಕೆ ಯಾವುದೇ ಸ್ಥಾಯಿ ನಿಧಿ ಇಲ್ಲ. ಖಾಯಂ ಆದ ಸಾಂಸ್ಥಿಕ ರಚನೆಯ ಬಗ್ಗೆ ಹಾಗೂ ಖಾಯಂ ಆದ ಸ್ಥಾಯಿ ನಿಧಿಯ ಬಗ್ಗೆ ನಮಗೆ ಹಲವಾರು ಪ್ರಶ್ನೆಗಳಿರುವುದರಿಂದ ಆ ಬಗ್ಗೆ ಹೆಚ್ಚಿನ ಗಮನವನ್ನು ನೀಡಲಾಗಿಲ್ಲ. ಮಾನಸದ ಒಂದು ಸಂಚಿಕೆಗೆ ಸುಮಾರು 3,000 ರೂಗಳಾಗುತ್ತದೆ. ಪ್ರತಿ ಸಂಚಿಕೆಗೂ ಚಂದಾ ಹಾಗೂ ಕೊಡುಗೆ ಹಣದಿಂದ ಪತ್ರಿಕೆಯನ್ನು ಪ್ರಕಟಿಸಲಾಗುವುದು. ಕಾಳಜಿಯುಳ್ಳ ಸಹೃದಯರು ಹಾಗೂ ಗೆಳತಿಯರು ಪ್ರತಿ ತಿಂಗಳೂ ಶಕ್ತ್ಯಾನುಸಾರ ಆರ್ಥಿಕ ನೆರವು ನೀಡುತ್ತಿದ್ದಾರೆ. ಆದರೆ ಪ್ರತಿ ಸಂಚಿಕೆಗೂ ಹಣ ಸಂಗ್ರಹಿಸಿ ಪತ್ರಿಕೆಯನ್ನು ಪ್ರಕಟಿಸುವುದು ಕಷ್ಟಕರವಾದುದರಿಂದ ಒಂದು ವರ್ಷದ ಸಂಚಿಕೆಗಳ ಪ್ರಕಟಣೆಗೆ ನೆರವಾಗುವಂತೆ ಹಣವನ್ನು ಸಂಗ್ರಹಿಸುವ ಉದ್ದೇಶದಿಂದ ನಮ್ಮ ಈ ಆಲೋಚನೆಯನ್ನು ತಮ್ಮ ಮುಂದಿಡುತ್ತಿದ್ದೇವೆ.

ವರ್ಷಕ್ಕೊಮ್ಮೆ (ಪ್ರತಿ ವರ್ಷವೂ) ಪತ್ರಿಕೆಗೆ 200-00 ರೂ ಅಥವಾ 100/-ರೂಗಳನ್ನು ಕೊಡುಗೆಯಾಗಿ ನೀಡಬೇಕೆಂದು ತಮ್ಮನ್ನು ಕೋರುತ್ತೇವೆ. 25/- ರೂ. ಅಥವಾ 50/- ರೂಗಳನ್ನು ನೀಡಬಯಸುವವರು ಪ್ರತಿ ತಿಂಗಳೂ ಕಳಿಸಿ ಕೊಡಬಹುದು, ಇದುವರೆಗೆ ಮಾನಸ ಪತ್ರಿಕೆಯ ಪ್ರಕಟಣೆಗೆ ನೀರೆರೆದ ಸಹೃದಯರು ಮಾನಸವನ್ನು ಉಳಿಸಿ ಬೆಳೆಸುವಲ್ಲಿ ನೆರವಾಗಬೇಕೆಂದು ಕಳಕಳಿಯಿಂದ ವಿನಂತಿಸಿಕೊಳ್ಳುತ್ತೇವೆ. ನೀವು ನೀಡುವ ಈ ಕೊಡುಗೆ ಪತ್ರಿಕೆಯ ಪ್ರಕಟಣೆಗೆ ನೆರವಾಗುವುದಲ್ಲದೆ, ಮಾನಸದ ಇತರ ಚಟುವಟಿಕೆಗಳಿಗೂ ನೆರವಾಗುತ್ತದೆ.

ಹಣವನ್ನು "ಮಾನಸ ತಿಂಗಳ ಪತ್ರಿಕೆ" ಹೆಸರಿನಲ್ಲಿ ಎಂ.ಓ. ಅಥವಾ ಡಿ.ಡಿ. ಮೂಲಕ ಕಳಿಸಿ ಕೊಡಬಹುದು. ಮಾನಸ ಬೆಳೆಯಬೇಕಾಗಿರುವುದು ಮುಖ್ಯವಾಗಿ ಓದುಗರಿಂದ. ಆದ್ದರಿಂದ ತಪ್ಪದೆ, ತಮ್ಮ ಸ್ನೇಹಿತರನ್ನು ಪರಿಚಿತರನ್ನು ಚಂದಾದಾರರನ್ನಾಗಿಸಿ.

- ಸಂಪಾದಕ ಮಂಡಳಿ

ಮಹಿಳೆಯರಿಗೆ ಮೀಸಲಾತಿ - ಸಮಯ ಬರಬೇಕು

ಪ್ರೊ. ರವಿವರ್ಮ ಕುಮಾರ್

ಪ್ರೊ. ರವಿವರ್ಮಕುಮಾರ್ ಅವರು ಖ್ಯಾತ ವಕೀಲರು ಹಾಗು ಹಾವನೂರು ಕಾನೂನು ಕಾಲೇಜಿನಲ್ಲಿ ಪ್ರೊಫೆಸರ್ ಆಗಿಯೂ ಕೆಲಸ ನಿರ್ವಹಿಸುತ್ತಿದ್ದಾರೆ. ಲೋಹಿಯಾ ವಿಚಾರಧಾರೆಯನ್ನು ಒಪ್ಪುವ ಅವರು ಅನೇಕ ಜನಪರ ಚಳುವಳಿಗಳಲ್ಲಿ ಸಕ್ರಿಯವಾಗಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ.

ಕೇಂದ್ರ ಹಾಗು ರಾಜ್ಯದಲ್ಲಿನ ಪ್ರಜಾಸತ್ತಾತ್ಮಕ ಸಂಸ್ಥೆಗಳಲ್ಲಿ ಮಹಿಳೆಯರಿಗೆ ಮೀಸಲಾತಿ ನೀಡುವ ವಿಷಯವು ಬಹಳ ದೀರ್ಘ ಕಾಲದಿಂದಲೂ ರಾಷ್ಟ್ರದ ಗಮನವನ್ನು ಸೆಳೆಯುತ್ತಿದೆ. ಮಹಿಳೆಯರಿಗೆ ಮೀಸಲಾತಿ ನೀಡುವ ಆಶ್ವಾಸನೆ ಇತ್ತ ಸಂಯುಕ್ತರಂಗ ಸರ್ಕಾರವು ಸಂವಿಧಾನಾತ್ಮಕ ಮಸೂದೆ (81ನೇ ತಿದ್ದುಪಡಿ)ಯನ್ನು ಮಂಡಿಸುವ ಧೈರ್ಯದ ನಿಲುವನ್ನು ತೆಗೆದುಕೊಂಡಿತು. ಜಂಟಿ ಆಯ್ಕೆ ಸಮಿತಿಯ ಪರಿಶೀಲನೆಯ ನಂತರ, ಮಸೂದೆಯು ಪಾರ್ಲಿಮೆಂಟಿನ ಒಪ್ಪಿಗೆಗಾಗಿ ಕಾಯುತ್ತಿದೆ.

ಮೀಸಲಾತಿ ಮಸೂದೆ

ಮಸೂದೆಯು ಲೋಕಸಭೆಯಲ್ಲಿ ಮಹಿಳೆಯರಿಗೆ ಮೀಸಲಾತಿಯ ಅವಕಾಶ ನೀಡುವ ಆರ್ಟಿಕಲ್ 330 (ಎ) ಹಾಗು ವಿಧಾನಸಭೆಯಲ್ಲಿ ಮಹಿಳೆಯರಿಗೆ ಮೀಸಲಾತಿಯ ಅವಕಾಶ ಕಲ್ಪಿಸುವ ಆರ್ಟಿಕಲ್ 332(ಎ) - ಬಗ್ಗೆ ಪ್ರಸ್ತಾಪಿಸುತ್ತದೆ. ಅಲ್ಲದೆ ಮೀಸಲು ಸ್ಥಾನಗಳನ್ನು ರೊಟೇಶನ್ (ಸರದಿ) ಆಧಾರದ ಮೇಲೆ ಹಂಚುವ ಅವಕಾಶ ನೀಡುತ್ತದೆ. ಈ ರೀತಿ ನೀಡುವ ಮೀಸಲಾತಿಯು ಯಾವುದೇ ರೀತಿಯ ವಿವಾದಕ್ಕೆ ಎಡೆ ಮಾಡಿಕೊಡದಂತೆ ಈ ಕೆಳಗೆ ಸೂಚಿಸಿರುವ ಸುರಕ್ಷಾ ಕ್ರಮಗಳನ್ನು ಕೈಗೊಳ್ಳಬಹುದು.

1) ಲೋಕಸಭೆ ಅಥವಾ ರಾಜ್ಯಸಭೆ ಸದಸ್ಯರನ್ನು ಎರಡು ಭಾರಿ ಮಾತ್ರ ಪ್ರತಿನಿಧಿಸಬೇಕೆಂಬ ನಿರ್ಬಂದಕ್ಕೆ ಒಳಪಡಿಸಬೇಕು.

2) ಪ್ರತಿಯೊಂದು ರಾಜಕೀಯ ಪಕ್ಷಗಳು, ತಮ್ಮ ಪಕ್ಷದ ನಿರ್ಣಯ ಕೈಗೊಳ್ಳುವ ಉಚ್ಚ ಸಮಿತಿಗಳಲ್ಲಿ 1/3ರಷ್ಟು ಸ್ಥಾನಗಳನ್ನು ಮಹಿಳೆಯರಿಗೆ ಮೀಸಲಿಡುವುದನ್ನು ಕಡ್ಡಾಯ ಮಾಡಬೇಕು. ತಮ್ಮ ಪಕ್ಷದಲ್ಲೇ ಮಹಿಳೆಯರೊಂದಿಗೆ ಸ್ಥಾನವನ್ನು ಹಂಚಿಕೊಳ್ಳದೆ ರಾಜಕೀಯ ಅಧಿಕಾರವನ್ನು ಮಹಿಳೆಯರೊಂದಿಗೆ ಹಂಚಿಕೊಳ್ಳುವುದು ಕಷ್ಟ ಸಾಧ್ಯ.

3) ಯಾರಿಗೇ ಆಗಲಿ ಮೀಸಲು ಕ್ಷೇತ್ರವನ್ನು ಒಂದು ಅವಧಿಗೆ ಮಾತ್ರ ಮೀಸಲು ಕ್ಷೇತ್ರವೆಂದು ಪರಿಗಣಿಸಿ ಮತ್ತೊಂದು ಅವಧಿಗೆ ಆ ಕ್ಷೇತ್ರವನ್ನು ಮುಕ್ತ ಸ್ಪರ್ಧೆಗೆ ಮುಕ್ತವಾಗಿಡಬೇಕು. ಈ ರೀತಿ ಮಾಡುವುದರಿಂದ ಯಾವುದೇ ಮೀಸಲು ಕ್ಷೇತ್ರದ ಚುನಾಯಿತ ಪ್ರತಿನಿಧಿಗಳು ಎರಡನೇ ಅವಧಿಗೆ ಹೆಚ್ಚು ಸಮರ್ಥರಾಗುವ ಸಾಧ್ಯತೆ ಇರುತ್ತದೆ. ಅಲ್ಲದೆ ರಾಜಕೀಯವು ಮಗಳು-ಸೊಸೆ ಆಟವಾಗುವುದನ್ನು ಇದು ತಡೆಯುತ್ತದೆ.

ಸಂವಿಧಾನಾತ್ಮಕ ವಿಧಾನ

ಸಂವಿಧಾನವು ಬಹಳ ಜಾಗರೂಕತೆಯಿಂದ, ಜೀವನದ ಎಲ್ಲಾ ಸ್ತರಗಳಲ್ಲೂ ಮಹಿಳೆಯರಿಗೆ ಸಮಾನತೆಯನ್ನು ನೀಡುತ್ತದೆ. ಅಲ್ಲದೆ ರಾಜಕೀಯ ನ್ಯಾಯ ಹಾಗು ಸ್ಥಾನಮಾನ ಮತ್ತು ಅವಕಾಶಗಳಲ್ಲಿ ಸಮಾನತೆಯ ಭರವಸೆಯನ್ನು ನೀಡುತ್ತದೆ. ದೇಶದ ಆಡಳಿತದಲ್ಲೂ ಮಹಿಳೆಯರು ಪಾಲ್ಗೊಳ್ಳುವಂತೆ ಮಾಡಲು ಹಲವಾರು ಅವಕಾಶಗಳನ್ನು ಕಲ್ಪಿಸಲಾಗಿದೆ-

ಆರ್ಟಿಕಲ್ 14 - ಮಹಿಳೆಯರಿಗೆ ಸಮಾನತೆಯನ್ನು ನೀಡುತ್ತದೆ.

ಆರ್ಟಿಕಲ್ 15 - ಲಿಂಗಾಧಾರಿತ ಅಸಮಾನತೆಯನ್ನು ನಿಷೇಧಿಸುತ್ತದೆ.

ಆರ್ಟಿಕಲ್ 16 - ಕೆಲಸ ಮಾಡುವ ಸ್ಥಳಗಳಲ್ಲಿ ಲಿಂಗ ಅಸಮಾನತೆಯನ್ನು ನಿಷೇಧಿಸುತ್ತದೆ.

ಆರ್ಟಿಕಲ್ 15(3) - ವಿಶೇಷ ಸೌಲಭ್ಯವನ್ನು ನೀಡಿದೆ. ಆ ಸೌಲಭ್ಯದ ಮೂಲಕ ರಾಜ್ಯ ಸರ್ಕಾರವು ಮಹಿಳೆಯರಿಗಾಗಿ ವಿಶೇಷ ಸೌಲಭ್ಯವನ್ನು ಕಲ್ಪಿಸಬಹುದು.

ಆರ್ಟಿಕಲ್ 38 - ರಲ್ಲಿನ ಆದೇಶವು ಸಾಮಾಜಿಕ ಕ್ರಮವನ್ನು ರಕ್ಷಿಸುವ ಮೂಲಕ ಸಾರ್ವಜನಿಕರ ಯೋಗ ಕ್ಷೇಮವನ್ನು ಪ್ರೋತ್ಸಾಹಿಸಲು ದೇಶದ ಎಲ್ಲಾ ಸಂಸ್ಥೆಗಳು ರಾಜಕೀಯ ನ್ಯಾಯಕ್ಕೆ ಒಳಪಡಬೇಕೆಂಬುದನ್ನು ತಿಳಿಸುತ್ತದೆ. ಇತ್ತೀಚಿನ ಆದೇಶವು ಮಹಿಳೆಯರ ಪರವಾಗಿ ನೀಡಿರುವ ರಾಜಕೀಯ ನ್ಯಾಯವು ಗಮನಾರ್ಹವಾದುದು. 73ನೇ ತಿದ್ದುಪಡಿಯ ಪ್ರಕಾರ ಪಂಚಾಯ್ತಿಯ ಒಟ್ಟು ಸ್ಥಾನದ 1/3ರಷ್ಟನ್ನು ಮಹಿಳೆಯರಿಗೆಂದು ಹಾಗು ಪಂಚಾಯ್ತಿಯಲ್ಲಿನ

ಒಟ್ಟು ಅಧ್ಯಕ್ಷರ ಸ್ಥಾನಗಳಲ್ಲಿ 1/3ರಷ್ಟನ್ನು ಮಹಿಳೆಯರಿಗೆ ಮೀಸಲಿಡಬೇಕೆಂದು ಹೇಳುತ್ತದೆ. 74ನೇ ತಿದ್ದುಪಡಿಯ ಪ್ರಕಾರ ಇದೇ ಮೀಸಲಾತಿಯು ನಗರ ಪಾಲಿಕೆಗಳಿಗೂ ಅನ್ವಯಿಸುತ್ತದೆ.

ಮೇಲಿನ ವಿಷಯಗಳನ್ನು ಗಮನಿಸಿದಾಗ ಮಹಿಳೆಯರ ಯೋಗಕ್ಷೇಮವನ್ನು ಪ್ರೋತ್ಸಾಹಿಸುವುದು ಹಾಗು ರಾಷ್ಟ್ರಾಡಳಿತದ ಎಲ್ಲಾ ಸ್ತರಗಳಲ್ಲಿ ಮಹಿಳೆಯರಿಗೆ ಸಮಾನ ಪಾಲುದಾರಿಕೆ ನೀಡುವುದು ಸಂವಿಧಾನಾತ್ಮಕ ವಿಧಾನವೇ ಆಗಿದೆ ಎಂಬುದು ಅರಿವಾಗುತ್ತದೆ. ಈ ನಿಟ್ಟನಲ್ಲಿ ಮಹಿಳೆಯರಿಗೆ ಲೋಕಸಭೆ ಹಾಗು ವಿಧಾನ ಸಭೆಗಳಲ್ಲಿ ಮೀಸಲಾತಿ ನೀಡಬೇಕೆನ್ನುವ ಬೇಡಿಕೆ ಸಂವಿಧಾನದ ಗುರಿಯೂ ಆಗಿದೆ. ಸಂವಿಧಾನದ ಆಶ್ವಾಸನೆಯನ್ನು ಪೂರೈಸಬೇಕಾಗಿರುವುದು ಅಧಿಕಾರದಲ್ಲಿರುವವರ ಕರ್ತವ್ಯ. ಆದರೆ ಇತ್ತೀಚಿನ ಬೆಳವಣಿಗೆಗಳನ್ನು ಗಮನಿಸಿದಾಗ ಆ ಬಗ್ಗೆ ರಾಜಕೀಯ ಒಮ್ಮತವಿಲ್ಲದಿರುವುದು ಕಂಡುಬರುತ್ತದೆ. ಸಂವಿಧಾನದ ಆಶ್ವಾಸನೆಯು ದೇಶದ ಕಾನೂನುಗಳಲ್ಲಿ ಲೋಕಸಭೆಯ, ವಿಧಾನಸಭೆಯ ಪ್ರತಿಯೊಂದು ಪರ್ಯಾಯ ಸ್ಥಾನವು ಮಹಿಳೆಯರದಾಗುವುದು ನಿಶ್ಚಿತ.

ಇಲ್ಲಿಯವರೆಗಿನ ಮಹಿಳಾ ಪ್ರತಿನಿಧಿತ್ವ

10ನೇ ಲೋಕಸಭೆಯಲ್ಲಿ 36 ಮಹಿಳಾ ಸದಸ್ಯೆಯರು (ಶೇ. 7.07) ಇದ್ದರೆ ಅದರ ಹಿಂದಿನ ಸಭೆಯಲ್ಲಿ ಮಹಿಳಾ ಸದಸ್ಯೆಯರ ಸಂಖ್ಯೆ 28 (ಶೇ. 5.29) ಇತ್ತು. 8ನೇ ಲೋಕಸಭೆಯಲ್ಲಿ ಅತಿ ಹೆಚ್ಚಿನ ಮಹಿಳಾ ಪ್ರತಿನಿಧಿಗಳು (44) ಇದ್ದರು. ಲೋಕಸಭೆಯಲ್ಲಿ ಮಹಿಳೆಯರ ಪ್ರತಿನಿಧಿತ್ವದ ಅಂಕಿ-ಅಂಶದ ವಿವರ ಈ ರೀತಿ ಇದೆ.

ಲೋಕಸಭೆ	ಒಟ್ಟು ಸ್ಥಾನ	ಮಹಿಳೆಯರ ಸಂಖ್ಯೆ	ಶೇಕಡ
1ನೇಯ	499	22	4.4
2ನೇಯ	500	27	5.4
3ನೇಯ	503	34	6.7
4ನೇಯ	523	31	5.9
5ನೇಯ	521	22	4.2
6ನೇಯ	544	19	3.4
7ನೇಯ	544	28	5.1
8ನೇಯ	544	44	8.1
9ನೇಯ	529	28	5.29
10ನೇಯ	509	36	7.07

ಮಹಿಳಾ ಪ್ರಾತಿನಿಧ್ಯವನ್ನು ವಿರೋಧಿಸುವ ಪಟ್ಟಭದ್ರ ಹಿತಾಸಕ್ತಿಗಳು

ಪ್ರಸ್ತುತ ಹೆಚ್ಚಿನ ಸ್ಥಾನಗಳನ್ನು ಹಿಡಿದಿಟ್ಟುಕೊಂಡಿರುವವರು ಪುರುಷರು. ಪುರುಷರದೇ ಬಹುಮತವಿರುವಾಗ ಅವರು ಮಹಿಳೆಯರಿಗೆ ಸ್ಥಾನ ಬಿಟ್ಟು ಕೊಡುವುದನ್ನು ನಿರೀಕ್ಷಿಸುವುದು ಕಷ್ಟವೇ ಸರಿ. ಇದುವರೆಗೆ ಹಿಂದುಳಿದ ಜಾತಿಯವರಿಗಾಗಿಯೋ, ಮಹಿಳೆಯರಿಗಾಗಿಯೋ ಸ್ಥಾನವನ್ನು ಬಿಟ್ಟು ಕೊಟ್ಟ ನಿದರ್ಶನದ ವರದಿಯೇ ಇಲ್ಲ. ಆದ್ದರಿಂದ ಮಹಿಳಾ ಪ್ರತಿನಿಧಿತ್ವವನ್ನು ಸ್ವ-ಇಚ್ಛೆಯಿಂದ ಬೆಂಬಲಿಸ ಬೇಕೆನ್ನುವುದು ಅತಿಯಾದ ನಿರೀಕ್ಷೆಯಾದೀತು.

ಹಿಂದುಳಿದ ಕೋಮಿನವರಿಗೆ ಮೀಸಲಾತಿ

ಮಹಿಳಾ ಪ್ರತಿನಿಧಿತ್ವದ ಬಗ್ಗೆ ಹೋರಾಡುವಾಗ ನಾವು ಇನ್ನೊಂದು ಮುಖ್ಯ ವಿಷಯವನ್ನು ಮರೆಯಬಾರದು. ಅದೆಂದರೆ ನಮ್ಮ ಸಮಾಜದ ಬಹುದೊಡ್ಡ ಭಾಗವೊಂದು, ಪ್ರಜಾಸತ್ತಾತ್ಮಕ ಸಂಸ್ಥೆಗಳಲ್ಲಿ ಪ್ರತಿನಿಧಿಸುವ ಅವಕಾಶದಿಂದ ವಂಚಿತವಾಗಿದೆ. ಒಟ್ಟು ಜನಸಂಖ್ಯೆಯಲ್ಲಿ ಶೇ. 50ರಷ್ಟು ಜನಸಂಖ್ಯೆಯು ಸಾಮಾಜಿಕವಾಗಿ, ಶೈಕ್ಷಣಿಕವಾಗಿ ಹಿಂದುಳಿದಿದೆಯೆಂದು ಮಂಡಲ್ ವರದಿ ಗುರುತಿಸಿದೆ. ಸಮಾಜದ ಈ ಜನಸಂಖ್ಯೆಗೆಂದೇ ಮಂಡಲ್ ವರದಿಯು ಕೇಂದ್ರೀಯ ಸೇವೆಗಳಲ್ಲಿ ಶೇ. 27ರಷ್ಟು ಮೀಸಲಾತಿಯನ್ನು ಶಿಫಾರಸ್ಸು ಮಾಡಿತು. ಇದಕ್ಕೆ ಸರ್ವೋಚ್ಚ ನ್ಯಾಯಾಲಯದ ಸಮ್ಮತಿಯು ಸಿಕ್ಕಿದೆ. ನಮ್ಮ ಎಲ್ಲಾ ರಾಷ್ಟ್ರೀಯ ಸಂಸ್ಥೆಗಳು, ನಿಜ ಅರ್ಥದಲ್ಲಿ ಪ್ರಜಾಸತ್ತಾತ್ಮಕವಾಗಬೇಕಾದರೆ ಎಲ್ಲಾ ಹಿಂದುಳಿದ ಕೋಮಿನವರಿಗೆ ಸಿಗಬೇಕಾದ ಪಾಲನ್ನು ನೀಡುವುದು ಮುಖ್ಯವಾಗುತ್ತದೆ. ಆದ್ದರಿಂದ ಹಿಂದುಳಿದ ಕೋಮಿನವರು ಮಹಿಳಾ ಮೀಸಲಾತಿಯನ್ನು ಬೆಂಬಲಿಸಬೇಕು. ಬೆಂಬಲಿಸುವ ಮೂಲಕ ಮಹಿಳಾ ಮೀಸಲಾತಿಯಡಿ ಹಿಂದುಳಿದ ಜಾತಿ, ಕೋಮಿನ ಮಹಿಳೆಯರನ್ನು ಬೆಂಬಲಿಸಿದಂತಾಗುವುದಲ್ಲದೆ, ಈ ರೀತಿಯ ಬೆಂಬಲವೂ ಪರಸ್ಪರ ಪೂರಕವೂ ಆಗುತ್ತದೆ. ●

ಮಹಿಳೆಯರಿಗೆ ಮೀಸಲಾತಿ - ರಾಜಕೀಯ ಸಮಾನತೆ

ಹೇಮಲತಾ ಮಹಿಷಿ, ವಕೀಲರು, ಬೆಂಗಳೂರು

ಮಹಿಳೆಯರ ಸಮಾನತೆಗಾಗಿಯ ಹೋರಾಟ ಈಗ ಒಂದು ಮುಖ್ಯ ಹಂತವನ್ನು ತಲುಪಿದೆ. ದೇಶದ ರಾಜಕೀಯ ಆಗು-ಹೋಗುಗಳಲ್ಲಿ ನೇರವಾಗಿ, ಪರಿಣಾಮಕಾರಿಯಾಗಿ ಭಾಗವಹಿಸಲು ಮಹಿಳೆಯರಿಗೂ ಹೆಚ್ಚಿನ ಅವಕಾಶವಿರಬೇಕು ಎಂಬುದು ಈಗ ವಿಶ್ವದ ಎಲ್ಲೆಡೆ ಮಹಿಳೆಯರ ಹಕ್ಕೊತ್ತಾಯವಾಗಿದೆ.

ಇತ್ತೀಚಿನ ಲೋಕಸಭಾ ಚುನಾವಣೆಗೆ ಮೊದಲು ಮಹಿಳೆಯರ ಬೆಂಬಲವನ್ನು ಗಳಿಸಲು ಎಲ್ಲ ರಾಜಕೀಯ ಪಕ್ಷಗಳು ಪೈಪೋಟಿ ನಡೆಸಿದವು. ಶಾಸನ ಸಭೆಗಳಲ್ಲಿ, ಪಾರ್ಲಿಮೆಂಟಿನಲ್ಲಿ ಮಹಿಳೆಯರಿಗೆ ಮೀಸಲಾತಿ ಕಲ್ಪಿಸುವುದಾಗಿ ಸಭೆಗಳಲ್ಲಿ ವಾಗ್ದಾನ ನೀಡಿದವು. ಕೇವಲ 33% ಮಾತ್ರ ಏಕೆ, 50% ಕೇಳಿ ಎಂದೂ ಹೇಳಿದವು ಕೆಲವು. ಅಧಿಕಾರಕ್ಕೆ ಬಂದ ಕೂಡಲೇ ಮಾಡುವ ಮೊದಲ ಕೆಲಸ ಅದು ಎಂದು ಜನತಾದಳ ತಿಳಿಸಿತು. ಇತ್ತೀಚಿನ ರಾಜಕೀಯ ಬೆಳವಣಿಗೆಯನ್ನು ನೋಡಿದಾಗ ಉಳಿದ ಆಶ್ವಾಸನೆಗಳಂತೆ ಈ ವಿಷಯವನ್ನೂ ರಾಜಕೀಯ ಪಕ್ಷಗಳು ಹಗುರವಾಗಿ ತೆಗೆದುಕೊಂಡಿರುವಂತೆ ಕಂಡು ಬರುತ್ತದೆ. ಚುನಾವಣೆ ಮುಗಿದ ಕೂಡಲೇ ಮರೆಯಬೇಕಾದ ವಿಚಾರ ಇದು ಎಂದು ಭ್ರಮಿಸಲಾಗಿತ್ತು. ಆದರೆ, ಮಹಿಳೆಯರು ಈ ವಿಷಯವನ್ನು ಮರೆಯಲಿಲ್ಲ, ಆ ರೀತಿ ಭಾವಿಸಲೂ ಇಲ್ಲ. ಜನತಾದಳ, ಮಿತ್ರ ಪಕ್ಷಗಳು ಮಹಿಳೆಯರ ಮತಗಳನ್ನು ಮತ್ತಷ್ಟು ಭದ್ರಪಡಿಸಿಕೊಳ್ಳಲು ಈ ಬಗ್ಗೆ ಸಂವಿಧಾನ ತಿದ್ದುಪಡಿಯ ಒಂದು ಮಸೂದೆಯನ್ನು ಪಾರ್ಲಿಮೆಂಟಿನಲ್ಲಿ ಮಂಡಿಸಿಯೇ ಬಿಟ್ಟವು. ಆದರೆ, ಸುಸೂತ್ರವಾಗಿ, ವಿರೋಧವಿಲ್ಲದಂತೆ, ಅದು ಕಾನೂನಾಗಲು ಬೇಕಾದ ಪೂರ್ವಭಾವಿ ಸಿದ್ಧತೆಗಳೇನನ್ನೂ ಮಾಡಿಕೊಳ್ಳದೇ ಸಭೆಯ ಮುಂದೆ ಅಧಿವೇಶನ ಕೊನೆಯ ದಿನ ಮಂಡಿಸಿದ್ದು ಈ ವಿಷಯದಲ್ಲಿ ರಾಜಕೀಯ ಪಕ್ಷಗಳಿಗೆ, ಅಧಿಕಾರದಲ್ಲಿರುವ ಪಕ್ಷಗಳನ್ನು ಒಳಗೊಂಡು, ಆಸಕ್ತಿ ಇಲ್ಲದಿರುವುದನ್ನು ತೋರಿಸುತ್ತದೆ. ಈ ವಿಷಯವೂ ರಾಜಕೀಯದ ಆಟದಲ್ಲಿ ಒದು ನಡೆಯಾಗಿರುವಂತೆ ಭಾಸವಾಗುತ್ತದೆ.

ಮಹಿಳೆಯರಿಗೆ ಶಾಸನ ಸಭೆಗಳಲ್ಲಿ ಮೀಸಲಾತಿ ಅವಶ್ಯವಿದೆಯೆ? ಮೀಸಲಾತಿಯ ವಿಷಯ ಮೊದಲಿನಿಂದಲೂ ಮಹಿಳೆಯರ ಮನಸ್ಸನ್ನು ಕಾಡುತ್ತಿದೆ. ಈವರೆಗಿನ ಮೀಸಲಾತಿಯ ಪರಿಣಾಮಗಳನ್ನು ಕಂಡು, ಸ್ವಸಾಮರ್ಥ್ಯದಿಂದ ಮಹಿಳೆಯರು ಮುಂದೆ ಬರಬೇಕು, ಬರಲು ಅವರಿಗೆ ಅರ್ಹತೆ ಇದೆ ಎಂದು ಮಹಿಳೆಯರು ಈವರೆಗೆ ನಂಬಿದ್ದರು. ಆರಂಭದಲ್ಲಿ ನಾನೂ ಅದರಲ್ಲಿ ನಂಬಿಕೆ ಇಟ್ಟಿದ್ದೆ. ಆದರೆ, ಎಲ್ಲ ಕ್ಷೇತ್ರಗಳಲ್ಲಿ ಅನರ್ಹ ಪುರುಷರಿಗೆ ಸ್ಥಾನಗಳನ್ನು ಕೊಟ್ಟರೂ, ಅವರಿಂದ ಯಾವುದೇ ಸಾಧನೆಗಳನ್ನು ನಿರೀಕ್ಷಿಸದಿದ್ದರೂ, ಅರ್ಹ ಮಹಿಳೆಯರನ್ನು ಬೇಕೆಂದೇ ಕಡೆಗಣಿಸುತ್ತಿರುವುದು, ಅವರು ತಮ್ಮ ನಿರೀಕ್ಷೆಯ ಅರ್ಹತೆಯ ಮಟ್ಟಕ್ಕೆ ಇನ್ನೂ ಬಂದಿಲ್ಲವೆಂದು ಹೇಳುತ್ತಿರುವುದು ಮಹಿಳೆಯರ ಭ್ರಮೆಯ ನಿರಸನಕ್ಕೆ ಕಾರಣವಾಗಿದೆ. ಮೀಸಲಾತಿಯ ಕಡ್ಡಾಯವಿಲ್ಲದಿದ್ದಲ್ಲಿ ಮಹಿಳೆಯರಿಗೆ ರಾಜಕೀಯ ಶಕ್ತಿ ಖಂಡಿತಾ ದೊರಕುವುದಿಲ್ಲ ಎಂಬುದು ಸೂರ್ಯ ಪ್ರಕಾಶದಷ್ಟು ನಿಚ್ಚಳವಾಗಿದೆ. ವೇದಿಕೆಯ ಮೇಲೆ ದೊಡ್ಡ ದೊಡ್ಡ ಮಾತುಗಳನ್ನು ಆಡಿದ ಪುರುಷ ರಾಜಕಾರಣಿಗಳು, ಪಕ್ಷಗಳು ಈಗ ಮಸೂದೆ ಕಾನೂನಾಗದಂತೆ ಅಡ್ಡಗಾಲು ಹಾಕುತ್ತಿರುವುದರ ಕಾರಣವೇನು ಎಂದು ಯೋಚಿಸಿದಾಗ ತಕ್ಷಣ ಹೊಳೆಯುವುದು ಸ್ವಹಿತ ರಕ್ಷಣೆ, ಸುಮಾರು 181 ಮಹಿಳೆಯರು ಪಾರ್ಲಿಮೆಂಟಿಗೆ ಪ್ರವೇಶ ಪಡೆದರೆ ಅಷ್ಟು ಪುರುಷರು ತಮ್ಮ ಸ್ಥಾನ ಕಳೆದುಕೊಳ್ಳುತ್ತಾರೆ. ಯಾವ-ಯಾವ ದೊಡ್ಡ ತಲೆಗಳು ಉರುಳುತ್ತವೆಯೋ ತಿಳಿಯದು. ಅಲ್ಲದೇ, ರಾಜಕೀಯ ಗಂಡಸರ ವಿಷಯ, ಹೆಂಗಸರಿಗೇನು ಕೆಲಸ ಅದರಲ್ಲಿ, ಅವರ ಜಾಗ ಮನೆಯಲ್ಲಿ ಎಂದು ಭದ್ರವಾಗಿ ನಂಬಿರುವ ಹಲವಾರು ಸಂಸತ್ ಸದಸ್ಯರು, ರಾಜಕೀಯ ನಾಯಕರು ಇನ್ನೂ ಸಾಕಷ್ಟು ಸಂಖ್ಯೆಯಲ್ಲಿದ್ದಾರೆ. ಆದರೆ, ಅದನ್ನು ಬಹಿರಂಗವಾಗಿ ಹೇಳಲು ಧೈರ್ಯವಾಗದೇ ತಾಂತ್ರಿಕತೆಯ ಮೊರೆ ಹೋಗುತ್ತಿದ್ದಾರೆ, ಹಿಂದುಳಿದ ವರ್ಗದವರ ಹಿತರಕ್ಷಕರು ತಾವೆಂದು ಕಾಣಿಸಿಕೊಳ್ಳಲು ಪ್ರಯತ್ನಿಸುತ್ತಿದ್ದಾರೆ, ಮಹಿಳಾ "ಓಟ್‌ಬ್ಯಾಂಕನ್ನು" ಒಡೆಯುವ ಪ್ರಯತ್ನ ನಡೆಸಿದ್ದಾರೆ. ('ಮಹಿಳಾ ಓಟ್ ಬ್ಯಾಂಕ್' ಎನ್ನುವುದು ಇದೆ ಎಂದು ನಾವು ಮಹಿಳೆಯರು ಭಾವಿಸಿಲ್ಲ, ಆದರೆ ರಾಜಕಾರಣಿಗಳು, ರಾಜಕೀಯ ಪಕ್ಷಗಳು ಎಲ್ಲ ವಿಷಯಗಳನ್ನು ಚೌಕಟ್ಟಿನಲ್ಲಿಯೇ ನೋಡುವ ದೃಷ್ಟಿ, ಭ್ರಮೆ ಬೆಳೆಸಿಕೊಂಡಿವೆ).

ಈಗ ಲೋಕಸಭೆಯಲ್ಲಿ ಮಂಡಿಸಿರುವ ಮಸೂದೆಯಂತೆ ಲೋಕಸಭೆ ಹಾಗೂ ರಾಜ್ಯದ ವಿಧಾನಸಭೆಗಳ ಒಟ್ಟು ಚುನಾಯಿತ ಸ್ಥಾನಗಳಲ್ಲಿ 33% ಸ್ಥಾನಗಳನ್ನು ಮಹಿಳೆಯರಿಗೆ ಮೀಸಲಿಡಬೇಕು. ಇದರಲ್ಲಿ ಸಂವಿಧಾನದತ್ತವಾದ ಪರಿಶಿಷ್ಟ ಜಾತಿ - ಪಂಗಡಗಳ ಮೀಸಲಾತಿ ಸ್ಥಾನಗಳಲ್ಲಿ ಮಹಿಳೆಯರಿಗೆ ಕೊಡಬೇಕಾದ 33% ಸ್ಥಾನಗಳೂ ಒಳಗೊಳ್ಳುತ್ತವೆ. ಈ 33% ಸ್ಥಾನಗಳಲ್ಲಿ (ಪರಿಶಿಷ್ಟ ಜಾತಿ - ಪಂಗಡ ಸ್ಥಾನಗಳನ್ನು ಬಿಟ್ಟು) ಹಿಂದುಳಿದ ವರ್ಗದವರಿಗೆ ಪುನಃ ಮೀಸಲಾತಿ ಕಲ್ಪಿಸಬೇಕೇ ಎನ್ನುವುದು ಈಗಿನ ಪ್ರಶ್ನೆಯಾಗಿದೆ. ಈ ಪ್ರಶ್ನೆಯನ್ನು ಎತ್ತಿ ಈ ಮಸೂದೆಯ ವಿರೋಧಿಗಳು ಯಶಸ್ವಿಯಾಗಿ ಗೊಂದಲವನ್ನು ಸೃಷ್ಟಿಸಿದ್ದಾರೆ, ಮಸೂದೆ ಕಾನೂನಾಗದಂತೆ ತಡೆಯನ್ನು ಒಡ್ಡಿದ್ದಾರೆ. ಸ್ವಾತಂತ್ರ್ಯ ಬಂದಾಗಿನಿಂದ ಎತ್ತಿರದ ಈ ಪ್ರಶ್ನೆಯನ್ನು ಮಹಿಳಾ ಮೀಸಲಾತಿಯ ಸಂದರ್ಭದಲ್ಲಿ ಮಾತ್ರ ಏಕೆ ಎತ್ತಲಾಗುತ್ತಿದೆ? ಮಹಿಳಾ ಮೀಸಲಾತಿ ಸ್ಥಾನಗಳಲ್ಲಿ ಹಿಂದುಳಿದ ವರ್ಗದವರಿಗೆ ಸ್ಥಾನ ಕಲ್ಪಿಸಬೇಕೆನ್ನುವವರು ಉಳಿದ 67% ಸ್ಥಾನಗಳಲ್ಲಿ ಹಿಂದುಳಿದ ವರ್ಗದವರಿಗೆ ಅದೇ ರೀತಿಯ ಮೀಸಲು ಸ್ಥಾನ ಕಲ್ಪಿಸಲು ಸಿದ್ಧರಿದ್ದಾರೆಯೇ? ಮಹಿಳೆಯರಿಗೆ ಅದು ಅನ್ವಯಿಸಿದರೆ ಉಳಿದ ಸ್ಥಾನಗಳಿಗೂ ಅದು ಅನ್ವಯಿಸಬೇಕು. ಈವರೆಗೆ ಹಿಂದುಳಿದ ಜಾತಿ - ಪಂಗಡಗಳಿಗೆ ಮೀಸಲಾತಿ ಇಲ್ಲದಿದ್ದರೂ ಅವರಿಗೇ ಹೆಚ್ಚಿನ ಸ್ಥಾನ ಸಿಕ್ಕಿಲ್ಲವೇ? ಅದೇ ರೀತಿ, ಮಹಿಳಾ ಮೀಸಲು ಸ್ಥಾನಕ್ಕೆ ಅಭ್ಯರ್ಥಿಗಳನ್ನು ಆರಿಸುವಾಗ ಎಲ್ಲ ವರ್ಗದವರಿಗೆ ಸೂಕ್ತ ಪ್ರಾತಿನಿಧ್ಯತೆ ದೊರಕುವಂತೆ ನೋಡಿಕೊಳ್ಳಲು ಸಾಧ್ಯವಿಲ್ಲವೆ? ಅದು ಪ್ರತಿಯೊಂದು ಪಕ್ಷಗಳ ಕೈಯಲ್ಲಿಯೇ ಇಲ್ಲವೆ? ಅದಕ್ಕಾಗಿ ಮಸೂದೆಯನ್ನೇ ತಡೆ ಹಿಡಿಯುವ ಅಗತ್ಯವಿದೆಯೆ? ಮಹಿಳಾ ಮೀಸಲಾತಿಯಲ್ಲಿ ಪುನಃ ಬೇರೆ ಜಾತಿ-ಪಂಗಡಗಳ ಆಧಾರದ ಮೇಲೆ ಮೀಸಲಾತಿ ಕಲ್ಪಿಸುವುದನ್ನು ನಾನು ವಿರೋಧಿಸುತ್ತೇನೆ. ಆದರೆ, ಈ ವಿರೋಧ ಹಿಂದುಳಿದ ವರ್ಗ-ಪಂಗಡಗಳ ಮಹಿಳೆಯರು ರಾಜಕೀಯ ಪ್ರವೇಶ ಮಾಡುವುದರ ವಿರುದ್ಧ ಅಲ್ಲ. ಈಗ ಅಭ್ಯರ್ಥಿಗಳನ್ನು ಆರಿಸುವಾಗ ಹಿಂದುಳಿದ ಜಾತಿ-ಪಂಗಡಗಳಿಗೆ ಕೊಡುತ್ತಿರುವ ಗಮನವನ್ನೇ ಮಹಿಳಾ ಅಭ್ಯರ್ಥಿಗಳನ್ನು ಆರಿಸುವಾಗಲೂ ಕೊಡಬೇಕು ಎಂಬುದು ನನ್ನ ಅಭಿಪ್ರಾಯ. ಆಗಲೇ ಸಮರ್ಥ ಮಹಿಳೆಯರು ಎಲ್ಲ ಜಾತಿ-ಪಂಗಡಗಳಿಂದ ಮುಂದೆ ಬರಲು ಸಾಧ್ಯ. ಇಲ್ಲವಾದರೆ, ಒಂದು ಚುನಾವಣಾ ಕ್ಷೇತ್ರದಲ್ಲಿ ಅರ್ಹ ಮಹಿಳೆ ಇಲ್ಲದಿದ್ದಾಗಲೂ ಬಲವಂತವಾಗಿ ಒಂದು ಜಾತಿ-ಪಂಗಡದ ಮಹಿಳೆಯನ್ನೇ ನಿಲ್ಲಿಸಬೇಕಾದ ಅನಿವಾರ್ಯತೆ ಉಂಟಾಗುತ್ತದೆ.

ಮಹಿಳೆಯರು ರಾಜಕೀಯ ಕ್ಷೇತ್ರವನ್ನು ಹೆಚ್ಚಿನ ಸಂಖ್ಯೆಯಲ್ಲಿ ಪ್ರವೇಶಿಸುವುದರಿಂದ ಅವರಿಗೆ ನ್ಯಾಯ ಸಲ್ಲುವುದು ಮಾತ್ರವಲ್ಲ ರಾಜಕೀಯ ಕ್ಷೇತ್ರದ ಬಣ್ಣವೂ ಬದಲಾಗುತ್ತದೆ, 'ರಾಜಕಾರಣ'ದ ಈಗಿನ ಕೆಟ್ಟ ವ್ಯಾಖ್ಯಾನವೂ ಬದಲಾಗುತ್ತದೆ ಹಾಗೂ ಇತ್ತೀಚಿನ ದಿನಗಳಲ್ಲಿ ಹೆಚ್ಚುತ್ತಿರುವ ರಾಜಕೀಯ ಅಪರಾಧೀಕರಣದ ಪ್ರಮಾಣವೂ ಕಡಿಮೆಯಾಗುತ್ತದೆ.

ರಾಜ್ಯ ಶಾಸನಸಭೆ ಹಾಗೂ ಲೋಕಸಭೆಯಲ್ಲದೇ ರಾಜ್ಯಸಭೆ ಹಾಗೂ ವಿಧಾನ ಪರಿಷತ್ತುಗಳಲ್ಲೂ ಮಹಿಳೆಯರಿಗೆ ಕನಿಷ್ಠ 33% ಮೀಸಲಾತಿ ಕೊಡುವುದರ ಅವಶ್ಯಕತೆ ಇದೆ.

ಶಾಸನಸಭೆ ಹಾಗೂ ಲೋಕಸಭೆ ಶಾಸನ ರಚಿಸಿರುವ ಸದನಗಳಾದ್ದರಿಂದ ಹಾಗೂ ಇಡೀ ದೇಶಕ್ಕೆ, ರಾಜ್ಯಕ್ಕೆ ಕಾರ್ಯ ನೀತಿ ರೂಪಿಸುವ ಸದನಗಳಾದ್ದರಿಂದ ಸಮರ್ಥ ಮಹಿಳೆಯರು ಈ ಸ್ಥಾನಗಳನ್ನು ತುಂಬುವ ಅವಶ್ಯಕತೆ ಇದೆ. ಮೀಸಲಾತಿ ಮಹಿಳೆಯರಿಗೆ ಕೊಡುವ ಅವಕಾಶ ಮಾತ್ರವಾಗದೇ ಮಹಿಳಾ ನಾಯಕತ್ವ ರೂಪಿಸುವ ಜಾಗಗಳೂ ಆಗಬೇಕು. ಅದಕ್ಕಾಗಿ ವಿದ್ಯಾವಂತ ಮಹಿಳೆಯರು ಹೆಚ್ಚಿನ ಸಂಖ್ಯೆಯಲ್ಲಿ ರಾಜಕೀಯ ಕ್ಷೇತ್ರವನ್ನು ಪ್ರವೇಶಿಸಬೇಕು . ರಾಜ್ಯದ-ದೇಶದ ಆಗು-ಹೋಗುಗಳಲ್ಲಿ ಹೆಚ್ಚಿನ ಆಸಕ್ತಿ ವಹಿಸಬೇಕು.

* ಸ್ಥಳೀಯ ಸಂಸ್ಥೆಗಳಲ್ಲಿ ಮಹಿಳೆಯರಿಗೆ ಮೀಸಲಾತಿಯನ್ನು ನೀಡುವುದು ಮಹಿಳಾ ರಾಜಕಾರಣಿಗಳಿಗೆ ಉತ್ತಮ ತಳಪಾಯವನ್ನು ಹಾಕಿದಂತಾಗುತ್ತದೆ.

ಮೃಣಾಲ್ ಗೋರೆ

* ಈ ಯುಗದಲ್ಲಿ ಮೀಸಲಾತಿಯನ್ನು ಕುರಿತು ಮಾತನಾಡುವುದು ನಾಚಿಕೆಗೇಡು. ಆದರೆ ಮಹಿಳೆಯರು ನ್ಯಾಯ ಪಡೆಯಲು ಇದೊಂದೆ ಮಾರ್ಗವಾಗುವುದಾದರೆ ಯಾಕಾಗಬಾರದು.

ಅಹಿಲ್ಯಾ ರಂಗೇಕರ್, ಸಿ.ಪಿ.ಎಂ.

ಮಹಿಳಾ ಮೀಸಲಾತಿ ಬಗೆಗೆ ವಿಭಿನ್ನ ಅಭಿಪ್ರಾಯ

ಮಾಜಿ ಪರಿಸರ ಖಾತೆ ಮಂತ್ರಿ ಶ್ರೀಮತಿ ಮನೇಕಾ ಗಾಂಧಿಯವರದು ಮಹಿಳಾ ಮೀಸಲಾತಿಯ ಬಗೆಗೆ ವಿಭಿನ್ನ ಅಭಿಪ್ರಾಯ. ಅವರು ಒಮ್ಮೆ ಪಾರ್ಲಿಮೆಂಟಿನಲ್ಲಿ ಕಾನೂನಿನ ನಿಯಮಗಳಿಗೆ ವಿರುದ್ಧವಾಗಿ ಸಾಂಘಿ ಸಿಮೆಂಟ್ ಕಂಪನಿಯು ದೆಹಲಿಯ ಒಂದು ನಿವೇಶನದಲ್ಲಿ ಕಟ್ಟಡ ಕಟ್ಟಿಕೊಂಡು ಕಾನೂನಿನ ದಾರಿತಪ್ಪಿಸುತ್ತಿರುವುದನ್ನು ಸಂಬಂಧಿಸಿದವರ ಗಮನಕ್ಕೆ ತಂದಾಗ ಆ ನಿವೇಶನದಲ್ಲಿ ಯಾವ ಕಟ್ಟಡವೂ ನಿರ್ಮಾಣವಾಗಿಲ್ಲವೆಂಬ ಉತ್ತರ ಬಂದಿತಂತೆ.

ಇಡೀ ಇಂಡಿಯಾ ದೇಶದ ಒಂದು ಪುಟ್ಟ ಭಾಗವಾದ ತಮ್ಮ ಚುನಾವಣಾ ಕ್ಷೇತ್ರವನ್ನಾದರೂ ಮೇಲೆತ್ತ ಬಹುದೆಂಬ ಆಶಾವಾದದೊಂದಿಗೆ ಪಾರ್ಲಿಮೆಂಟಿಗೆ ಪ್ರವೇಶಿಸಿದ ಮನೇಕಾಗೆ ಭ್ರಮನಿರಸನವಾಯಿತಂತೆ. ಅಲ್ಲಿ ಒಂದಷ್ಟು ಜನ ಸುಮ್ಮನೆ ಕಿರುಚುವುದು, ಅದಕ್ಕೆ ಒಂದಿಬ್ಬರು ಸುಳ್ಳು ಸುಳ್ಳೇ ಹೇಳುವುದು, ಇದೇ ನಡೆಯುತ್ತವೆನ್ನುವ ಮನೇಕಾಗೆ ಮಹಿಳಾ ಮೀಸಲಾತಿಯ ಬಗೆಗೆ ಅಂತ ಭ್ರಮೆಗಳೇನೂ ಇಲ್ಲ. ವಾಸ್ತವವಾಗಿ ಇದು ಸಂಯುಕ್ತ ರಂಗ ಸರ್ಕಾರವು, ತಾನು ಜನಪ್ರಿಯವಾಗಲು ಹೂಡಿರುವ ತಂತ್ರವೆಂದೇ ಅವರು ಭಾವಿಸುತ್ತಾರೆ. 545 ಮಂದಿಗೆ ಲೋಕಸಭಾ ಸದಸ್ಯರಾಗುವ ಅವಕಾಶವಿರುವಾಗ ಸುಮಾರು 130 ಸ್ಥಾನಗಳನ್ನು ಹಾಗೆ ಸುಮ್ಮನೆ ಮಹಿಳೆಯರಿಗೆ ಬಿಟ್ಟುಕೊಡಲಾಗುತ್ತದೆಯೇ ಎಂಬ ಬಗ್ಗೆಯೇ ಅವರಿಗೆ ಅನುಮಾನವಿದೆ. ಯಾವುದೂ ಊರ್ಜಿತವಾದ ಕಾಯಿದೆಯೂ (bill passes) ಜಾರಿಗೆ ಬರುವುದು ಕಷ್ಟಕರವಾಗಿರುವಾಗ ಸುಮ್ಮನೇ ಕೆಲವು ಹೆಂಗಸರು ಮಹಿಳಾ ಮೀಸಲಾತಿಯ ಬಗ್ಗೆ ಕೂಗೆಬ್ಬಿಸಿ ತಾವು ಈ ದೇಶದ ಮಹಿಳೆಯರಿಗಾಗಿ ತುಂಬಾ ಕಾಳಜಿ ವಹಿಸುತ್ತೇವೆಂದು ತೋರಿಸಿಕೊಳ್ಳುತ್ತಾರೆಂದು ಅವರ ಅಭಿಪ್ರಾಯ. ಹಣ ಮಾಡುವ ದುಷ್ಟ ಉದ್ದೇಶದಿಂದ ಕೈ ಕೈ ಸೇರಿಸಿರುವ ದುಷ್ಟಕೂಟವೊಂದು 'ಉತ್ತರ ಖಾಂಡ'ನ್ನು ಪ್ರತ್ಯೇಕ ರಾಜ್ಯವಾಗಿ ಮಾಡುತ್ತೇವೆ ಎಂದು ನೀಡುವ ಭರವಸೆ ಎಷ್ಟು ಸುಳ್ಳೋ, ಮಹಿಳೆಯರಿಗೆ ಮೀಸಲಾತಿ ನೀಡುತ್ತೇವೆ ಎಂದು ಹೇಳುವುದೂ ಅಷ್ಟೇ ಸುಳ್ಳು.

ಮಹಿಳಾ ಮೀಸಲಾತಿ ಮಸೂದೆಯು ರಾಜಕೀಯ ಸತ್ಯ ಎಂಬ ಒಂದೇ ಕಾರಣಕ್ಕಾಗಿ ಬಿ.ಜೆ.ಪಿ., ಸಿ.ಪಿ.ಎಂ. ಮೊದಲಾದ ಪಕ್ಷಗಳು ಬಹಿರಂಗವಾಗಿ ಅದನ್ನು ಬೆಂಬಲಿಸಿದರೂ ಒಳಗೊಳಗೇ ಅದಕ್ಕೆ ವಿರುದ್ಧವಾಗಿವೆ. ಹೇಗೂ ನೆನೆಗುದಿಗೆ ಬಿದ್ದಿರುವ ಈ ಮಸೂದೆ ಕೊನೆಗೆ ಏನಾಗುವುದೆಂದರೆ ಹಾಗೆ ಚುನಾವಣೆಗೆ ನಿಲ್ಲುವ ಹೆಂಗಸರಿಗೆ ಕೆಂಚು ಕೂದಲಿದ್ದು ಅವರು ಹಿಂದುಳಿದಿದ್ದು.... ಹೀಗೇ ರಾಜಕೀಯವಾಗಿ ಕಂಡು ಕೇಳಿಲ್ಲದ ರೂಪ ತಾಳುತ್ತದೆ. ಗಂಡಸರ ವಿರುದ್ಧ ಚುನಾವಣಾ ಟಿಕೇಟಿಗಾಗಿ ಸ್ಪರ್ಧಿಸಬೇಕಿಲ್ಲವೆಂಬ ಒಂದೇ ಕಾರಣಕ್ಕಾಗಿಯೂ ಈ ಮೀಸಲಾತಿಯನ್ನು ಕೇಳಲಾಗುತ್ತಿದೆ. ಈಗ 'ಪಂಚಾಯಿತಿ'ಗಳಲ್ಲಿ ಅಧ್ಯಕ್ಷರೂ ಉಪಾಧ್ಯಕ್ಷರೂ ಆಗಿರುವ ಮಹಿಳೆಯರನ್ನು ಮುಂದಿಟ್ಟುಕೊಂಡು ಅವಳ ಮಗನೋ, ಗಂಡನೋ, ತಂದೆಯೋ ಅಧಿಕಾರ ನಡೆಸುತ್ತಿರುವ ಉದಾಹರಣೆಗಳು ನಮ್ಮ ಮುಂದಿವೆ. ಮೀಸಲಾತಿ ಜಾರಿಗೆ ಬಂದರೆ ಇಂತಹ ಮಹಿಳೆಯರೇ ಲೋಕಸಭೆಗೂ ಪ್ರವೇಶಿಸುವುದಿಲ್ಲ ಎಂದು ಹೇಗೆ ಹೇಳುವುದು?

ಪರಿಸರ ಖಾತೆಯ ಮಂತ್ರಿಯಾಗಿದ್ದ ದಿನಗಳನ್ನು ನೆನೆಪಿಸಿಕೊಳ್ಳುವ ಮನೇಕಾಗಾಂಧಿ, ತಾವು ಸ್ವಚ್ಛ ಆಡಳಿತ ನಡೆಸುವ ಒಂದೇ ಉದ್ದೇಶದಿಂದ ಲೋಕಸಭೆಗೆ ಪ್ರವೇಶ ಮಾಡಿದ್ದೆಂದು ಹೇಳುವಾಗ ತಾವು ಮೀಸಲಾತಿಯಿಂದ ಹೋದವರಲ್ಲ ಎಂದು ಹೇಳುವ ಧ್ವನಿ ಇದೆಯೆ?! ಈಗಿರುವ ಮಹಿಳಾ ಎಂ.ಪಿ.ಗಳೂ ಯಾವ ಕ್ಷೇತ್ರದಲ್ಲೂ ತಮ್ಮನ್ನು ವಿಶೇಷವಾಗಿ ತೊಡಗಿಸಿಕೊಂಡವರಲ್ಲ, ಕೆಲವರಿಗೆ ಬಾಯಿ ಜೋರೇ ಹೊರತು ತಲೆಯಲ್ಲಿ ಮೆದುಳಿಲ್ಲ. ಕೆಲವರಂತೂ ತುಟ್ಟಿ ಭತ್ಯೆ ಮತ್ತು ಸೆಂಟ್ರಲ್‌ಹಾಲಿನ ಊಟಕ್ಕಾಗಿ ಬಂದವರು (ಕೆಲವು ಮಹಿಳಾ ಎಂ.ಪಿ.ಗಳು ಇದಕ್ಕೆ ಅಪವಾದವಾಗಿರಬಹುದು) ಎಂದು ಖಾರವಾಗಿ ಹೇಳುವ ಮನೇಕಾಗಾಂಧಿ ತಾವು ಮಾತ್ರ ಆ ದರ್ಜೆಗೆ ಸೇರಿದವರಲ್ಲ ಎಂದು ಖಚಿತವಾಗಿ ಗುರುತಿಸಿಕೊಳ್ಳುತ್ತಾರೆ. ಹಾಲಿ ಮಹಿಳಾ ಎಂ.ಪಿ.ಗಳು ಮಹಿಳಾ ಮೀಸಲಾತಿಯ ಬಗ್ಗೆ ಕೂಗೆಬ್ಬಿಸಿದರೆ ಅದು ತಮ್ಮ ಸ್ಥಾನವನ್ನು ಮತ್ತೆ ಮತ್ತೆ ಖಚಿತಗೊಳಿಸಿ ಕೊಳ್ಳುವುದಕ್ಕೆ ಮಾತ್ರ.

ಲೋಕಸಭೆಯಲ್ಲಿ ಈ ಮಸೂದೆಯನ್ನು ಚರ್ಚಿಸಿದವರಲ್ಲಿ ಬುದ್ಧಿಗಿಂತ ಹೆಚ್ಚಾಗಿ ತರ್ಕ ಪ್ರಖರವಾಗಿತ್ತು. ಈ ತರ್ಕ ನಡೆಸಿದವರೆಲ್ಲಾ ಗಂಡಸರೇ ಆಗಿದ್ದು ಬುದ್ಧಿವಂತೆ ಮಹಿಳೆಯರ ಪ್ರವೇಶ (ಲೋಕಸಭೆಗೆ) ಅವರಿಗೆ ಇಷ್ಟವಿಲ್ಲವೆಂಬುದು ಸ್ಪಷ್ಟವಾಗಿಯೇ ಇದೆ, ಆದರೂ ಮಹಿಳೆಯರು ಕಡಿಮೆ ಮಾತನಾಡಿ ಹೆಚ್ಚು ಕೆಲಸ ಮಾಡಿದರೆ ಈ ಮೀಸಲಾತಿ ಕೇಳುವುದಕ್ಕೊಂದು ಅರ್ಥ ಬಂದೀತು. ಅದು ಸಾಧ್ಯವೆ? ಎಂದು ಮನೇಕಾಗಾಂಧೀ ಪ್ರಶ್ನಿಸುತ್ತಾರೆ.

(ಕೃಪೆ : ಮಾನುಷಿ ಪತ್ರಿಕೆ)

ರಾಜಕೀಯ ಮತ್ತು ಮಹಿಳೆಯರಿಗೆ ಮೀಸಲಾತಿ - ಹಲವು ಪ್ರಶ್ನೆಗಳು

ಆರ್. ಇಂದಿರಾ, ಸಮತಾ ಸದಸ್ಯೆ, ಮೈಸೂರು

ಕಳೆದ 3-4 ತಿಂಗಳುಗಳಿಂದ ದೇಶದ ರಾಜಕೀಯ ವಲಯದಲ್ಲಿ ಗೊಂದಲಮಯ ಪರಿಸ್ಥಿತಿಯನ್ನು ಸೃಷ್ಟಿಸಿರುವ ಮಹಿಳಾ ಮೀಸಲಾತಿಯ ಮಸೂದೆ ಹಲವಾರು ಮೂಲಭೂತವಾದ ಪ್ರಶ್ನೆಗಳನ್ನು ನಮ್ಮ ಮುಂದೆ ತಂದಿದೆ. ಲೋಕಸಭೆ ಮತ್ತು ವಿಧಾನಸಭೆಗಳಲ್ಲಿ ಮಹಿಳೆಯರಿಗೆ ಶೇಕಡ 33ರಷ್ಟು ಮೀಸಲಾತಿಯನ್ನು ನೀಡಬೇಕೆಂಬ ಮಸೂದೆಗೆ ವ್ಯಾಪಕವಾದ ಬೆಂಬಲವಿದ್ದರೂ, ಇಂದಿಗೂ ಅದಕ್ಕೆ ಸಂಬಂಧಿಸಿದ ಸಂವಿಧಾನಾತ್ಮಕ ತಿದ್ದುಪಡಿಗೆ ಅಂಗೀಕಾರ ದೊರೆತಿಲ್ಲವೆಂಬುದು ಲಿಂಗಸಂಬಂಧಿ ಪೂರ್ವಗ್ರಹಗಳು ನಮ್ಮ ಸಮಾಜದಲ್ಲಿ ಎಷ್ಟು ಭದ್ರವಾಗಿ ಬೇರೂರಿವೆ ಎಂಬುದಕ್ಕೆ ಸಾಕ್ಷಿಯಾಗಿದೆ. ಲೋಕಸಭೆಯ ವಿಶೇಷ ಸಮಿತಿಯ ಪರಿಶೀಲನೆಗೆ ಈ ಮಸೂದೆಯನ್ನು ಒಪ್ಪಿಸುವುದು, ಇದನ್ನು ಕುರಿತಂತೆ ಇನ್ನಷ್ಟು ವ್ಯಾಪಕ ಚರ್ಚೆಯಾಗಬೇಕೆಂದು ಹೇಳುವುದು ಅಥವಾ ತಾಂತ್ರಿಕ ತೊಂದರೆಗಳನ್ನು ನಿವಾರಿಸುವವರೆಗೂ ಈ ಮಸೂದೆಗೆ ಅಂಗೀಕಾರ ಸಾಧ್ಯವಿಲ್ಲವೆಂದು ಹೇಳುವುದು - ಇವೆಲ್ಲವೂ ಪುರುಷ ಪ್ರಧಾನ ಮೌಲ್ಯ ವ್ಯವಸ್ಥೆ ಅಧಿಕಾರದ ಮರುಹಂಚಿಕೆಯ ಪ್ರಕ್ರಿಯೆಗೆ ತೋರಿಸುತ್ತಿರುವ ಪ್ರತಿಕ್ರಿಯೆಗಳಾಗಿವೆ. ಸ್ವತಂತ್ರ ಬಂದಾಗಿನಿಂದಲೂ ರಾಜಕೀಯ ಅಧಿಕಾರದ ಮೇಲೆ ತಮ್ಮ ಏಕಸ್ವಾಮ್ಯವನ್ನು ಸ್ಥಾಪಿಸಿಕೊಂಡಿದ್ದ ಪುರುಷ ರಾಜಕಾರಣಿಗಳು ಈ ಅಧಿಕಾರವನ್ನು ಸ್ವಲ್ಪ ಮಟ್ಟಿಗಾದರೂ ಬಿಟ್ಟುಕೊಡಲು ತಯಾರಿಲ್ಲವೆಂಬುದು ಲಿಂಗಸಮಾನತೆಯ ಹೋರಾಟಕಷ್ಟೇ ಅಲ್ಲ, ಪ್ರಜಾಪ್ರಭುತ್ವಕ್ಕೇ ಒಂದು ದೊಡ್ಡ ಸವಾಲಾಗಿದೆ.

ಮಹಿಳೆಯರಿಗೆ ರಾಜಕೀಯ ಕ್ಷೇತ್ರದಲ್ಲಿ ಮೀಸಲಾತಿಯನ್ನು ನೀಡಬೇಕೆಂಬ ಅಭಿಪ್ರಾಯ ಇಂದು ನಿನ್ನೆಯದೇನಲ್ಲ. 1957ರಲ್ಲಿ ಕಾಂಗ್ರೆಸ್ ಪಕ್ಷ ಶೇಕಡ 15ರಷ್ಟು ಸ್ಥಾನಗಳನ್ನು ಮಹಿಳೆಯರಿಗೆ ನೀಡುವುದಾಗಿ ಪ್ರಕಟಿಸಿತ್ತು. ಆದರೆ ಇಂದಿಗೂ ಆ ಘೋಷಣೆ ಘೋಷಣೆಯಾಗಿಯೇ ಉಳಿದಿದೆ. 1996ರ ಲೋಕಸಭೆಯ ಚುನಾವಣೆಗಳಲ್ಲಿ ಸ್ಪರ್ಧಿಸಿದ 14,274 ಅಭ್ಯರ್ಥಿಗಳಲ್ಲಿ ಕೇವಲ 477 (3.3%) ಮಹಿಳೆಯರಿದ್ದರು. ಅವರಲ್ಲಿ ಎರಡನೆ-ಮೂರು ಭಾಗದಷ್ಟು ಪಕ್ಷೇತರ ಅಭ್ಯರ್ಥಿಗಳಾಗಿದ್ದರೇ ಹೊರತು ಯಾವ ಪಕ್ಷದಿಂದಲೂ ಬೆಂಬಲವನ್ನು ಪಡೆದವರಲ್ಲ. ಇದೇ ಚುನಾವಣೆಯಲ್ಲಿ ವಿವಿಧ ಪಕ್ಷಗಳ ಬೆಂಬಲವನ್ನು ಪಡೆದು ಸ್ಪರ್ಧಿಸಿದ ಮಹಿಳಾ ಅಭ್ಯರ್ಥಿಗಳ ಸಂಖ್ಯೆ ಹೀಗಿದೆ :

ಪಕ್ಷ	ಸ್ಪರ್ಧಿಸಿದ ಒಟ್ಟು ಅಭ್ಯರ್ಥಿಗಳು	ಮಹಿಳಾ ಅಭ್ಯರ್ಥಿಗಳು
ಕಾಂಗ್ರೆಸ್ (ಐ)	530	49
ಭಾರತೀಯ ಜನತಾ ಪಕ್ಷ	477	23
ಸಿಪಿಐ (ಎಂ)	77	05
ಸಿಪಿಐ	43	04
ಜನತಾದಳ	220	11

ಪ್ರತಿ ಪ್ರಮುಖ ರಾಜಕೀಯ ಪಕ್ಷವೂ ತನ್ನ ಚುನಾವಣಾ ಪ್ರಣಾಳಿಕೆಯಲ್ಲಿ ಮಹಿಳೆಯರಿಗೆ ಶೇಕಡ 33ರಷ್ಟು ಮೀಸಲಾತಿಯನ್ನು ನೀಡುವುದಾಗಿ ಘೋಷಿಸಿ ತನ್ನ 'ಸ್ತ್ರೀಪರ ಕಾಳಜಿ'ಗಳನ್ನು ಚುನಾವಣಾ ಸಮಯದಲ್ಲಿ ಪ್ರದರ್ಶಿಸಿದ್ದರೂ, ಆ ಕಾಳಜಿಗಳನ್ನು ಕಾರ್ಯರೂಪಕ್ಕೆ ತರುವ ಸಂದರ್ಭ ಒದಗಿ ಬಂದಾಗ ಯಾವುದಾದರೂ ಒಂದು ಕಾರಣವನ್ನು ಮುಂದಿಟ್ಟುಕೊಂಡು ತನ್ನ ಜವಾಬ್ದಾರಿಯಿಂದ ನುಣುಚಿಕೊಳ್ಳುತ್ತಿರುವುದು ಮಹಿಳೆಯರನ್ನು ಕುರಿತ ಅವರ ಆಸಕ್ತಿ ಎಷ್ಟರ ಮಟ್ಟಿಗಿದೆ ಎಂಬುದಕ್ಕೆ ಸಾಕ್ಷಿಯಾಗಿದೆ. ತಾವು ಪ್ರಗತಿಪರರು, ಸ್ತ್ರೀ-ಪುರುಷ ಸಮಾನತೆಯ ತತ್ವಕ್ಕೆ ಬದ್ಧರು ಎಂದು ತೋರಿಸಿಕೊಳ್ಳಲು ಮಹಿಳೆಯರನ್ನು ಒಂದು 'ಬಂಡವಾಳ'ವನ್ನಾಗಿರಿಸಿಕೊಂಡ ರಾಜಕೀಯ ಪಕ್ಷಗಳ ಧುರೀಣರನೇಕರು ಮಹಿಳೆಯರೊಡನೆ ತಾವು ಹಿಡಿದಿಟ್ಟುಕೊಂಡಿರುವ ಅಧಿಕಾರವನ್ನು (ಅದೂ ಸಮ ಪ್ರಮಾಣದಲ್ಲಲ್ಲ, ಶೇಕಡ 33ರಷ್ಟು ಮಾತ್ರ) ಹಂಚಿಕೊಳ್ಳುವ ಪ್ರಶ್ನೆ ಬಂದಾಗ ಹಿಮ್ಮೆಟ್ಟುತ್ತಿರುವುದು ಏತಕ್ಕೆ? ಪಂಚಾಯಿತಿಗಳಲ್ಲಿ

ಅವರಿಗೆ ಈಗಾಗಲೇ ಮೀಸಲಾತಿಯ ಸೌಲಭ್ಯವನ್ನು ನೀಡಿ ಒಂದು ಪ್ರಯೋಗವನ್ನು ನಡೆಸಿದ್ದೇವೆ, ಆ ಪ್ರಯೋಗದಲ್ಲಿ ಅವರಿನ್ನೂ ಜಯಿಸಿ ಬರಬೇಕಾಗಿದೆ, ಇನ್ನೊಂದಿಷ್ಟು ಸಮಯ ಕಾದು ನೋಡೋಣ ಎನ್ನುವ ಎಷ್ಟು ಜನ ಪುರುಷ ರಾಜಕಾರಣಿಗಳು ತಮ್ಮ ಅಧಿಕಾರಾವಧಿಯಲ್ಲಿ ಸಕ್ರಿಯವಾಗಿ ರಾಜಕೀಯ ಜೀವನದಲ್ಲಿ ಭಾಗವಹಿಸಿದ್ದಾರೆ? ಯಾರು-ಯಾರು ವಿಧಾನಸಭೆಯಲ್ಲಿ-ಲೋಕಸಭೆಯಲ್ಲಿ ಎಷ್ಟು ಬಾರಿ ಚರ್ಚೆಗಳಲ್ಲಿ ಪಾಲ್ಗೊಂಡಿದ್ದಾರೆ ಎಂಬುದನ್ನು ನಾವು ಪರಿಶೀಲಿಸಬೇಕಾಗಿದೆ. ಮಹಿಳೆಯರಿಗೆ ರಾಜಕೀಯ ಅಧಿಕಾರವನ್ನಿತ್ತರೆ ಅದನ್ನು ಬಳಸಲು ಅವರಿಗೆ ಇನ್ನೂ ಅನುಭವ ಸಾಲದು ಎನ್ನುವ ವಾದವನ್ನು ಮುಂದಿಟ್ಟು ಇನ್ನೆಷ್ಟು ದಿನ ಅವರಿಗೆ ನ್ಯಾಯಯುತವಾಗಿ ದೊರೆಯಬೇಕಾದ ಹಕ್ಕಿನಿಂದ ಅವರನ್ನು ವಂಚಿಸುತ್ತಾರೆ? ಅವಕಾಶ ದೊರೆತರೆ ತಾನೇ ಅನುಭವವನ್ನು ಪಡೆಯುವುದು. ಪುರುಷರಿಗೇನೂ ರಾಜಕೀಯ ಜೀವನದಲ್ಲಿ ಭಾಗವಹಿಸುವ ಅನುಭವ ಜನ್ಮಜಾತವಾಗಿ ಬರಲಿಲ್ಲವಲ್ಲ?

ಸ್ವಾತಂತ್ರ ಸಂಗ್ರಾಮದಲ್ಲಿ ಮಹಿಳೆಯರು ಮಹತ್ತರವಾದ ಪಾತ್ರವನ್ನು ವಹಿಸಿದ್ದರೂ, ಅವರಿಗೆ ದೇಶದ ರಾಜಕೀಯ ಭವಿಷ್ಯವನ್ನು ರೂಪಿಸುವುದರಲ್ಲಿ ಯಾವ ಸ್ಥಾನವನ್ನೂ ನೀಡಲಿಲ್ಲ. ಸ್ವಾತಂತ್ರ ಹೋರಾಟದಲ್ಲಿ ಸಕ್ರಿಯವಾಗಿ ಭಾಗವಹಿಸುವಂತೆ ಮಹಿಳೆಯರನ್ನು ಹುರಿದುಂಬಿಸಿದ ಮಹಾತ್ಮಾ ಗಾಂಧೀಜಿಯವರೂ ಕೂಡ ಸ್ವಾತಂತ್ರ ದೊರೆತ ನಂತರ ಸಕ್ರಿಯ ರಾಜಕೀಯದಲ್ಲಿ ಮಹಿಳೆಯರು ಭಾಗವಹಿಸಬೇಕೆಂಬ ನಿಲುವನ್ನು ತಳೆಯಲಿಲ್ಲವೆಂಬುದು ಗಮನಾರ್ಹ. ಮಹಿಳೆ ನಿಸ್ವಾರ್ಥತೆಯ ಸಾಕಾರಮೂರ್ತಿಯಾಗಿ ರಾಜಕೀಯ ವ್ಯವಸ್ಥೆಯ ಶುದ್ಧೀಕರಣ ಮಾಡಬೇಕೆಂಬುದು ಅವರ ಅಭಿಪ್ರಾಯವಾಗಿತ್ತೇ ಹೊರತು, ದೇಶದ ರಾಜಕೀಯ ಚುಕ್ಕಾಣಿಯನ್ನು ಹಿಡಿಯಬೇಕೆಂದಲ್ಲ. ಅಂದಿನಿಂದ ಇಂದಿನವರೆಗೂ ಮಹಿಳೆಯರನ್ನು ಕುರಿತ ಈ ನಕಾರಾತ್ಮಕ ದೃಷ್ಟಿಕೋನ ಮುಂದುವರೆದುಕೊಂಡೇ ಬಂದಿದ್ದು, ರಾಜಕೀಯ ಸಂಸ್ಥೆ ಲಿಂಗ ಸಮಾನತೆಯನ್ನು ಕುರಿತಂತೆ ಹೊಂದಿರುವ ತಟಸ್ಥ ನಿಲುವಿಗೆ ಸಾಕ್ಷಿಯಾಗಿದೆ.

'ಸ್ತ್ರೀ' ಮತ್ತು 'ಪುರುಷ'ರ ನಡುವಣ ಜೈವಿಕ ವ್ಯತ್ಯಾಸಗಳನ್ನೇ ಮುಂದಿಟ್ಟುಕೊಂಡು ಈ ವ್ಯತ್ಯಾಸಗಳು ಅವರ ಸಾಮರ್ಥ್ಯ ಮತ್ತು ಶಕ್ತಿಗಳಲ್ಲೂ ಭಿನ್ನತೆಯನ್ನು ತರುತ್ತವೆ ಎನ್ನುವ ಒಂದು ವಾದ ಪುರುಷ ಪ್ರಧಾನ ಮೌಲ್ಯಗಳನ್ನಾಧರಿಸಿದ ಒಂದು ಸಾಂಸ್ಕೃತಿಕ ಕಟ್ಟು ಕಥನವಷ್ಟೆ. ಇದೇ ಅರ್ಥಹೀನ ವಾದವನ್ನು ಮುಂದಿಟ್ಟುಕೊಂಡು ಸಮಾಜದ ಉಳಿವು ಹಾಗೂ ಅಭಿವೃದ್ಧಿಗೆ ಮಹಿಳೆಯರು ನೀಡುತ್ತಾ ಬಂದಿರುವ ಕೊಡುಗೆಗಳನ್ನು ಅಲಕ್ಷ ಮಾಡಿ ಅವರನ್ನು 'ಎರಡನೆ ದರ್ಜೆ'ಯ ಪ್ರಜೆಗಳಂತೆ ನಡೆಸಿಕೊಂಡು ಬರಲಾಗುತ್ತಿದೆ. ಅವರ ಸಾಮರ್ಥ್ಯವನ್ನು ಕುರಿತಂತೆ ಇಲ್ಲದ-ಸಲ್ಲದ ಅನುಮಾನಗಳನ್ನು ಸೃಷ್ಟಿಸಿ 'ಮಹಿಳೆಯರಿಗೆ ಅಧಿಕಾರವನ್ನು ನಿಭಾಯಿಸುವ ಶಕ್ತಿಯಿಲ್ಲ' ಎನ್ನುವ ಮಿಥ್ಯೆಯನ್ನು ಹರಡುತ್ತಾ ಈ ಪುರುಷ ಪ್ರಧಾನ ವ್ಯವಸ್ಥೆ ತನ್ನ ಪಟ್ಟ ಭದ್ರ ಹಿತಾಸಕ್ತಿಗಳನ್ನು ಉಳಿಸಿಕೊಂಡೇ ಬರುತ್ತಿದೆ. ಶತಮಾನಗಳ ಇತಿಹಾಸವನ್ನು ಹೊಂದಿರುವ ಲಿಂಗ ಅಸಮಾನತೆಯಿಂದ ರಾಜಕೀಯ ಲಾಭವನ್ನು ಪಡೆಯುತ್ತಾ ಬಂದಿರುವ ಪುರುಷ ರಾಜಕಾರಣಿಗಳು ಇದ್ದಕ್ಕಿದ್ದಂತೆ ಮಹಿಳೆಯರು ತಮ್ಮನ್ನು ಪ್ರಶ್ನಿಸಿ, ಪ್ರತಿಭಟಿಸುವ ಪರಿಸ್ಥಿತಿಯನ್ನು ಎದುರಿಸಲು ತಯಾರಿಲ್ಲವೆಂಬುದೇ ಈ ಮೀಸಲಾತಿಯ ವಿಚಾರವನ್ನು ಮುಂದೂಡುತ್ತಾ ಇರುವುದಕ್ಕೆ ಒಂದು ಪ್ರಮುಖ ಕಾರಣ. ಸದಾ ಕಾಲವೂ ರಾಜಕೀಯ ಕಣದಲ್ಲಿ ಎದುರಾಳಿಗಳಂತೆ ವರ್ತಿಸುತ್ತಿರುವ ವಿವಿಧ ರಾಜಕೀಯ ಪಕ್ಷಗಳು ಮಹಿಳೆಯರಿಗೆ ಅಧಿಕಾರವನ್ನು ಬಿಟ್ಟುಕೊಡಬೇಕಾದ ಪರಿಸ್ಥಿತಿ ಎದುರಾದಾಗ ಮಾತ್ರ ವೈಮನಸ್ಸಗಳನ್ನು ಬಿಟ್ಟು ಒಂದಾಗುವುದೇಕೆ? ಮಹಿಳಾ ಸಮಾನತೆಯ ಬಗ್ಗೆ ಭಾಷಣಗಳನ್ನು ಬಿಗಿಯುತ್ತಾ, ಮಹಿಳೆಯರಿಗಾಗಿ ಅನೇಕ ಕಲ್ಯಾಣ ಕಾರ್ಯಕ್ರಮಗಳನ್ನು ರೂಪಿಸುತ್ತಾ, ಅವರ ರಕ್ಷಣೆಗಾಗಿ ಕಾನೂನಿನ ಮೇಲೆ ಕಾನೂನುಗಳನ್ನು ಜಾರಿಗೆ ತರುತ್ತಾ ಇರುವ ರಾಜಕೀಯ ವ್ಯವಸ್ಥೆಯ ಆಸಕ್ತಿ ಕೇವಲ ಪ್ರಚಾರ ಮತ್ತು ಪ್ರಣಾಳಿಕೆಗಳಿಗೆ ಮಾತ್ರ ಸೀಮಿತವೇ?

ಮಹಿಳೆಯರಿಗೆ ಮೀಸಲಾತಿಯನ್ನು ನೀಡಿದರೆ ಈಗಾಗಲೇ ರಾಜಕೀಯ ಹಿನ್ನೆಲೆಯನ್ನೂ, ಪ್ರಭಾವವನ್ನೂ ಹೊಂದಿರುವ ಕುಟುಂಬಗಳ ಮಹಿಳೆಯರೇ ಹೆಚ್ಚಿನ ಸಂಖ್ಯೆಯಲ್ಲಿ ಲೋಕಸಭೆ-ವಿಧಾನಸಭೆಗಳನ್ನು ಪ್ರವೇಶಿಸುತ್ತಾರೆ ಎಂದು ಹೇಳುತ್ತಿರುವವರಿಗೆ ಪ್ರಬಲ ರಾಜಕಾರಣಿಗಳ ಪುರುಷ ಸಂಬಂಧಿಗಳಿಗೆ ದೊರೆಯುತ್ತಿರುವ ಅವಕಾಶಗಳು ಗೋಚರವಾಗುತ್ತಿಲ್ಲವೇ? ಮಗ, ಭಾವ ಮೈದುನ, ತಮ್ಮ, ಅಣ್ಣ, ಸಹೋದರ ಅಥವಾ ಸಹೋದರಿಯ ಮಗ-ಇವರುಗಳನ್ನು ತಮ್ಮ ಪ್ರತಿನಿಧಿಗಳೆಂದು ಒಪ್ಪಿಕೊಳ್ಳುವ ರಾಜಕೀಯ ಪಕ್ಷಗಳು ಹಾಗೂ ಸಾರ್ವಜನಿಕರು ಮಗಳು, ತಾಯಿ, ಪತ್ನಿ, ಸಹೋದರಿ, ಅತ್ತಿಗೆ ಅಥವಾ ರಾಜಕಾರಣಿಗಳ ಇತರ ಮಹಿಳಾ ಸಂಬಂಧಿಗಳಿಗೆ ಚುನಾವಣೆಯಲ್ಲಿ ಸ್ಪರ್ಧಿಸಲು ಅವಕಾಶ ದೊರೆತಾಗ ಅಥವಾ ನೀಡುವ ಪ್ರಶ್ನೆ ಬಂದಾಗ ಅದನ್ನು ಅಸಹಜವಾದ ಬೆಳವಣಿಗೆ ಎಂದು ಪರಿಗಣಿಸುವುದು ಏತಕ್ಕೆ?

ರಾಜಕೀಯ ಕ್ಷೇತ್ರದಲ್ಲಿ ಮಹಿಳೆಯರಿಗೆ ವಿಶೇಷವಾದ ಮೀಸಲಾತಿಯನ್ನು ನೀಡುವುದು ಒಂದು 'ಸಂಖ್ಯಾತ್ಮಕ ಸಾಫಲ್ಯ'ವೇ ಹೊರತು, ಅದರಿಂದ ಮಹಿಳೆಯರ ಪರಿಸ್ಥಿತಿಯಲ್ಲಿ ಹೆಚ್ಚಿನ ಬದಲಾವಣೆಗಳನ್ನೇನೂ ತರಲಾಗದು ಎನ್ನುವ ವಾದವನ್ನು ನಾವು ತಳ್ಳಿ ಹಾಕುವಂತಿಲ್ಲ. ಅಧಿಕಾರ ದೊರೆತ ಮೇಲೆ ಬಹುಮಂದಿ ಮಹಿಳೆಯರು ಆ ಅಧಿಕಾರವನ್ನು ಉಳಿಸಿಕೊಳ್ಳುವ ಹೋರಾಟದಲ್ಲಿ ಮಗ್ನರಾಗಿ, 'ಮಹಿಳಾಪರ' ವಿಚಾರಗಳಿಗೆ ಸಂಬಂಧಿಸಿದ ಹೋರಾಟದಲ್ಲಿ ತಮ್ಮನ್ನು ತೊಡಗಿಸಿಕೊಳ್ಳುವುದಿಲ್ಲ ಎಂಬುದೂ ಸಂಪೂರ್ಣವಾಗಿ ಸುಳ್ಳಲ್ಲ. ಆದರೆ ಇಂತಹ ವಾದಗಳು ಪುರುಷರ ಮಟ್ಟಿಗೂ ಅನ್ವಯಿಸುವಂತಹುದು. ಅಪರಾಧೀಕರಣ, ಸ್ವಾರ್ಥತೆ, ಭ್ರಷ್ಟಾಚಾರ, ಧಾರ್ಮಿಕ ಮೂಲಭೂತವಾದ, ಜಾತೀಯತೆ, ಕ್ರೌರ್ಯ ಮುಂತಾದ ಸಮಾಜ ವಿರೋಧಿ ಪ್ರವೃತ್ತಿಗಳ ಹಿಡಿತದಲ್ಲಿ ಸಿಲುಕಿರುವ ಸಮಕಾಲೀನ ರಾಜಕಾರಣದಲ್ಲಿ ಪುರುಷರೇ ಆಗಲಿ, ಮಹಿಳೆಯರೇ ಆಗಲಿ ನಿಷ್ಠೆಯಿಂದ ಕಾರ್ಯ ನಿರ್ವಹಿಸುವುದು ಬಹು ಕಠಿಣಕರವಾದ ಕೆಲಸ. ಹಾಗೆಂದು ಸಮಾಜದಲ್ಲಿ ಅರ್ಧದಷ್ಟಿರುವ ಒಂದು ವರ್ಗವನ್ನೇ ರಾಜಕೀಯ ಪ್ರಕ್ರಿಯೆಯಿಂದ ದೂರವಿಡುವುದು ಸರಿಯಲ್ಲ. ಸಂಖ್ಯೆಯ ದೃಷ್ಟಿಯಿಂದೇ ಆದರೂ, ಇಂದು ಹೆಚ್ಚು-ಹೆಚ್ಚು ಮಹಿಳೆಯರು ಎಲ್ಲಾ ಮಟ್ಟಗಳಲ್ಲೂ ರಾಜಕೀಯ ಸಂಸ್ಥೆಗಳನ್ನು ಪ್ರವೇಶ ಮಾಡುವುದು ಅವಶ್ಯವಾಗಿದೆ. ಪ್ರವೇಶ ಪಡೆದನಂತರ ಅವರನ್ನು ಸಬಲೀಕರಣಗೊಳಿಸುವ ಪ್ರಕ್ರಿಯೆ ಸತತವಾಗಿ ನಡೆಯುತ್ತಲೇ ಇರಬೇಕು. ಇಷ್ಟೇ ಅಲ್ಲ, ಸ್ತ್ರೀ ವಿರೋಧಿ ಪ್ರವೃತ್ತಿಗಳನ್ನು ಪ್ರತಿಪಾದಿಸುವ, ಪೋಷಿಸುವ ಹಾಗೂ ಪುರುಷ ಪ್ರಾಧಾನ್ಯತೆಯ ಮೌಲ್ಯಗಳನ್ನು ಎತ್ತಿ ಹಿಡಿಯುವ ಮಹಿಳೆಯರು ರಾಜಕಾರಣವನ್ನು ಪ್ರವೇಶಿಸಿ, ಇಡೀ ಮಹಿಳಾ ಹೋರಾಟಕ್ಕೇ ಪೆಟ್ಟು ಬೀಳಬಹುದಾದಂಥ ಪರಿಸ್ಥಿತಿಯನ್ನು ಎದುರಿಸಲೂ ನಾವು ತಯಾರಾಗಿರಬೇಕು. ರಾಜಕೀಯವೇ ಕೊಳಕು, ಅದು ನಮ್ಮಂಥವರಿಗಲ್ಲ ಎಂದು ಹಿಂದೆ ನಿಂತು ಟೀಕೆ ಮಾಡುವ ಬದಲು ಸ್ತ್ರೀಪರ ಕಾಳಜಿಗಳನ್ನು ಹೊಂದಿರುವ, ಸ್ತ್ರೀ ಸಮಾನತೆಯ ಹೋರಾಟಕ್ಕೆ ಒಂದು ನಿಶ್ಚಿತ ಗುರಿಯನ್ನು ನೀಡಬಲ್ಲಂಥ ಮಹಿಳೆಯರು ರಾಜಕೀಯ ಪ್ರಕ್ರಿಯೆಯನ್ನು ಪ್ರವೇಶಿಸಲು, ಪ್ರಭಾವಿಸಲು ಮುಂದೆ ಬರದಿದ್ದಲ್ಲಿ, 'ಮೀಸಲಾತಿ' ರಾಜಕೀಯ ಚದುರಂಗದಾಟದಲ್ಲಿ ಪುರುಷ ಪ್ರಧಾನ ಮೌಲ್ಯ ವ್ಯವಸ್ಥೆ ಎಸೆಯುವ ಮತ್ತೊಂದು ದಾಳವಾಗುತ್ತದೆಯಷ್ಟೆ.

ಮಹಿಳೆಯರಿಗೆ ದೊರೆತಿರುವ ಸಮಾನತೆ ಬಹುಮಟ್ಟಿಗೆ ಒಂದು ಸೈದ್ಧಾಂತಿಕ ಮಟ್ಟದಲ್ಲಿದೆ. ಮೂಲಭೂತವಾದ ಬದುಕಿನ ಸಮಸ್ಯೆಗಳಿಗೆ ಪರಿಹಾರಗಳನ್ನು ಹುಡುಕಿ, ತಮಗೆ ದೊರೆತಿರುವ ಸಮಾನತೆಯನ್ನು ವಾಸ್ತವ್ಯದಲ್ಲಿ ಪಡೆಯಲು ಮಹಿಳೆಯರಿಗೆ ಅಡ್ಡಿ ಬಂದಿರುವ ಪ್ರವೃತ್ತಿಗಳನ್ನು ಸಮಾಜದ ಪ್ರತಿಯೊಂದು ಸಂಸ್ಥೆಯಿಂದಲೂ ಕಿತ್ತೊಗೆಯಬೇಕು. ಹುಟ್ಟುವ ಮೊದಲೇ ಸ್ತ್ರೀಯನ್ನು ಕಡೆಗಾಣಿಸುವ ಲಿಂಗ ಕುರುಡು ಸಾಮಾಜಿಕ ವ್ಯವಸ್ಥೆಯಲ್ಲಿ ಮಹಿಳಾ ಮೀಸಲಾತಿಯಂಥ ಕ್ರಾಂತಿಕಾರಿಯಾದ ಒಂದು ಹೆಜ್ಜೆಯನ್ನು ಅರ್ಥಪೂರ್ಣವಾಗಿ ಇಡಬೇಕಾದರೆ, ಸಾಮಾಜಿಕ-ಆರ್ಥಿಕ ಪರಿಸ್ಥಿತಿ ಬದಲಾಗುವುದರ ಜೊತೆ ಜೊತೆಗೆ, ಲಿಂಗ ಸಮಾನತೆಯನ್ನು ಆಧರಿಸಿದ ರಾಜಕೀಯ ವ್ಯವಸ್ಥೆಯಲ್ಲಿ ಭಾಗವಹಿಸಲು ಅವಶ್ಯವಾದ ಮಾನಸಿಕ ತಯಾರಿಯನ್ನು ಜೀವನದ ಪ್ರಾರಂಭಿಕ ಹಂತಗಳಿಂದಲೇ ಸ್ತ್ರೀ-ಪುರುಷರಿಬ್ಬರಿಗೂ ನೀಡಬೇಕು.

* ಮಹಿಳಾ ಅಭ್ಯರ್ಥಿಗಳು ಹೋರಾಡಬೇಕಾಗಿರುವುದು ವಿಧಾನಸಭೆ ಅಥವಾ ಸಂಸತ್ತಿನಲ್ಲಿ ಅಲ್ಲ. ಅವರ ಪಕ್ಷದ ಒಳಗಡೆ ಮೊದಲು ಹೋರಾಡಬೇಕಾಗಿದೆ.

  - ಸುಷ್ಮಾ ಸ್ವರಾಜ್, ಬಿ.ಜೆ.ಪಿ.

* ಇಂದು ಚುನಾವಣೆಗಳು 'ಹಣ ಸಂಗ್ರಹಿಸುವ ಶಕ್ತಿ' ಹಾಗೂ 'ಬಲ ಪ್ರದರ್ಶನ' ಇವುಗಳನ್ನು ಆಧರಿಸಿರುವುದರಿಂದ, ಹೆಂಗಸರು ನಿಜವಾಗಿಯು ಚುನಾವಣೆಯ ಕೆಲಸದಲ್ಲಿ ದೊಡ್ಡ ಆತಂಕಗಳನ್ನು ಎದುರಿಸುತ್ತಾರೆ. ಈ ಎರಡು ಸಂಗತಿಗಳಲ್ಲಿ ಸ್ತ್ರೀಯರು ಪುರುಷರೊಂದಿಗೆ ಸ್ಪರ್ಧಿಸಲಾರರು.

  - ಬೃಂದಾ ಕಾರಟ್, ಐದ್ವಾ

* ಹೆಂಗಸರು ಹೆಚ್ಚಿನ ಸಂಖ್ಯೆಯಲ್ಲಿ ಬರುವುದರಿಂದ ರಾಜಕೀಯ ವಾತಾವರಣದ ಗುಣಮಟ್ಟವು ಸುಧಾರಿಸುವುದೆಂದು ನಾನು ನಂಬುವೆ. ಹೆಂಗಸರಿಗೆಂದು ನಾವು ಚುನಾವಣೆ ಟಿಕೇಟ್ ಕೇಳಿದಾಗಲೆಲ್ಲ "ಅವರು ಗೆಲ್ಲುವರೆ?" ಎಂದು ಕೇಳುತ್ತಾರೆ. ಚುನಾವಣೆಗೆ ನಿಲ್ಲುವ ಗಂಡಸರೆಲ್ಲಾ ಗೆಲ್ಲುವವರೆ ಎಂಬಂತೆ.

  - ಮಾರ್ಗರೇಟ್ ಆಳ್ವಾ, ಕಾಂಗ್ರೆಸ್ (ಐ) ಪಕ್ಷ

ಇಂದಿನ ಪರಿಸ್ಥಿತಿಯಲ್ಲಿ ಮಹಿಳೆಯರಿಗೆ ಮೀಸಲಾತಿ ತುಂಬ ಅತ್ಯಗತ್ಯ

ರಾಧ-ಮೈಥಿಲಿ

ಮೈಸೂರು ನಗರದಲ್ಲಿ 'ರಾಧಾ-ಮೈಥಿಲಿ' ಈ ಹೆಸರುಗಳು ಯಾವಾಗಲೂ ಜೋಡಿಯಾಗಿಯೇ ಕೇಳಿ ಬರುತ್ತವೆ. ಒಬ್ಬರಿದ್ದಲ್ಲಿ ಮತ್ತೊಬ್ಬರಿದ್ದೇ ಇರಬೇಕು. ಇಬ್ಬರೂ ವಕೀಲರು. ಕಛೇರಿಯೂ ಒಂದೇ. ಒಂದೇ ಕೊಠಡಿಯಲ್ಲಿ ಇಬ್ಬರ ಆಸನಗಳೂ ಇರುತ್ತವೆ. ಒಬ್ಬರೊಂದಿಗೆ ಚರ್ಚಿಸಲು ಬಂದ ಕಕ್ಷಿಗೆ ಇಬ್ಬರಿಂದಲೂ ಮುಕ್ತ ಸಲಹೆಗಳು ದೊರೆಯುತ್ತವೆ. ಅದರಲ್ಲೂ ಹೆಣ್ಣುಮಕ್ಕಳ ಸಮಸ್ಯೆಯಾದರಂತೂ ತೀರಿತು. ಚರ್ಚೆಗೆ ಕಾಲಮಿತಿಯಿಲ್ಲ. ಇಬ್ಬರಲ್ಲೊಬ್ಬರ ವಕಾಲತ್ತು ಸಿಗುವುದಂತೂ ಗ್ಯಾರಂಟಿ. ಕನ್ಸಲ್ಟೇಷನ್ ಫೀ ಬಗ್ಗೆ ಚಿಂತಿಸುವ ಅಗತ್ಯವಿಲ್ಲ. ಇದಕ್ಕೆ ಹಿಂದೊಮ್ಮೆ ಮೈಸೂರಿನ 'ಸಮತಾ' ವೇದಿಕೆಯಲ್ಲಿ ಕೆಲಸ ಮಾಡಿದ ಅನುಭವವೂ, ಮಹಿಳೆಯರ ಬಗೆಗಿನ ಕಾಳಜಿ, ಬದ್ಧತೆಗಳೂ ಕಾರಣವೆನ್ನಬಹುದು. ಈ ಕಾಳಜಿ ಅವರು ಈಗಿರುವ ಜಿಲ್ಲಾ ಮಹಿಳಾ ಸಹಕಾರಿ ಬ್ಯಾಂಕಿನ ಸಾಲ ಯೋಜನೆಗಳಲ್ಲೂ ವ್ಯಕ್ತವಾಗುತ್ತದೆ. ಸುಲಭ ದರದ ಬಡ್ಡಿ, ಹೆಚ್ಚು ಕಷ್ಟ ಪಡದೆ ಪಡೆಯಬಹುದಾದ ಸಾಲ ಯೋಜನೆಗಳು ಮಹಿಳೆಯರ ಪರವಾಗಿದ್ದು ಜನಪ್ರಿಯವಾಗುತ್ತಿವೆ

ರಾಧ ಹಿಂದುಳಿದ ವರ್ಗಕ್ಕೆ ಸೇರಿದವರು ಆದರೆ ಮೈಥಿಲಿ ಮುಂದುವರಿದ ಜನಾಂಗದವರು. ಆದರೆ ಇವರ ಸ್ನೇಹದ ನಡುವೆ ಎಂದೂ ಜಾತಿ ಬಂದುದಿಲ್ಲ. ಇಬ್ಬರೂ ಬೇರೆ ಬೇರೆ ರಾಜಕೀಯ ಪಕ್ಷಗಳಲ್ಲಿದ್ದಾಗಲೂ ಇವರ ಸ್ನೇಹಕ್ಕೆ ಅಡ್ಡಿಯುಂಟಾದುದಿಲ್ಲ. ಸಕ್ರಿಯ ರಾಜಕಾರಣಿಗಳಾಗಿದ್ದು ನಗರಪಾಲಿಕೆಗೆ ಜಿಲ್ಲಾ ಪಂಚಾಯಿತಿಗಳಿಗೆ ಒಂದೆರಡು ಬಾರಿ ಸ್ಪರ್ಧಿಸಿದುದೂ ಉಂಟು. 'ಮಾನಸ' ಪತ್ರಿಕೆಗೆ ಯಾರನ್ನಾದರೂ ಮಹಿಳಾ ರಾಜಕಾರಣಿಗಳನ್ನು ಸಂದರ್ಶಿಸಬೇಕೆಂದಾಗ ತಕ್ಷಣ ಹೊಳೆದದ್ದು, ಸಂಪರ್ಕಿಸಿದಾಗ ಸಿಕ್ಕಿದ್ದು ಈ ವಕೀಲ ಜೋಡಿ. ಮಾತನಾಡಿಸಿದಾಗ ಮುಕ್ತವಾಗಿ ಸ್ಪಂದಿಸಿ ತಮ್ಮ ಅನಿಸಿಕೆಗಳನ್ನು ಧೈರ್ಯವಾಗಿ ನಮ್ಮ ಮುಂದಿಟ್ಟಿದ್ದಾರೆ. (ಅವರೊಂದಿಗೆ ನಡೆಸಿದ ಮಾತುಕತೆಗಳನ್ನು ನನ್ನದೇ ರೀತಿಯಲ್ಲಿ ಇಲ್ಲಿ ಹೇಳಿದ್ದೇನೆ. ವೆ. ವನಜ)

ಚುನಾವಣೆ ಎಂದರೆ ಹಣ, ಹೆಂಡ, ಗೂಂಡಾಗಿರಿ ಎಂದಾಗಿದೆ. ಇಂಥ ಚುನಾವಣೆಗಳಲ್ಲಿ ಮಹಿಳೆಯರು ಸ್ಪರ್ಧಿಸಲು ಹೆದರುತ್ತಾರೆ. ಸ್ಪರ್ಧಿಸಲಾರರು ಕೂಡ. ಮಹಿಳೆಯರು ರಾಜಕೀಯದಲ್ಲಿ ಹೆಚ್ಚು ಸಂಖ್ಯೆಯಲ್ಲಿ ಪಾಲ್ಗೊಳ್ಳಬೇಕು ಎನ್ನುವುದಾದರೆ ಈಗಿರುವ ಚುನಾವಣೆಯ ಸ್ವರೂಪ ಬದಲಾಗಿ ಹಣ, ಹೆಂಡ, ಗೂಂಡಾಗಿರಿಗಳಿಂದ ಮುಕ್ತವಾಗಬೇಕು. ಇಂದಿನ ಪರಿಸ್ಥಿತಿಯಲ್ಲಿ ಮಹಿಳೆಯರಿಗೆ ಮೀಸಲಾತಿ ತುಂಬಾ ಅತ್ಯಗತ್ಯ.

ರಾಜಕೀಯದಲ್ಲಿ ಜಾತೀಯತೆ ಹೆಚ್ಚು ಕೆಲಸ ಮಾಡುತ್ತದೆ. ಇಲ್ಲಿ ಸ್ವತಂತ್ರ ವ್ಯಕ್ತಿತ್ವ/ಧೋರಣೆ ಹೊಂದಿರುವವರಿಗೆ ಅವಕಾಶಗಳಿರುವುದಿಲ್ಲ. ಯಾರು 'ಹೌದಪ್ಪಾ'ಗಳೋ ಅವರಿಗೆ ಆದ್ಯತೆ ದೊರೆಯುತ್ತದೆ. ನೀವು ವಿಚಾರವಂತರು, ಸ್ವತಂತ್ರ ವ್ಯಕ್ತಿತ್ವವುಳ್ಳವರಾದಲ್ಲಿ ನಿಮಗೆ ಪುರುಷರಿಂದ, ಏಕೆ ಮಹಿಳೆಯರಿಂದಲೇ ನಿಮಗೆ ಬೆಂಬಲ ಸಿಗುವುದಿಲ್ಲ. 'ಹೌದಪ್ಪ'ಗಳೇ ಆಯ್ಕೆಯಾಗುತ್ತಾರೆ. ಅಲ್ಲದೆ, ಎಲ್ಲಿ ಮಹಿಳೆಯರು ಗೆಲ್ಲುವ ಸಾಧ್ಯತೆ ಇಲ್ಲವೋ, ಎಲ್ಲಿ ಪಕ್ಷಕ್ಕೆ ಜನರಿಂದ ಬೆಂಬಲ ಸಿಗುವುದಿಲ್ಲ ಎಂದನಿಸುತ್ತದೋ ಅಲ್ಲಿಗೆ ಮಹಿಳೆಯರಿಗೆ ಟಿಕೆಟ್ ದೊರೆಯುತ್ತದೆ! ಗೆಲ್ಲುವಂಥ ಕ್ಷೇತ್ರಗಳಿಗೆ ಪುರುಷರೇ ಅಭ್ಯರ್ಥಿಗಳಾಗಿರುತ್ತಾರೆ. ಪುರುಷರಲ್ಲಿ 'ನೀನು ಇಲ್ಲಿ ನಿಲ್ಲು' ನಾನು ಅಲ್ಲಿ ನಿಲ್ಲುತ್ತೇನೆ' ಎನ್ನುವ ಹೊಂದಾಣಿಕೆ ಆಗಿಬಿಟ್ಟಿರುತ್ತದೆ.

ಯಾವುದೇ ಪಕ್ಷ ಮಹಿಳಾ ಶಾಖೆಗಳು 'ಶೋ' ಪೀಸ್‌ಗಳಿದ್ದಂತೆ. ಇವುಗಳ ಸದಸ್ಯರು ನಿರ್ಧಾರ ತೆಗೆದುಕೊಳ್ಳುವ ಸ್ಥಿತಿಯಲ್ಲಿರುವುದಿಲ್ಲ. ಇವರು ತಮಗೆ ಟಿಕೆಟ್ ನೀಡುವಂತೆ ಬೇಡಿಕೆ ಸಲ್ಲಿಸುವುದುಂಟು. ಆದರೆ ಎಷ್ಟರ ಮಟ್ಟಿಗೆ ಆ ಬೇಡಿಕೆ ಈಡೇರುತ್ತದೆಂದು ಹೇಳಲಾಗದು. ಮಹಿಳೆಯರಿಗೆ ಟಿಕೆಟ್ ಕೊಡುವುದಕ್ಕಿಂತ ಇವರನ್ನು ಚುನಾವಣಾ ಪ್ರಚಾರಕ್ಕಾಗಿ ಬಳಸಿಕೊಳ್ಳುವುದೇ ಹೆಚ್ಚು. ಮಹಿಳೆಯರಿಗೆ ಟಿಕೆಟ್ ಸಿಗದಿರಲು ಇನ್ನೊಂದು ಕಾರಣವೆಂದರೆ, ಪಕ್ಷದ ಟಿಕೆಟ್ಟಿಗಾಗಿ ಹಣ ಕೊಡುವವರು ಇರುತ್ತಾರೆ. ಅಂದರೆ ಹಣ ಕೊಡಲು ಶಕ್ತರಾದವರಿಗೆ ಟಿಕೆಟ್, ಪಕ್ಷದಿಂದ ಪ್ರಚಾರ, ಬೆಂಬಲ ಎಲ್ಲವೂ ದೊರೆಯುತ್ತವೆ ಎಂದಾಯಿತು. ಹಣವಿಲ್ಲದವರು, ಅದರಲ್ಲೂ ಆರ್ಥಿಕವಾಗಿ ಹಿಂದುಳಿದಿರುವ ಮಹಿಳೆಯರು ಇವುಗಳಿಂದ ವಂಚಿತರಾಗುತ್ತಾರೆ. ಇಂಥ ಪರಿಸ್ಥಿತಿ ಪಕ್ಷಬೇಧವಿಲ್ಲದೆ ಎಲ್ಲಾ ಪಕ್ಷಗಳಲ್ಲೂ ಇದೆ.

ಇದು ಇಷ್ಟೇ ಆಗಿದ್ದರೆ ಪರವಾಗಿಲ್ಲ ಎನ್ನಬಹುದಾಗಿತ್ತೇನೋ! ಆದರೆ ಟಿಕೆಟ್ ನೀಡುವ ಭರವಸೆ ನೀಡಿ

ಅವರನ್ನು ಲೈಂಗಿಕವಾಗಿ ಬಳಸಿಕೊಳ್ಳುವ ಪ್ರಯತ್ನಗಳು ನಡೆಯುತ್ತವೆ. ಇದು ಸಾಧ್ಯವಾಗದಿದ್ದ ಸಂದರ್ಭಗಳಲ್ಲಿ ಶೀಲದ ಮೇಲೆ ಪ್ರಚಾರ, ಬ್ಲಾಕ್‌ಮೇಲ್ ಮುಂತಾದವು ನಡೆಯುವುದುಂಟು.

ಪರಿಸ್ಥಿತಿ ಹೀಗಿರುವಾಗ ಮೀಸಲಾತಿಯನ್ನು ಬೇಡ ಎನ್ನುವುದಾದರೂ ಹೇಗೆ? ಈಗ ರಾಜ್ಯದಲ್ಲಿರುವ ಮೀಸಲಾತಿಯಿಂದಾಗಿ ಕೇವಲ ಶೇ. 10ರಷ್ಟು ಮಹಿಳೆಯರು ಮಾತ್ರ ರಾಜಕೀಯಕ್ಕೆ ಹೊಸಬರಾಗಿ ಪ್ರವೇಶಿಸಿದ್ದಾರೆ. ಉಳಿದವರೆಲ್ಲಾ ರಾಜಕೀಯ ಹಿನ್ನೆಲೆ ಉಳ್ಳವರೇ. ಈ ಮೀಸಲಾತಿ ಹಿಂದುಳಿದ ಜಾತಿ/ವರ್ಗಗಳಿಗೆ, ಪರಿಶಿಷ್ಟ ಜಾತಿ/ಪಂಗಡಗಳಿಗೆ ಬೇಕೇ ಬೇಡವೆ ಎನ್ನುವ ಪ್ರಶ್ನೆ ತಲೆ ಎತ್ತಿದೆ. ಇದುವರೆಗೆ ಸಿಕ್ಕಿದ ಯಾವುದೇ ಅವಕಾಶವನ್ನು ಸಮರ್ಥವಾಗಿ ಬಳಸಿಕೊಳ್ಳಲು ಶಕ್ತರಾಗಿರುವವರೆಂದರೆ, ಮುಂದುವರೆದ ಜಾತಿಗಳವರು, ವಿದ್ಯಾವಂತರು, ನಗರ ಪ್ರದೇಶದವರು, ರಾಜಕೀಯ ಹಿನ್ನೆಲೆಯಿರುವವರೇ. ಈಗ ಮೀಸಲಾತಿ ದೊರಕಿದರೆ ಅದರ ಪ್ರಯೋಜನ ಪಡೆಯುವವರು ಮುಖ್ಯವಾಗಿ ಮೇಲೆ ಹೇಳಿದ ಹಿನ್ನೆಲೆಯಿರುವವರೇ. ಆದರೆ ನಿಜವಾಗಿ ರಾಜಕೀಯಕ್ಕೆ ಬರಬೇಕಾದವರೆಂದರೆ, ಮಹಿಳಾ ಸಮಸ್ಯೆಗಳನ್ನು ಅರಿತಿರುವವರು, ಗ್ರಾಮೀಣ ಹಿನ್ನೆಲೆಯವರು, ಹಿಂದುಳಿದ ವರ್ಗಗಳಿಂದ ಬಂದವರು. ಇದನ್ನು ಹೇಳುವಾಗ ನಮ್ಮ ಮುಂದೆ ಕೆಲವು ಉತ್ತಮ ಉದಾಹರಣೆಗಳಿರುವುದನ್ನು ನೆನಪಿಸಿಕೊಳ್ಳುತ್ತೇನೆ. ಇಂಥವರು ಜನರಿಗಾಗಿ ಉತ್ತಮ ಕೆಲಸ ಮಾಡಿ (ಬಿ. ಟಿ. ಲಲಿತಾನಾಯಕ್ ಮುಂತಾದವರು) ತೋರಿಸಿದ್ದಾರೆ.

- ಮಹಿಳೆಯರೇ ಮಹಿಳೆಯರನ್ನ ಬೆಂಬಲಿಸದಿರುವ ಪರಿಸ್ಥಿತಿಯಲ್ಲಿ ಅವರಲ್ಲಿ ರಾಜಕೀಯ ಅರಿವುಂಟುಮಾಡುವ ಅಗತ್ಯವಿದೆ.

- ಮಹಿಳಾ ಅಭ್ಯರ್ಥಿಗಳಿಗೆ ಮಹಿಳೆಯರು ಓಟು ಬ್ಯಾಂಕುಗಳಾಗಬೇಕಿದೆ.

- ಗ್ರಾಮೀಣ ಮಹಿಳೆಯರ ಕಡೆ ಈ ನಿಟ್ಟಿನಲ್ಲಿ ಗಮನ ಹರಿಸಬೇಕಾಗಿದೆ.

ಹಿಂದುಳಿದ ಜಾತಿ/ವರ್ಗ, ಪರಿಶಿಷ್ಟ ಜಾತಿ/ಪಂಗಡಗಳಿಗೆ ಮೀಸಲಾತಿ ಕೊಡುವ ಬಗ್ಗೆ ಮಾತ್ರ ತಮ್ಮ ಭಿನ್ನಾಭಿಪ್ರಾಯವನ್ನು ವ್ಯಕ್ತಪಡಿಸಿದ ಮೈಥಿಲಿ ಉಳಿದ ಎಲ್ಲಾ ವಿಚಾರಗಳಿಗೆ ರಾಧಾರವರೊಂದಿಗೆ ತಮ್ಮ ಸಹಮತವನ್ನು ವ್ಯಕ್ತಪಡಿಸಿದರು. ಅವರ ಪ್ರಕಾರ, ಹಿಂದುಳಿದ ಜಾತಿ/ವರ್ಗಗಳಿಗೆ ಮೀಸಲಾತಿ ಕೊಡುವ ಬಗ್ಗೆ ತಮ್ಮ ವಿರೋಧ ಇಲ್ಲವಾದರೂ ಸದ್ಯದ ಪರಿಸ್ಥಿತಿಯಲ್ಲಿ ಮಹಿಳೆಯರಿಗೆ ಮೀಸಲಾತಿ ಪಡೆಯುವ ಕಡೆ ನಾವು ಹೆಚ್ಚು ಒತ್ತುಕೊಡಬೇಕಾಗಿದೆ. ಮೊದಲು ಮೀಸಲಾತಿ ಸಿಗಲಿ. ಅದು ಯಾರು ಯಾರಿಗೆ ಎಷ್ಟೆಷ್ಟು? ಎಂದು ನಂತರದಲ್ಲಿ ಚರ್ಚೆ ಆಗಲಿ, ಮೊದಲು ಮಹಿಳೆಯರು ರಾಜಕೀಯಕ್ಕೆ ಬರುವುದೇ ನಮಗೆ ಮುಖ್ಯವಾಗಬೇಕು. ಇದು ಮೊದಲ ಹಂತ. ಕಾಲ ಕ್ರಮೇಣ ಜಾತಿವಾರು ಮೀಸಲಾತಿ ಕುರಿತಂತೆ ಯೋಚಿಸುವುದು ಸೂಕ್ತ. ಈ ಸಂದರ್ಭದಲ್ಲಿ ಅಂಥ ಪ್ರಶ್ನೆಗಳು ಮಹಿಳೆಯರನ್ನು ಒಡೆಯಲು ಮಾತ್ರ ಸಹಾಯಕವಾಗುತ್ತವೆ. ಇದನ್ನು ತಪ್ಪಿಸಬೇಕು ಎನ್ನುವುದು ಮೈಥಿಲಿಯವರ ಸ್ಪಷ್ಟ ಅಭಿಪ್ರಾಯ.

* ಮಹಿಳಾ ಮೀಸಲಾತಿ ಕುರಿತು ಗಂಡಸರನ್ನು ಗುಪ್ತ ಮತ ಚಲಾಯಿಸಲು ಕೇಳಿದರೆ ಮೀಸಲಾತಿ ಬಿಲ್ ಅನ್ನು ಗಾಳಿಗೆ ತೂರಬೇಕಾಗುತ್ತದೆ. ಒಂದೆರಡು ಮತ ಸಿಗಬಹುದಷ್ಟೇ! ಮಹಿಳೆಯರ ವೋಟನ್ನು ಕಬಳಿಸಲು ಎಲ್ಲರೂ ಮೀಸಲಾತಿ ಬಿಲ್ ಜಾರಿಗೆ ಬರಬೇಕೆನ್ನುತ್ತಾರೆ. ಆದ್ದರಿಂದ, ಬಿಲ್ ಅನ್ನು ಸಂತೋಷವಾಗಿ ಒಪ್ಪಿಕೊಳ್ಳುತ್ತೇವೆ ಎಂಬ ನಾಟಕವಾಡುತ್ತಾರೆ.

- ಉಮಾಭಾರತಿ, ಬಿಜೆಪಿ ಪಕ್ಷ

* ಬಿಲ್ ಅನ್ನು ಸಾರ್ವಜನಿಕವಾಗಿ ಬೆಂಬಲಿಸಿ, ತಮ್ಮ ಕನಿಷ್ಟ ಸಾಮಾನ್ಯ ಕಾರ್ಯಕ್ರಮದಲ್ಲಿ ಅಳವಡಿಸಿಕೊಂಡಿದ್ದಾರಾದರೂ ಅದರ ನಿಜವಾದ ಪರಿಣಾಮವನ್ನು ಈಗ ಅರಿತುಕೊಳ್ಳುತ್ತಿದ್ದಾರೆ. ಗಂಡಸರು, ನಾವೆಷ್ಟು ಪ್ರಗತಿಪರರು ಎಂದು ತೋರಿಸಿಕೊಳ್ಳಲು ಹಾಗೂ ಮಹಿಳಾ ವೋಟುಗಳನ್ನು ಪಡೆಯುವ ಉದ್ದೇಶದಿಂದಷ್ಟೆ ತಮ್ಮ ಪ್ರಣಾಳಿಕೆಗಳಲ್ಲಿ ಮಹಿಳಾ ಮೀಸಲಾತಿ ಬಿಲ್ ಅನ್ನು ಸೇರಿಸಿಕೊಂಡಿದ್ದಾರೆ.

- ಪ್ರಮಿಳಾ ದಂಡವತೆ, ಜನತಾ ಪಕ್ಷ

ಮಹಿಳೆಯರು ರಾಜಕೀಯವಾಗಿ ಹಿಂದುಳಿಯಲು ಪಿತೃಪ್ರಧಾನ ವ್ಯವಸ್ಥೆ ಕಾರಣ

ಕೆ. ರಾಮದಾಸ್ ಅವರೊಡನೆ ಒಂದು ಸಂದರ್ಶನ

(ಮೈಸೂರಿನಲ್ಲಿ ಕೆ. ರಾಮದಾಸ್‌ರವರ ಹೆಸರು ಯಾರು ತಾನೆ ಕೇಳಿಲ್ಲ? ಮೈಸೂರು ವಿಶ್ವವಿದ್ಯಾನಿಲಯದ ಮಹಾರಾಜಾ ಕಾಲೇಜಿನಲ್ಲಿ ಕನ್ನಡ ಭಾಷಾ ಪ್ರೊಫೆಸರರಾಗಿರುವ ಇವರು ವಿದ್ಯಾರ್ಥಿಗಳ ನೆಚ್ಚಿನ ಗುರುಗಳು. ಯುವಜನರ ಮನದಲ್ಲಿ ಕನಸುಗಳ ಬಿತ್ತಿದವರು; ಆದರ್ಶಗಳ ಹುಟ್ಟು ಹಾಕಿದವರು, ಮಾನವೀಯ ಮೌಲ್ಯಗಳ ಪ್ರವಾದಿಗಳು. ಅಷ್ಟೇ ಅಲ್ಲ, ಕೆಚ್ಚೆದೆಯ ಹೋರಾಟಗಾರರು. ಇವರು ಕಂಡ ಜಾತ್ಯಾತೀತ ಸಮಾಜದ ಕನಸು ಇವರ ವಿದ್ಯಾರ್ಥಿಗಳಲ್ಲಿ ಹಲವರನ್ನು ಅಂತರಜಾತೀಯ ವಿವಾಹವಾಗಲು ಪ್ರೇರೇಪಿಸಿದೆ; ಅವರಿಟ್ಟ ಹೆಜ್ಜೆಯನ್ನೇ ಅನುಸರಿಸುವಂತೆ ಮಾಡಿದೆ. ಈ ಮಾತಿಗೆ ಹಲವು ನಿದರ್ಶನಗಳಿವೆ. ದೃಢ ಮನಸ್ಸಿನ ದಿಟ್ಟ ನಿಲುವಿನ ಪ್ರತಿಭಾವಂತ ಅಧ್ಯಾಪಕರು. ನ್ಯಾಯಕ್ಕಾಗಿ ನಡೆಯುವ ಯಾವುದೇ ಹೋರಾಟವಾಗಲಿ, ಅದರ ಮುಂಚೂಣಿಯಲ್ಲಿರುವವರು. ಸಾಮಾಜಿಕ ತುಳಿತಕ್ಕೊಳಗಾದವರ ಬಗ್ಗೆ ಸದಾ ಅನುಕಂಪವುಳ್ಳವರು. ಇವರ ನಿಲುವು ಸದಾ ಅವರ ಪರವಾದುದೇ. ಇತ್ತೀಚೆಗೆ ಅಂತರ್ಜಾತೀಯ ವಿವಾಹವಾದವರಿಗೆ ನೈತಿಕ ಬೆಂಬಲ ಮತ್ತಿತರ ಸಹಕಾರ ನೀಡುವ ಉದ್ದೇಶದಿಂದಲೇ 'ಮಾನವನ ಮಂಟಪ' ಎಂಬ ವೇದಿಕೆಯನ್ನು ಹುಟ್ಟು ಹಾಕಿರುವ ಇವರು 'ಜಾತ್ಯಾತೀತರ' ಸಂಘಟನೆ ಮಾಡುವ ನಿಟ್ಟಿನಲ್ಲಿ ದುಡಿಯುತ್ತಿದ್ದಾರೆ. ತಮ್ಮ ಮುಗ್ಧ ಹಾಗೂ ನಿರ್ಭಿಡೆಯ ಸ್ವಭಾವದಿಂದಲೇ ನಮ್ಮ ಮನಗೆಲ್ಲುವ ಇವರು ಮಹಿಳಾ ಮೀಸಲಾತಿಯ ಬಗ್ಗೆ ತಮ್ಮ ಅಭಿಪ್ರಾಯವನ್ನು 'ಮಾನಸ'ಕ್ಕೆ ತಿಳಿಸಿದ್ದಾರೆ.)

ಪ್ರ : ಮಹಿಳಾ ಮೀಸಲಾತಿಯ ಬಗ್ಗೆ ಎಲ್ಲೆಲ್ಲೂ ಚರ್ಚೆ ನಡೆದಿದೆ. ಇದರ ಬಗ್ಗೆ ನಿಮ್ಮ ಅಭಿಪ್ರಾಯವೇನು?

ರಾ. : ಇದೊಂದು ಒಳ್ಳೆಯ ಸೂಚನೆ. ಡಾ. ರಾಮ ಮನೋಹರ ಲೋಹಿಯಾರವರು, ಮೊಟ್ಟ ಮೊದಲು ಮಹಿಳೆಯರ ಅಭಿವೃದ್ಧಿಯಾಗಬೇಕು. ಎಲ್ಲಾ ಮಹಿಳೆಯರು ಯಾವುದೇ ಕ್ಷೇತ್ರದಲ್ಲಿ ಶೇ. 70ಕ್ಕೆ ಕಡಿಮೆಯಿಲ್ಲದಂತೆ ಭಾಗವಹಿಸಬೇಕು; ಅವರು ಮುಂಚೂಣಿಯಲ್ಲಿರಬೇಕು. ಯಾವುದೇ ಮೀಸಲಾತಿ ಜಾತಿವಾರು ಮೀಸಲಾತಿ ಆಗಿರಬೇಕು ಎಂದಿದ್ದರು. ಈಗ ಶೇ. 33 ಮೀಸಲಾತಿಯ ಬಗ್ಗೆ ಮಾತುಕತೆ ನಡೆಯುತ್ತಿದೆ. ಇದು ಸಾಲದು. ಶೇ. 50 ಮೀಸಲಾತಿ ಮಹಿಳೆಯರಿಗೆ ಕೊಡಬೇಕು.

ಪ್ರ. : ಮಹಿಳೆಯರು ರಾಜಕೀಯವಾಗಿ ಹಿಂದುಳಿದಿರಲು ಕಾರಣವೇನು?

ಇದಕ್ಕೆ ಮುಖ್ಯ ಕಾರಣ, ನಮ್ಮ ಸಮಾಜದಲ್ಲಿರುವ ಪಿತೃ ಪ್ರಧಾನ ವ್ಯವಸ್ಥೆ. ರಾಜಕೀಯ ಕ್ಷೇತ್ರವೂ ಇದಕ್ಕೆ ಹೊರತಾಗಿಲ್ಲ. ರಾಜಕೀಯದಲ್ಲಿ ಮಹಿಳೆಯರು ಮುಂದುವರೆಯಲು ಪುರುಷರು ಬಿಡುವುದಿಲ್ಲ. ಅದರಲ್ಲೂ ಪರಿಶಿಷ್ಟ ಜಾತಿ/ಪಂಗಡಗಳು ಮತ್ತಿತರ ಹಿಂದುಳಿದ ವರ್ಗಗಳ ಮಹಿಳೆಯರ ರಾಜಕೀಯ ಪ್ರವೇಶ ಅಷ್ಟು ಸುಲಭವಲ್ಲ.

ಪ್ರ. : ಮೀಸಲಾತಿಯ ಬಗ್ಗೆ ನಿಮ್ಮ ಸ್ಪಷ್ಟ ನಿಲುವೇನು?

ಉ. : ಮೀಸಲಾತಿ ಬೇಕು. ಆದರೆ ಇದೊಂದು ಶಾಶ್ವತ ಪರಿಹಾರವಲ್ಲ. ಶತಮಾನಗಳಿಂದ ಶಿಕ್ಷಣದಿಂದ ವಂಚಿತರಾದ ಮಹಿಳೆಯರಿಗೆ ಮೀಸಲಾತಿ ನೀಡುವುದರಿಂದಾಗಿ ಅವಕಾಶ ದೊರೆಯುವುದು ಮಾತ್ರವಲ್ಲ, ರಾಜಕೀಯ ಅರಿವನ್ನೂ ಮೂಡಿಸುತ್ತಿದೆ. ಮೀಸಲಾತಿ ಶೇ. 33ರಷ್ಟೇ ಆದರೂ ಚುನಾವಣಾ ಪ್ರಕ್ರಿಯೆಯಲ್ಲಿ ಭಾಗವಹಿಸುವವರ ಸಂಖ್ಯೆ ಎಷ್ಟಾಗುವುದಿಲ್ಲ?! ಅಂದ ಮೇಲೆ ಎಷ್ಟೋ ಮಹಿಳೆಯರಲ್ಲಿ ರಾಜಕೀಯ ಪ್ರಜ್ಞೆ-ಅರಿವು ಮಾತ್ರವಲ್ಲ, ತಮ್ಮ ಹಕ್ಕುಗಳಿಗಾಗಿ ಹೋರಾಡುವ ಛಾತಿ, ಆತ್ಮವಿಶ್ವಾಸಗಳು ಮೂಡುವುದರಲ್ಲಿ ಸಂಶಯವಿಲ್ಲ.

ಕರ್ನಾಟಕದಲ್ಲಿ ಪಂಚಾಯಿತಿ ವ್ಯವಸ್ಥೆಯಲ್ಲಿ ಮೀಸಲಾತಿ ಇರುವುದರಿಂದಾಗಿಯೇ ಹೆಚ್ಚಿನ ಮಹಿಳೆಯರು ರಾಜಕೀಯದಲ್ಲಿ ಭಾಗವಹಿಸುವುದು ಸಾಧ್ಯವಾಗಿದೆ. ಮಹಿಳೆಯರು ಆತ್ಮವಿಶ್ವಾಸದಿಂದ ಮಾತನಾಡತೊಡಗಿದ್ದಾರೆ. ಇತ್ತೀಚೆಗೆ ಅಂತರಾಷ್ಟ್ರೀಯ ಮಹಿಳಾ ದಿನಾಚರಣೆಯ ಅಂಗವಾಗಿ ನಡೆದ ಒಂದು ರ್‍ಯಾಲಿಯಲ್ಲಿ ಎಂಟು ಸಾವಿರ ಮಂದಿ ಗ್ರಾಮೀಣ ಮಹಿಳೆಯರು ಭಾಗವಹಿಸಿದರು. ಅದೆಷ್ಟು ಆತ್ಮವಿಶ್ವಾಸದಿಂದ ಮೈಕಿನ ಮುಂದೆ ಬಂದು ಮಾತನಾಡುತ್ತಿದ್ದರು? ಎಂಥ ಹೋರಾಟದ ಛಲ, ಮನೋಭಾವ ಹೊಂದಿದ್ದರು? ಇಂಥ ಕೆಲಸವನ್ನು ಸ್ವಯಂ ಸೇವಾ ಸಂಸ್ಥೆಯೊಂದು ಮಾಡಲು ಸಾಧ್ಯವಾಗುತ್ತದೆಂದರೆ ನಿಜವಾಗಿಯೂ ಮೆಚ್ಚಬೇಕಾದುದೇ. ಎಲ್ಲ ಸಂಘ ಸಂಸ್ಥೆಗಳು ಇಷ್ಟರ ಮಟ್ಟಿಗೆ ಕೆಲಸ ಮಾಡಲು ಸಾಧ್ಯವಾಗುತ್ತಿದ್ದರೆ ಎಷ್ಟು ಚೆನ್ನ? ಸಂಘ-ಸಂಸ್ಥೆಗಳು ಗ್ರಾಮೀಣ

ಪ್ರದೇಶಗಳ ಕಡೆ ಗಮನ ಹರಿಸಬೇಕು; ಮಹಿಳೆಯರ ಸಮಸ್ಯೆಗಳಿಗೆ ಹೆಚ್ಚು ಸ್ಪಂದಿಸಬೇಕು.

ಮೀಸಲಾತಿ ಮಹಿಳಾ ಚಳುವಳಿಗೆ ಒಂದು 'ಕಿಕ್' ಕೊಡಬಲ್ಲದು; ಪೂರಕವಾಗಬಲ್ಲದು. ಒಂದು ಕ್ರಾಂತಿಕಾರಕ ಬದಲಾವಣೆಗೆ ನಾಂದಿ ಹಾಡಬಲ್ಲದು. ತೀವ್ರಗತಿಯ ಬದಲಾವಣೆಗೊಳಗಾಗುತ್ತಿರುವ ಸಮಾಜದಲ್ಲಿ ಮಹಿಳೆಯರಿಗೆ ಸಿಗಬಹುದಾದ ಇಂಥ ಅವಕಾಶ ಅವರ ಬದುಕಿನಲ್ಲಿ ಒಂದು ದೊಡ್ಡ ಕ್ರಾಂತಿಯನ್ನೇ ತರಬಲ್ಲದು.

ಪ್ರ.: ಮಹಿಳೆಯರು ರಾಜಕೀಯದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುವುದರಿಂದ ಅವರ ಸ್ಥಾನ ಮಾನಗಳ ಮೇಲೆ ಪರಿಣಾಮ ಬೀರುತ್ತದೆಂದು ಭಾವಿಸುವಿರಾ?

ಖಂಡಿತ, ಮಹಿಳೆಯರು ಹೆಚ್ಚಿನ ಸಂಖ್ಯೆಯಲ್ಲಿ ರಾಜಕೀಯ ಪ್ರವೇಶ ಮಾಡುವುದರಿಂದ ಅವರ ಸ್ಥಾನಮಾನಗಳಲ್ಲಿ ಬದಲಾವಣೆ ಉಂಟಾಗಿಯೇ ಆಗುತ್ತದೆ. ಅವರಲ್ಲಿ ಬೆಳೆಯಬಹುದಾದ ರಾಜಕೀಯ ಪ್ರಜ್ಞೆ, ಹಕ್ಕುಗಳ ಬಗೆಗಿನ ಅರಿವು, ಆತ್ಮವಿಶ್ವಾಸ, ಹೋರಾಟದ ಮನೋಭಾವಗಳು ಮಹಿಳೆಯರ ಇಂದಿನ ಸಾರಾಯಿ ನಿಷೇಧದಂಥ ಬೇಡಿಕೆಗಳಿಗೆ ರಾಜಕೀಯ ಬೆಂಬಲ ತಾನಾಗಿಯೇ ದೊರಕುವಂತೆ ಮಾಡುತ್ತವೆ. ಮಹಿಳೆಯರು ಮಹಿಳೆಯರ ಬೇಡಿಕೆಗಳಿಗೆ ಸ್ಪಂದಿಸುತ್ತಾರೆ. ಮಾನ್ಯತೆ ನೀಡುತ್ತಾರೆ. ಆಗ ಯಾವುದೇ ಸರಕಾರ ಅಂಥ ಬೇಡಿಕೆಗಳನ್ನು ತಳ್ಳಿಹಾಕಲು ಶಕ್ತವಾಗುವುದಿಲ್ಲ.

ಆರಂಭದಲ್ಲಿ ಯಾವುದೇ ರಾಜಕೀಯ ಪಕ್ಷ ತನಗೆ ಅನುಕೂಲವಾಗುವಂಥ ಅಭ್ಯರ್ಥಿಗಳಿಗೇ ಎಲ್ಲಾ ರೀತಿಯ ಬೆಂಬಲ ನೀಡುತ್ತದಾದರೂ ಮಮತಾ ಬ್ಯಾನರ್ಜಿಯಂಥವರೂ ಅವಕಾಶ ಪಡೆಯುತ್ತಾರೆ. ಮಮತಾ ಬ್ಯಾನರ್ಜಿ ಪಶ್ಚಿಮ ಬಂಗಾಳದ ಜ್ಯೋತಿಬಸು ಸರಕಾರವನ್ನೇ ಎದುರು ಹಾಕಿಕೊಳ್ಳುವ ಧೈರ್ಯ ಮಾಡಿದ್ದಾರೆ. ಇಂಥ ಹೋರಾಟದ ಮನೋಭಾವದ ಮಹಿಳೆಯರು ರಾಜಕೀಯ ಪ್ರವೇಶ ಮಾಡಬೇಕು. ಮಹಿಳಾ ಚಳುವಳಿಕಾರರು ಈ ಅವಕಾಶವನ್ನು ಪಡೆದುಕೊಳ್ಳಬೇಕು. ಆಗಲೇ ಮಹಿಳಾ ವಿಮೋಚನೆ ಸಾಧ್ಯವಾಗಬಹುದೇ ಹೊರತು ಕೇವಲ ಮೀಸಲಾತಿಯಿಂದಲ್ಲ. ಅಂಥ ನಂಬಿಕೆ ನನಗಿಲ್ಲ.

ಮಹಿಳೆಯರ ಮೇಲೆ ಮಾನಸಿಕ ಧಾಳಿ ನಡೆಯುತ್ತಿದೆ. ಗ್ರಾಹಕ ಸಂಸ್ಕೃತಿ (Consumerism) ಇಂದಿನ ಸಾಂಸ್ಕೃತಿಕ ಪರಿಸರದ ಮೇಲೆ ಧಾಳಿ ಆರಂಭಿಸಿದೆ. ಮೌಲ್ಯಗಳು ಬದಲಾಗುತ್ತಿವೆ. ಯಾವುದೇ ಸಾಂಸ್ಕೃತಿಕ ಬದಲಾವಣೆ ನಿಧಾನಗತಿಯದ್ದು. ಆದರೆ ಗ್ರಾಹಕ ಸಂಸ್ಕೃತಿ ಹಾಗಲ್ಲ. ಅದು ತೀವ್ರಗತಿಯದ್ದು. ಸಾಂಸ್ಕೃತಿಕ globalisation ಎಂದಿದ್ದರೂ ಆಗಬೇಕು. ಅಲ್ಲಿಯವರೆಗೆ ಮಹಿಳೆಯರ ಸಮಸ್ಯೆಗಳು ಹೆಚ್ಚುತ್ತಲೇ ಇರುತ್ತವೆ.

ಮೀಸಲಾತಿಯೊಂದಿಗೇ ಇವುಗಳಿಗೆ ಪರಿಹಾರವಾಗುವುದಿಲ್ಲ. ಅದಕ್ಕೆ ಅದರದೇ ಆದ ಮಿತಿಗಳಿವೆ. ಆದರೂ ನಾನು ಮೀಸಲಾತಿಯನ್ನು ಸ್ವಾಗತಿಸುತ್ತೇನೆ.

ಪ್ರ. ಹಿಂದುಳಿದ ವರ್ಗಗಳು, ಪರಿಶಿಷ್ಟ ಜಾತಿ/ಪಂಗಡಗಳ ಮಹಿಳೆಯರಿಗೆ ಪ್ರತ್ಯೇಕ ರಾಜಕೀಯ ಮೀಸಲಾತಿ ಅಗತ್ಯ ಎಂದು ಭಾವಿಸುತ್ತೀರಾ?

ಉ. :ಖಂಡಿತವಾಗಿ, ಪರಿಶಿಷ್ಟ ಜಾತಿ/ಪಂಗಡಗಳು ಹಾಗೂ ಹಿಂದುಳಿದ ವರ್ಗಗಳ ಮಹಿಳೆಯರಿಗೆ ಪ್ರತ್ಯೇಕ ಮೀಸಲಾತಿಯ ಅಗತ್ಯವಿದೆ. ಸಾಮಾನ್ಯ ಮೀಸಲಾತಿಯಿಂದ ಅವರಿಗೇನೂ ಪ್ರಯೋಜನವಾಗಲಾರದು. ನೋಡಿ, ಲಂಬಾಣಿ ಜನಾಂಗದವರ ಸಮಸ್ಯೆ ಬಿ. ಟಿ. ಲಲಿತಾನಾಯಕರಿಗಿಂತ ಇತರರಿಗೆ ಗೊತ್ತಿರಲು ಸಾಧ್ಯವೆ? ದಲಿತ ಮಹಿಳೆಯರು ಹೆಚ್ಚಾಗಿರುವ ಕ್ಷೇತ್ರಗಳು ದಲಿತ ಮಹಿಳೆಯರಿಗೇ ಮೀಸಲು ಕ್ಷೇತ್ರಗಳಾಗಬೇಕು. ಯಾವ ಯಾವ ಜಾತಿ/ಜನಾಂಗದವರು ಎಲ್ಲಿ ಹೆಚ್ಚಿನ ಸಂಖ್ಯೆಯಲ್ಲಿರುತ್ತಾರೋ, ಅಂಥ ಜನಾಂಗಗಳ ಮಹಿಳೆಯರಿಗೇ ಆ ಕ್ಷೇತ್ರಗಳು ಮೀಸಲಾಗಬೇಕು. ಆಗ ಮಾತ್ರ ಮೀಸಲಾತಿ ಹೆಚ್ಚು ಪರಿಣಾಮಕಾರಿಯಾಗಲು ಸಾಧ್ಯ. ಈ ಮೀಸಲಾತಿ ಒಂದು ವೈಜ್ಞಾನಿಕ ದೃಷ್ಟಿಕೋನ ಹೊಂದಿರಬೇಕು. ಮಂಡಲ್ ವರದಿ ಇದೆ. ಕರ್ನಾಟಕದಲ್ಲಿ ಚಿನ್ನಪ್ಪರೆಡ್ಡಿ ವರದಿ ಇದೆ. ಯಾವುದು ಹೆಚ್ಚು ವೈಜ್ಞಾನಿಕವೋ ಅಂಥ ವರದಿಗಳನ್ನು ಆಧರಿಸಿ ಮೀಸಲಾತಿ ನೀಡಬಹುದು. ಇಲ್ಲವಾದರೆ ರಾಜಕೀಯ ಅನುಕೂಲಕ್ಕಾಗಿ ಮಾಡುವ ಯಾವುದೇ ಮೀಸಲಾತಿ 'ಡೋಂಗಿ' ಆಗುತ್ತದೆ.

ಪ್ರ. : ದೇವೇಗೌಡರು ಮೀಸಲಾತಿ ಮಸೂದೆಯನ್ನು ಈ ಅಧಿವೇಶನದಲ್ಲೇ ಅಂಗೀಕರಿಸುವುದಾಗಿ ಇತ್ತೀಚೆಗೆ ಹೇಳಿಕೆ ನೀಡಿದ್ದಾರೆ. ಇದನ್ನು ನೀವು ನಂಬುತ್ತೀರಾ?

ಮಸೂದೆ ಅಂಗೀಕಾರವಾಗುತ್ತೆ ಅನ್ನುವ ನಂಬಿಕೆ ನನಗಿಲ್ಲ. ಪಾರ್ಲಿಮೆಂಟಿನಲ್ಲಿ ಪುರುಷ ಸದಸ್ಯರಿಂದಲೇ ಸಾಕಷ್ಟು ವಿರೋಧವಿದೆ. ವೈಯಕ್ತಿಕವಾಗಿ ಕೂಡ ದೇವೇಗೌಡರಿಗೆ ಅಂಥ Conviction ಇದೆ ಎಂದು ನನಗನ್ನಿಸುವುದಿಲ್ಲ.

(ಸಂದರ್ಶಿಸಿ ವರದಿ ಮಾಡಿದವರು ಮ. ವನಜ)

'ಮಹಿಳಾ ಮೀಸಲಾತಿ ಮಸೂದೆ - 1996' ಕುರಿತ ವಿಚಾರ ಸಂಕಿರಣದ ಸಂಕ್ಷಿಪ್ತ ವರದಿ

ಲೋಕಸಭೆ ಮತ್ತು ರಾಜ್ಯ ಶಾಸಕಾಂಗ ಸಭೆಗಳಲ್ಲಿ ಮಹಿಳೆಯರಿಗೆ ಶೇ. 33ರಷ್ಟು ಮೀಸಲಾತಿ ಒದಗಿಸಿಕೊಡುವ ಸಂವಿಧಾನ ತಿದ್ದುಪಡಿ ಮಸೂದೆಯು 1996ರ ಸೆಪ್ಟೆಂಬರ್ 12ರಂದು ಲೋಕಸಭೆಯಲ್ಲಿ ಚರ್ಚೆಗೆ ಬಂದಾಗ ಯಾವುದೇ ಚರ್ಚೆಗೆ ಅವಕಾಶ ನೀಡದೆ ಮಸೂದೆಯನ್ನು ಅಂಗೀಕರಿಸಬೇಕೆಂದು ಮಹಿಳಾ ಸದಸ್ಯರು ಒತ್ತಾಯಿಸಿದರು. ಇನ್ನು ಕೆಲವು ಸದಸ್ಯರು ಹಿಂದುಳಿದ ವರ್ಗಗಳ ಮಹಿಳೆಯರಿಗೆ ಮೀಸಲಾತಿ ಮತ್ತು ರಾಜ್ಯ ಸಭೆ ಮತ್ತು ರಾಜ್ಯ ಶಾಸಕಾಂಗ ಸಭೆಗಳು, ಪಂಚಾಯಿತಿಗಳು ಹಾಗೂ ಸ್ಥಳೀಯ ಸಂಸ್ಥೆಗಳಿಗೆ ಅದರ ವಿಸ್ತರಣೆಯನ್ನು ಮಸೂದೆಯಲ್ಲಿ ಸ್ಪಷ್ಟವಾಗಿ ನಿಗದಿಗೊಳಿಸಬೇಕೆಂಬ ಬೇಡಿಕೆ ಇಟ್ಟಿದ್ದರಿಂದ ಮರುದಿನ ಈ ಮಸೂದೆಯನ್ನು ಜಂಟಿ ಆಯ್ಕೆ ಸಮಿತಿಗೆ ಒಪ್ಪಿಸಲಾಯಿತು. ಪ್ರಸಿದ್ಧ ಸಿ. ಪಿ. ಐ. ನಾಯಕಿ ಶ್ರೀಮತಿ ಗೀತಾ ಮುಖರ್ಜಿಯವರ ಅಧ್ಯಕ್ಷತೆಯಲ್ಲಿ ಈ ಸಮಿತಿ ಲೋಕಸಭೆಯಿಂದ 20 ಮಂದಿ ಹಾಗೂ ರಾಜ್ಯ ಸಭೆಯಿಂದ ಹತ್ತು ಮಂದಿಯನ್ನೊಳಗೊಂಡಂತೆ ರಚಿಸಲಾಯಿತು. ಇದರ ಮೊದಲ ಸಭೆಯಲ್ಲಿ ಮಸೂದೆಗೆ ಸಂಬಂಧಿಸಿದ ಹಲವು ಮುಖ್ಯ ಅಂಶಗಳ ಬಗ್ಗೆ ಸಾರ್ವಜನಿಕ ಅಭಿಪ್ರಾಯಗಳನ್ನು ಸಂಗ್ರಹಿಸಬೇಕೆಂದು ತೀರ್ಮಾನಿಸಿದ್ದು ಈ ದಿಕ್ಕಿನಲ್ಲಿ ವಿಶ್ವವಿದ್ಯಾನಿಲಯ ಧನ ಸಹಾಯ ಆಯೋಗ ಕಳುಹಿಸಿದ ನಿರ್ದೇಶನದ ಮೇರೆಗೆ ಮೈಸೂರು ವಿಶ್ವವಿದ್ಯಾನಿಲಯದ ಅಭಿವೃದ್ಧಿ ಅಧ್ಯಯನ ಸಂಸ್ಥೆಯ ಅಂಗವಾದ ಮಹಿಳಾ ಅಧ್ಯಯನ ಕೇಂದ್ರವು ಕಳೆದ ಡಿಸೆಂಬರ್ ತಿಂಗಳ 14ರಂದು ವಿಚಾರ ಸಂಕಿರಣವೊಂದನ್ನು ಏರ್ಪಡಿಸಿತ್ತು. ಈ ಸಂಕಿರಣದಲ್ಲಿ ವ್ಯಕ್ತವಾದ ಅಭಿಪ್ರಾಯಗಳನ್ನು ಸಂಗ್ರಹಿಸಿ ಸಂಬಂಧಿಸಿದವರಿಗೆ ತಲುಪಿಸುವುದು ಒಂದು ಉದ್ದೇಶವಾದರೆ, ಮಹಿಳಾ ಮೀಸಲಾತಿಯ ಬಗ್ಗೆ ಸಂಕಿರಣ ನಡೆಸುವ ಮೂಲಕ ಸಾರ್ವಜನಿಕರನ್ನು ಚಿಂತನೆಗೆ ಹಚ್ಚುವುದಲ್ಲದೆ ಅವರಲ್ಲಿ ಅರಿವು ಮೂಡಿಸುವುದು ಮತ್ತೊಂದು ಉದ್ದೇಶವಾಗಿತ್ತು. ಅದರಂತೆ ಸಂಕಿರಣಕ್ಕೆ ರಾಜಕೀಯದಲ್ಲಿ ನೇರವಾಗಿ ಅಥವಾ ಪರೋಕ್ಷವಾಗಿ ಭಾಗವಹಿಸಿದವರು/ಭಾಗವಹಿಸುತ್ತಿರುವವರು, ಸಮಾಜ ಕಾರ್ಯಕರ್ತರು, ವಿವಿಧ ವಿಷಯಗಳ ತಜ್ಞರು, ವಕೀಲರು, ಮಹಿಳಾ ಸಂಘಟನೆಗಳವರು ಹಾಗೂ ಸಾರ್ವಜನಿಕರನ್ನು ಆಹ್ವಾನಿಸಲಾಗಿತ್ತು.

ಆರಂಭದಲ್ಲಿ ಕಾರ್ಯಕ್ರಮವನ್ನು ಉದ್ಘಾಟಿಸಿದ ಮಹಿಳಾ ಅಧ್ಯಯನ ಕೇಂದ್ರದ ಮಾಜಿ ನಿರ್ದೇಶಕಿ ಶ್ರೀಮತಿ ರಾಮೇಶ್ವರಿ ವರ್ಮರವರು ಮಾತನಾಡುತ್ತಾ ರಾಜಕೀಯದಲ್ಲಿ ಮಹಿಳೆಯರ ಸಂಖ್ಯೆ ಅತ್ಯಂತ ಕಡಿಮೆ ಇರಲು ಈ ಪಿತೃಪ್ರಧಾನ ವ್ಯವಸ್ಥೆಯೇ ಕಾರಣವಾಗಿದ್ದು, ಮಹಿಳೆಯರು ಹಲವಾರು ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ರಾಜಕೀಯದಲ್ಲಿ ಪ್ರವೇಶ ಮಾಡಿದಾಗಲೂ ಇಂತಹದೇ ಹಲವಾರು ತೊಡಕುಗಳಿವೆ ಎಂದು ವಿವರಿಸಿದರಲ್ಲದೆ, ರಾಜಕೀಯ ಮೀಸಲಾತಿ ಮಹಿಳೆಯರಿಗೆ ಅತ್ಯಗತ್ಯ ಎಂದರು.

ಇದುವರೆಗೆ ಸಕ್ರಿಯ ರಾಜಕಾರಣಿಯಾಗಿದ್ದು ರೈಲ್ವೆ ಸಲಹಾ ಮಂಡಳಿಯ ಸದಸ್ಯೆಯಾಗಿರುವ ಶ್ರೀಮತಿ ಶಶಿಕಲಾ ನಾಗರಾಜ್ ಅವರು ಸಮಾರಂಭದ ಮುಖ್ಯ ಅತಿಥಿಯಾಗಿ ಮಾತನಾಡುತ್ತಾ ಜನತೆ ಹಾಗೂ ತನ್ನ ಸಹೋದ್ಯೋಗಿಗಳಿಂದ ತಾನು ಎದುರಿಸಿದ ಹಾಗೂ ತನ್ನಂಥ ಹಲವು ಮಹಿಳೆಯರು ರಾಜಕೀಯದಲ್ಲಿ ಅನುಭವಿಸುವ ತಾರತಮ್ಯ ಧೋರಣೆಗಳನ್ನು ಮನ ಮುಟ್ಟುವಂತೆ ವಿವರಿಸಿದರಲ್ಲದೆ ಮಹಿಳೆಯರಿಗೆ ಮೀಸಲಾತಿಯ ಅಗತ್ಯವನ್ನು ಒತ್ತಿ ಹೇಳಿದರು. ಇದಕ್ಕೆ ದನಿ ಗೂಡಿಸಿದವರು ಮೈಸೂರು ನಗರ ಪಾಲಿಕೆಯ ಉಪಮೇಯರರಾಗಿ ಸಮಾರಂಭದಲ್ಲಿ ಭಾಗವಹಿಸಿದ್ದ ಶ್ರೀಮತಿ ಶಾಂತಕುಮಾರಿ, ಹಿರಿಯ ಪತ್ರಕರ್ತ ಹಾಗೂ ರಾಜಕಾರಣಿ ಶ್ರೀ ಎ. ರಾಮಣ್ಣ, ಅಧ್ಯಕ್ಷತೆ ವಹಿಸಿದ್ದ ಮೈ. ವಿಶ್ವವಿದ್ಯಾನಿಲಯದ ಜಾನಪದ ವಿಭಾಗದಲ್ಲಿ ಪ್ರಾಧ್ಯಾಪಕರಾಗಿರುವ ಡಾ. ಹಿ. ಶಿ. ರಾಮಚಂದ್ರೇಗೌಡರು ಮೀಸಲಾತಿಯ ಪರವಾಗಿ ಮಾತನಾಡಿದರು.

ಎರಡನೆಯ ಅಧಿವೇಶನ ವಿಚಾರ ಮಂಡನೆಗೇ ಮೀಸಲಾಗಿದ್ದು ಮೊದಲಿಗೆ ಮೈಸೂರಿನ ಪ್ರಸಿದ್ಧ ವಕೀಲರೂ ಹಾಗೂ ಜಿಲ್ಲಾ ಮಹಿಳಾ ಸಹಕಾರ ಬ್ಯಾಂಕಿನ ಅಧ್ಯಕ್ಷರೂ ಆದ ಬಿ. ರಾಧತಮ್ಮ ವಿಚಾರವನ್ನು ಮಂಡಿಸಿದರು. ಸಕ್ರಿಯ ರಾಜಕಾರಣಿಯಾದ ಇವರು ತಮ್ಮ ಅನುಭವಗಳನ್ನೇ ಹಂಚಿಕೊಂಡರೆನ್ನಬಹುದು. ಇದುವರೆಗೆ ಶೇ. 10ರಷ್ಟು ಮಹಿಳೆಯರೂ ಲೋಕಸಭೆಯಲ್ಲಿ ಪ್ರತಿನಿಧಿಸಲಿಲ್ಲ. ಈ ದಿಕ್ಕಿನಲ್ಲಿ ಯಾವುದೇ ಪಕ್ಷದಿಂದ ಪ್ರಾಮಾಣಿಕ ಪ್ರಯತ್ನ

ನಡೆದಿಲ್ಲ. ಅದಕ್ಕೆ ಮುಖ್ಯ ಕಾರಣ ಈಗಿರುವ ಚುನಾವಣಾ ವ್ಯವಸ್ಥೆ. ಇದರಲ್ಲಿ ಕೆಲವು ಸುಧಾರಣೆಗಳನ್ನು ತಂದರೆ ಮಾತ್ರ ಮಹಿಳೆಯರು ರಾಜಕೀಯಕ್ಕೆ ಬರಲು ಸಾಧ್ಯ. ಎರಡನೆಯದಾಗಿ, ರಾಜಕೀಯದಲ್ಲಿ ಇಂದು ಮಹಿಳೆಯರನ್ನು ನಿಜವಾಗಿ ಪ್ರತಿನಿಧಿಸುವವರ ಅವಶ್ಯಕತೆ ಇದೆ. ಇದಕ್ಕೆ ಮೀಸಲಾತಿ ಬೇಕೇಬೇಕು ಎಂದರು.

ಇದೇ ಧಾಟಿಯಲ್ಲಿ ಮುಂದುವರೆಸಿದ ಮತ್ತೊಬ್ಬ ವಕೀಲೆ ಹಾಗೂ ರಾಜಕಾರಣಿ ಶ್ರೀಮತಿ ವಿ. ಮೈಥಿಲಿ, ಮಹಿಳೆಯರಿಗೆ ಯಾವುದು ಅಸಾಧ್ಯ? ಈಗಿರುವ ನಿರುತ್ತೇಜಕ ಪರಿಸರದ ಪ್ರಭಾವದಿಂದಾಗಿ ಮಹಿಳೆಯರು ಅಬಲೆಯರು ಎಂಬ ಭಾವನೆ ಮೂಡಿದೆ. ಗಂಡಿನಲ್ಲಿರುವ ಅಹಂ ಮಹಿಳೆಯರಿಗೆ ಅಡ್ಡಗಾಲಾಗಿದೆ. ಮಹಿಳೆಯರು ಪುರುಷರಷ್ಟು ಭ್ರಷ್ಟಾಚಾರಿಗಳಾಗಲಾರರು. ಅವರು ಹೆಚ್ಚು ಸಂಖ್ಯೆಯಲ್ಲಿ ರಾಜಕೀಯಕ್ಕೆ ಬರಬೇಕು. ಇದು ಸಾಧ್ಯವಾಗಲು ಮೀಸಲಾತಿ ಇರಬೇಕು ಎಂದರು.

ಸಮಾಜಶಾಸ್ತ್ರದಲ್ಲಿ ಡಾಕ್ಟರೇಟ್ ಪಡೆದಿರುವ ಡಾ. ಕೆ. ಯಶೋದರವರು ನಂತರದಲ್ಲಿ ಮಾತನಾಡಿ, ಇಂದಿನ ರಾಜಕೀಯ ಪುರುಷ ಪ್ರಧಾನವಾಗಿದೆ. ಮಹಿಳೆಯರು ಇಲ್ಲಿ ಅಲ್ಪಸಂಖ್ಯಾತರಾಗಿದ್ದಾರೆ. ಈಗ ರಾಜ್ಯದಲ್ಲಿ ಶೇ. 33 ಮೀಸಲಾತಿ ಇರುವುದರಿಂದಾಗಿ ಗ್ರಾಮ ಪಂಚಾಯಿತಿ ವ್ಯವಸ್ಥೆಯಲ್ಲಿ ಮಹಿಳೆಯು ಭಾಗವಹಿಸುವಂತಾಗಿದೆ. ಇವರು ಗ್ರಾಮೀಣ ಜನರ ಸಮಸ್ಯೆಗಳಿಗೆ ಸ್ಪಂದಿಸುತ್ತಿದ್ದಾರೆ ಎನ್ನುವುದು ಗೊತ್ತಾಗಿದೆ. ಆದ್ದರಿಂದ ಮಹಿಳೆಯರು ಅಧಿಕಾರಕ್ಕೆ ಬಂದರೆ ಜನರ ಸಮಸ್ಯೆಗಳಿಗೆ ಸ್ಪಂದಿಸುತ್ತಾರೆನ್ನುವುದು ಸ್ಪಷ್ಟವಾಗಿದೆ. ಅಲ್ಲದೆ ಸಾರ್ವಜನಿಕ ಕ್ಷೇತ್ರಗಳಲ್ಲಿ ತಮ್ಮ ದಕ್ಷತೆಯನ್ನು ಪ್ರದರ್ಶಿಸಿದ್ದಾರೆ. ಆದರೆ ರಾಜಕೀಯದಲ್ಲಿ ತಾವು ಅಲ್ಪಸಂಖ್ಯಾತರಾಗಿರುವುದರಿಂದ ಅವರದು ರಾಜಕೀಯವಾಗಿ ಕ್ಷೀಣದನಿಯಾಗಿದೆ. ಅವರ ಅಭಿಪ್ರಾಯಗಳಿಗೆ, ನ್ಯಾಯಯುತ ಬೇಡಿಕೆಗಳಿಗೆ ಮನ್ನಣೆ ಇಲ್ಲವಾಗಿದೆ. ಆದ್ದರಿಂದ ಅವರಿಗೆ ರಾಜಕೀಯ ಮೀಸಲಾತಿಯ ಅಗತ್ಯವಿದೆ. ಇದು ಲೋಕಸಭೆಗೆ ಮಾತ್ರ ಸೀಮಿತವಾಗದೆ, ವಿಧಾನಸಭೆ ಮತ್ತಿತರ ಎಲ್ಲಾ ಸ್ಥಳೀಯ ಸಂಸ್ಥೆಗಳಲ್ಲೂ ಜಾರಿಗೆ ಬರಬೇಕು. ಇದು ಮಹಿಳೆಯರ ಮೂಲಭೂತ ಹಕ್ಕು ಎಂದು ತಿಳಿಸಿದುದಲ್ಲದೆ ಕೆಳಕಂಡ ಕೆಲವು ಸಲಹೆಗಳನ್ನೂ ನೀಡಿದರು.

- ರಾಜಕೀಯ ಮೀಸಲಾತಿಯನ್ನು ಸದುಪಯೋಗ ಪಡಿಸಿಕೊಳ್ಳಲು ಮಹಿಳೆಯರು ಹೆಚ್ಚಿನ ಸಂಖ್ಯೆಯಲ್ಲಿ ರಾಜಕೀಯದಲ್ಲಿ ಭಾಗವಹಿಸಬೇಕು.

- ಈ ದಿಕ್ಕಿನಲ್ಲಿ ಪುರುಷರು ಮಹಿಳೆಯರಿಗೆ ಪ್ರೋತ್ಸಾಹ ನೀಡಬೇಕು.

- ರಾಜಕೀಯ ಪಕ್ಷಗಳು ಮಹಿಳೆಯರ ಸಲಹೆ ಸೂಚನೆಗಳನ್ನು ಯಾವುದೇ ನಿರ್ಧಾರ ತೆಗೆದುಕೊಳ್ಳುವ ಮುನ್ನ ಪರಿಗಣಿಸಬೇಕು.

- ಮಹಿಳೆಯರ ಮೇಲಿರುವ ಪೂರ್ವನಿರ್ಧಾರಿತ ಅಂಶಗಳನ್ನು ತೊಡೆದು ಹಾಕಿ ಅವರಿಗೆ ಅಧಿಕಾರದಲ್ಲಿ ಸಮಪಾಲು ನೀಡಬೇಕು.

ನಂತರದಲ್ಲಿ ಮಾತನಾಡಿದ ನಗರ ಪಾಲಿಕೆ ಚುನಾಯಿತ ಸದಸ್ಯೆಯಾದ ಸಿ. ರೋಹಿಣಿಯವರು, "ಮಹಿಳೆಯರಿಗಾಗಿ ಮೀಸಲಾತಿ ಇಂದು ಅನಿವಾರ್ಯ ಹಾಗೂ ಅಗತ್ಯ. ದೈಹಿಕ ಶಕ್ತತೆ -ಅಶಕ್ತತೆಯನ್ನು ಅನಗತ್ಯವಾಗಿ ಪರಿಗಣಿಸದೆ, ಆಕೆಯ ಮಾನಸಿಕ ಸ್ಥೈರ್ಯ, ಪ್ರಬುದ್ಧತೆಯನ್ನು ಗುರುತಿಸಿ ಆಯ್ಕೆ ಮಾಡಬೇಕು. ಮೀಸಲಾತಿಯಿಂದ ಹೆಣ್ಣಿನ ಶೋಷಣೆ ಕಡಿಮೆಯಾಗುತ್ತದೆಂದು ನನ್ನ ಅನಿಸಿಕೆ. ಪುರುಷ ಪ್ರಧಾನ ಸಮಾಜದಲ್ಲಿ ಮಹಿಳೆ ನಾನಾ ವಿಧವಾದ ಮಾನಸಿಕ ಮತ್ತು ದೈಹಿಕವಾದ ಹಿಂಸೆಗಳಿಗೆ ಬಲಿಯಾಗುತ್ತಾಳೆ. ಈಗಿರುವ ಅವ್ಯವಸ್ಥೆಗಳ ಕೂಪದಲ್ಲಿ ನರಳುತ್ತಿರುವವರು ಮಹಿಳೆಯರೇ ಹೆಚ್ಚಾಗಿದ್ದಾರೆ. ಹೇಳಿಕೊಳ್ಳುವಂಥ ನೋವುಗಳು ಕೆಲವಾದರೆ ಹೇಳಲಾರದಂಥ ಲೈಂಗಿಕ ಕಿರುಕುಳಗಳು ಬೆಳಕಿಗೆ ಬರುವುದೇ ಇಲ್ಲ. ಮೀಸಲಾತಿ ಸಿಕ್ಕಾಗ ಮಹಿಳೆ ತನ್ನ ಪರಿಧಿಯಿಂದ ಹೊರಬಂದು ಧೈರ್ಯವಾಗಿ ಕಾರ್ಯವನ್ನು ನಿರ್ವಹಿಸುತ್ತಾಳೆ - ರಾಜಕೀಯ ವಾಗಬಹುದು ಅಥವಾ ಇನ್ನಾವುದೇ ಕಛೇರಿಯಾಗಬಹುದು" ಎಂದರು. ಇವರ ದನಿಗೆ ದನಿಗೂಡಿಸಿದವರು ನಗರಪಾಲಿಕೆಯ ಸದಸ್ಯರಾದ ಶ್ರೀಮತಿ ನಿರ್ಮಲಾದೇವಿ ಮತ್ತು ಕಮಲಮ್ಮನವರು.

ಮಾನಸ ಗಂಗೋತ್ರಿಯ ರಾಜಕೀಯಶಾಸ್ತ್ರ ವಿಭಾಗದಲ್ಲಿ ಹಿರಿಯ ಉಪನ್ಯಾಸಕಿಯಾಗಿರುವ ಡಾ. ಎಂ. ರಾಣಿ ಮಾತನಾಡಿ, ಸಾಮಾಜಿಕ, ಆರ್ಥಿಕ ಹಾಗೂ ರಾಜಕೀಯ ಕ್ಷೇತ್ರಗಳಲ್ಲಿ ಸಮಾನತೆಯ ಭರವಸೆಯನ್ನು ನೀಡುವ ಸಂವಿಧಾನವನ್ನು ಹೊಂದಿರುವ ನಮ್ಮ ದೇಶದಲ್ಲಿ ಮಹಿಳೆಯರಿಗೆ ಮೀಸಲಾತಿಯ ಆವಶ್ಯಕತೆ ನಿಜವಾಗಿಯೂ ಇದೆಯೆ ಎಂಬ ಪ್ರಶ್ನೆ ಎತ್ತಿಕೊಂಡರಲ್ಲದೆ ತಾನು ಇದನ್ನು ಎರಡು ದೃಷ್ಟಿಕೋನಗಳಿಂದ ನೋಡುವುದಾಗಿ ತಿಳಿಸಿದರು - (1) ರಾಜಕೀಯದಲ್ಲಿ ಮಹಿಳೆಯರ ಇಂದಿನ ಸ್ಥಿತಿಗತಿ, (2) ಕರ್ನಾಟಕದಿಂದ ಲೋಕಸಭೆಯಲ್ಲಿ ಹಾಗೂ ರಾಜ್ಯ ಶಾಸಕಾಂಗ ಸಭೆಗಳಲ್ಲಿ ಮಹಿಳೆಯರ ಪ್ರತಿನಿಧಿತ್ವದ ಚುನಾವಣಾ ಅಂಕಿ ಅಂಶಗಳು.

ಸ್ವತಂತ್ರ ಭಾರತದಲ್ಲಿ ಪ್ರಜಾಪ್ರಭುತ್ವ ಮಹಿಳೆಯರ ದಮನದ ಮತ್ತು ಪುರುಷರ ಮೇಲುಗೈನ ಸಂಪ್ರದಾಯ ಹೊಂದಿದೆ. ರಾಜಕೀಯದಲ್ಲಿ ಮಹಿಳೆಯರ ಪಾಲು ಅತಿ ಕಡಿಮೆ. ಮಹಿಳೆಯರಿಗೆ ರಾಜ್ಯ ಮಂತ್ರಿಗಳಾಗಿ ಸ್ಥಾನ ಕೊಡಲಾಗುತ್ತದೆಯೇ ಹೊರತು ಕ್ಯಾಬಿನೆಟ್ ಮಂತ್ರಿಯದಲ್ಲ. ಮಹಿಳೆಯರ ರಾಜಕೀಯ ಸಶಕ್ತೀಕರಣದ ಕಲ್ಪನೆ ಇದುವರೆಗೆ ಕಾರ್ಯರೂಪಕ್ಕಿಳಿದಿಲ್ಲ.

ಚುನಾವಣಾ ಅಂಕಿ ಅಂಶಗಳ ಪ್ರಕಾರ ಹೇಳುವುದಾದರೆ, ರಾಷ್ಟ್ರ ಹಾಗೂ ರಾಜ್ಯಮಟ್ಟದಲ್ಲಿ ರಾಜಕೀಯ ಪಕ್ಷಗಳು ಮಹಿಳೆಯರಿಗೆ ಟಿಕೆಟ್ ಕೊಡಲು ಮುಂದಾಗುವುದಿಲ್ಲ. ಸ್ವಾತಂತ್ರ್ಯಾನಂತರದ ಮೊದಲ ದಶಕದಲ್ಲಿ ಕರ್ನಾಟಕವನ್ನು ಒಬ್ಬ ಮಹಿಳೆಯೂ ಲೋಕಸಭೆಯಲ್ಲಿ ಪ್ರತಿನಿಧಿಸಲಿಲ್ಲ. 1977ರ ಚುನಾವಣೆಯಲ್ಲಿ ಸ್ಪರ್ಧಿಸಿದ ನಾಲ್ವರು ಮಹಿಳೆಯರಲ್ಲಿ ಒಬ್ಬರು ಚುನಾಯಿತರಾದರು. 1980ರಲ್ಲಿ ಐವರು ಮಹಿಳೆಯರು ಸ್ಪರ್ಧಿಸಿದರೂ ಒಬ್ಬ ಮಹಿಳೆಯೂ ಆಯ್ಕೆಯಾಗಲಿಲ್ಲ. 1984 ಮತ್ತು 89ರ ಲೋಕಸಭೆ ಚುನಾವಣೆಗಳಲ್ಲಿ ಸ್ಪರ್ಧಿಸಿದವರ ಸಂಖ್ಯೆ 7 ಮತ್ತು 12ಕ್ಕೆ ಏರಿತು. ಕರ್ನಾಟಕದಿಂದ ಆಯ್ಕೆಯಾದವರ ಸಂಖ್ಯೆ ಅನುಕ್ರಮವಾಗಿ 1 ಮತ್ತು 2. 1991ರಲ್ಲಿ ಸ್ಪರ್ಧಿಸಿದ 13 ಮಹಿಳೆಯರಲ್ಲಿ ಮೂವರು ಆಯ್ಕೆಯಾದರು. ಈಗ ಲೋಕಸಭೆಯಲ್ಲಿ ಒಬ್ಬ ಮಹಿಳೆ ಮಾತ್ರ ಕರ್ನಾಟಕವನ್ನು ಪ್ರತಿನಿಧಿಸಿದ್ದಾರೆ.

ಕರ್ನಾಟಕದ ವಿಧಾನಸಭೆಯ ಚಿತ್ರ ಇದಕ್ಕಿಂತ ಭಿನ್ನವಾಗಿಲ್ಲ. 1952ರಲ್ಲಿ ಶೇ. 5ರಷ್ಟಿದ್ದ ಮಹಿಳೆಯರ ಸಂಖ್ಯೆ 1994ರಲ್ಲಿ 3ಕ್ಕೆ ಇಳಿದಿದೆ. ಈ ಅಂಕಿ ಅಂಶಗಳು ಕಣ್ಣು ತೆರೆಸುವಂತಿವೆ; ಮೀಸಲಾತಿಯ ಅಗತ್ಯವನ್ನು ತೋರಿಸುತ್ತಿವೆ.

ಈ ಪರಿಸ್ಥಿತಿಗೆ ಮುಖ್ಯ ಕಾರಣಗಳಲ್ಲೊಂದು ಎಂದರೆ ಅನಕ್ಷರತೆ. ಇದು ಹಿಂದುಳಿದ ವರ್ಗದ ಮಹಿಳೆಯರಲ್ಲಿ ಹೆಚ್ಚಾಗಿದೆ. ಆದ್ದರಿಂದ ಮೀಸಲಾತಿಯ ಅಗತ್ಯ ಈ ವರ್ಗಗಳಲ್ಲಿ ಹಾಗೂ ಅಲ್ಪ ಸಂಖ್ಯಾತರಲ್ಲಿ ಹೆಚ್ಚಾಗಿದೆ. ಇದಕ್ಕಾಗಿ ಮತಕ್ಷೇತ್ರಗಳ ಸಂಖ್ಯೆಯನ್ನು ಹೆಚ್ಚಿಸುವ ಅಗತ್ಯವಿಲ್ಲ. ಇರುವ ಕ್ಷೇತ್ರಗಳನ್ನೇ ಮಹಿಳೆಯರಿಗೆ ಬಿಟ್ಟುಕೊಡಬಹುದು. ಈ ಕ್ಷೇತ್ರಗಳನ್ನು ಸಂದರ್ಭಾನುಸಾರ ಮಹಿಳೆಯರಿಗಾಗಿ ಬದಲಾಯಿಸಬಹುದು (Rotation).

ಸ್ವತಂತ್ರವಾಗಿ ಸ್ಪರ್ಧಿಸುವ ಮಹಿಳೆಯರಲ್ಲಿ ಹೆಚ್ಚಿನವರು ಸೋಲನನುಭವಿಸುವುದರಿಂದ ಎಲ್ಲಾ ರಾಜಕೀಯ ಪಕ್ಷಗಳು ಕಡ್ಡಾಯವಾಗಿ ನಿಗದಿತ ಸಂಖ್ಯೆಯ ಸ್ಥಾನಗಳನ್ನು ಮಹಿಳೆಯರಿಗೆ ಮೀಸಲಿಡುವಂತಾಗಬೇಕು.

ಈ ಮೀಸಲಾತಿ ರಾಜ್ಯದ ಗಾತ್ರಾಧಾರಿತವಾಗಬೇಕೇ ಅಥವಾ ವಲಯಾಧಾರಿತವಾಗಬೇಕೆ ಎಂಬ ಪ್ರಶ್ನೆ ಏಳುತ್ತದೆ. ಮಹಿಳೆಯರು ಮನೆಗೇ ಸೀಮಿತವಾಗುಳಿದಿರುವ ರಾಜ್ಯಗಳಾದ ಬಿಹಾರ, ರಾಜಾಸ್ಥಾನ, ಒರಿಸ್ಸಾದಂಥ ರಾಜ್ಯಗಳಲ್ಲಿ ಮೀಸಲಾತಿ ಪ್ರಯೋಜನವಾಗದೆ ಇರಬಹುದು. ಗಾತ್ರಾಧಾರಿತ ಮೀಸಲಾತಿಯಾದರೆ ಮಹಾರಾಷ್ಟ್ರ, ಆಂಧ್ರಪ್ರದೇಶ, ಉತ್ತರ ಪ್ರದೇಶಗಳು ದೊಡ್ಡ ರಾಜ್ಯಗಳಾದರೆ, ಉತ್ತರ ಪೂರ್ವದಲ್ಲಿ ಸಣ್ಣ ರಾಜ್ಯಗಳಿವೆ. ಇಲ್ಲಿ ಮತ್ತೆ ಅಸಮತೋಲನ ತಲೆ ಹಾಕುತ್ತದೆ.

ಒಟ್ಟಿನಲ್ಲಿ ಹೇಳುವುದಾದರೆ, ಮಹಿಳೆಯರು ಸಂಘಟಿತರಾಗಿ ಒಟ್ಟಾಗಿ ಕೆಲಸ ಮಾಡಬೇಕು. ಇಲ್ಲವಾದರೆ ರಾಜಕೀಯ ಮೀಸಲಾತಿಯ ಬೇಡಿಕೆಯ ಉದ್ದೇಶ ಸಫಲವಾಗುವುದಿಲ್ಲ. ರಾಜಕೀಯ ಪ್ರಕ್ರಿಯೆ ಮತ್ತು ರಾಷ್ಟ್ರ ಕಟ್ಟುವ ಕೆಲಸದಲ್ಲಿ ಮಹಿಳೆಯರು ಸಮಾನವಾಗಿ ಭಾಗವಹಿಸುವುದಿಲ್ಲವಾದರೆ ನಮ್ಮ ಪ್ರಜಾಪ್ರಭುತ್ವ ಅಪೂರ್ಣವಾಗಿಯೇ ಉಳಿದುಬಿಡುತ್ತದೆ ಎಂದರು.

ಕಡೆಯದಾಗಿ ಅಧ್ಯಕ್ಷತೆ ವಹಿಸಿ ಮಾತನಾಡಿದ ಮೈಸೂರಿನ ಮಹಾರಾಜಾ ಕಾಲೇಜಿನಲ್ಲಿ ಸಮಾಜಶಾಸ್ತ್ರದ ಪ್ರಾಧ್ಯಾಪಕರಾದ ಪ್ರೊಫೆಸರ್ ಕೆ. ಸುಮಿತ್ರಾಬಾಯಿಯವರರು, ಲಿಂಗ-ಜಾತಿ-ವರ್ಗಗಳನ್ನಾಧರಿಸಿದ ಅಸಮಾನತೆಗಳೇ ತುಂಬಿರುವ ಈ ಸಮಾಜದಲ್ಲಿ ಮೀಸಲಾತಿ ಎನ್ನುವುದು ಬೇಕೇ ಬೇಕು. ಮೀಸಲಾತಿ ಎನ್ನುವುದು ಸಮಾನತೆಯನ್ನು ತರಲು ಇರುವ ಇತ್ಯಾತ್ಮಕವಾದ ತಾರತಮ್ಯ (positive discrimination) ಎಂದು ವ್ಯಾಖ್ಯಾನಿಸಿ, ಮಹಿಳೆಯರು ಇದುವರೆಗೆ ತಾರತಮ್ಯಕ್ಕೊಳಗಾದ ಒಂದು ವರ್ಗ. ಇವರಿಗೆ ರಾಜಕೀಯದಲ್ಲಿ ಮೀಸಲಾತಿ ಬೇಕೇ ಬೇಕು. ಆದರೆ ಈ ಮೀಸಲಾತಿಗೆ ಒಂದು ವೈಜ್ಞಾನಿಕ ದೃಷ್ಟಿಕೋನವಿರಬೇಕು. ಇದು ಯಾವುದೇ ಒಂದು ವೈಜ್ಞಾನಿಕ ಮಾದರಿಯನ್ನು ಹೊಂದಿರಬೇಕು. ಉದಾಹರಣೆಗೆ, ಮಂಡಲ್ ಆಯೋಗದ ವರದಿಯಂಥ ಯಾವುದೇ ಮಾದರಿಯನ್ನಿಟ್ಟುಕೊಂಡು ಈ ಮೀಸಲಾತಿಯ ನಿಯಮಗಳನ್ನು ರೂಪಿಸುವುದು ಉಚಿತ ಎಂದು ಅಭಿಪ್ರಾಯಪಟ್ಟರು.

ಊಟದ ವಿರಾಮದ ನಂತರ ನಡೆದ ಮೂರನೆಯ ಅಧಿವೇಶನ ಮೀಸಲಾತಿ ಕುರಿತ ಚರ್ಚೆಗೇ ಮೀಸಲಾಗಿತ್ತು. ಇದರಲ್ಲಿ ಭಾಗವಹಿಸಿದವರಲ್ಲಿ ಹೆಚ್ಚಿನವರು ಮೀಸಲಾತಿ ಬೇಕೆಂಬ ಅಭಿಪ್ರಾಯವನ್ನೇ ವ್ಯಕ್ತಪಡಿಸಿದರಲ್ಲದೆ ಅದರ ರೂಪರೇಷೆಗಳ ಬಗ್ಗೆ ಕೆಲವು ಸಲಹೆಗಳನ್ನು ನೀಡಿದರು.

- ಮೀಸಲಾತಿ ಕಾಲಮಿತಿ ಹೊಂದಿರಬೇಕು ಹಾಗೂ ಕಂಡಿಷನಲ್ ಆಗಿರಬೇಕು.

- ಹಿಂದುಳಿದ ವರ್ಗಗಳಿಗೆ ಮೀಸಲಾತಿಯನ್ನು ನಿಗದಿಪಡಿಸುವುದು ಬೇಡ

- ಮಹಿಳೆಯರಿಗೆ ಮೀಸಲು ಕ್ಷೇತ್ರಗಳಿರಬೇಕು, ಇವು ಸಂದರ್ಭಾನುಸಾರ ಬದಲಾಗುತ್ತಿರಬೇಕು. (Rotation)

- ಇದು ಜನಸಂಖ್ಯಾಧಾರಿತವಾಗಿರಬೇಕು.

- ಭೌಗೋಳಿಕ ವ್ಯಾಪ್ತಿಯನ್ನಾಧರಿಸಿರಬೇಕು.

- ಇದು flexible ಆಗಿರಬೇಕು.

ಇವರಲ್ಲಿ ಒಬ್ಬರು ಮಾತ್ರ ಮೀಸಲಾತಿಯ ಅಗತ್ಯವನ್ನು ಪ್ರಶ್ನಿಸಿದರು. ಇವರ ಅಭಿಪ್ರಾಯದಲ್ಲಿ ಮೀಸಲಾತಿಯ ಹೆಸರಿನಲ್ಲಿ ಈಗ ಅರ್ಹತೆಯನ್ನು ಕಡೆಗಣಿಸಲಾಗುತ್ತಿದೆ. ಹೀಗಾಗಿಯೇ ಪ್ರತಿಭಾ ಪಲಾಯನವಾಗಿ ದೇಶ ದುರವಸ್ಥೆಯಲ್ಲಿದೆ. ಯೋಗ್ಯರು, ಸಮರ್ಥರು ರಾಜಕೀಯವನ್ನು ಪ್ರವೇಶಿಸಬೇಕೆಂದಿದ್ದರೆ, ಮೀಸಲಾತಿಯ ಅಗತ್ಯವಿಲ್ಲ. ಮಹಿಳೆಯರು ತಮಗೆ ಬೇಕಾದಂಥ ಅವಕಾಶವನ್ನು ತಾವೇ ಪಡೆದುಕೊಳ್ಳಬಲ್ಲರು ಎಂದು. ಈ ಅಭಿಪ್ರಾಯವನ್ನು ತಳ್ಳಿಹಾಕಿದ ಅನೇಕರು ಮೀಸಲಾತಿಯ ಅಗತ್ಯವನ್ನು ಪ್ರತಿಪಾದಿಸಿದರು. ಕೊನೆಯಲ್ಲಿ ಕೆಳಕಂಡ ನಿರ್ಣಯಗಳನ್ನು ಅಂಗೀಕರಿಸಲಾಯಿತು. ಅವೆಂದರೆ,

- ಎಲ್ಲರಿಂದ, ಎಲ್ಲರಿಗಾಗಿ, ಎಲ್ಲರಿಗೋಸ್ಕರ ಎನ್ನುವ ತತ್ವದ ಪ್ರಜಾಪ್ರಭುತ್ವ ಫಲಪ್ರದವಾಗಲು ಆರ್ಥಿಕ ಹಾಗೂ ಸಾಮಾಜಿಕವಾಗಿ ಹಿಂದುಳಿದಿರುವ ಮಹಿಳೆಯರಿಗಾಗಿ ರಾಜಕೀಯ ಮೀಸಲಾತಿ ಬೇಕು.

- ಮತದಾರನ ಸಮಾನತೆ ಕೂಡ ಪ್ರಜಾಪ್ರಭುತ್ವದ ನಿಯಮವಾಗಬೇಕು. ಕೆಲವರು ಮತ ಹಾಕುವ ಮತದಾರರು, ಮತ್ತೆ ಕೆಲವರು ಅಧಿಕಾರ ಪಡೆಯುವ ಮತದಾರರು ಎಂಬ ತಾರತಮ್ಯ ಅಂದರೆ ಮತದಾರನ ಹಕ್ಕಿನ ತಾರತಮ್ಯ ಉದ್ದೇಶಪೂರ್ವಕವಾಗಿಯೇ ಆಗುತ್ತಿದೆ. ಇದನ್ನು ಪ್ರಜಾಪ್ರಭುತ್ವ ಸರಕಾರ ಸರಿಪಡಿಸಿ ಮತದಾರ ಪ್ರಜೆಗಳ ಮಧ್ಯೆ ಸಮಾನತೆಯನ್ನು ತರಬೇಕು. ಈ ಹಿನ್ನೆಲೆಯಲ್ಲಿ ಆರ್ಥಿಕ-ಸಾಮಾಜಿಕ ವಿವಂಚನೆಗೊಳಗಾಗಿರುವ ಮಹಿಳೆಯರಿಗೆ ರಾಜಕೀಯ ಮೀಸಲಾತಿ ಅತ್ಯಗತ್ಯ.

- ಮಹಿಳೆಯರಿಗೆ ಶೇ. 33ರಷ್ಟು ರಾಜಕೀಯ ಮೀಸಲಾತಿ ಅಗತ್ಯ ಕೊಡಬೇಕು. ಮಂಡಲ್ ವರದಿ ಮೀಸಲಾತಿ ಪ್ರಕಾರ ಮಹಿಳಾ ರಾಜಕೀಯ ಮೀಸಲಾತಿ ಇಡುವುದು ಸೂಕ್ತ.

- ಹಿಂದುಳಿದ ವರ್ಗದ ಮಹಿಳೆಯರಿಗೆ ಮಾತ್ರ ರಾಜಕೀಯ ಮೀಸಲಾತಿ ಎನ್ನುವುದು ಸರಿಯಲ್ಲ. ಎಲ್ಲಾ ಮಹಿಳೆಯರೂ ಹಿಂದುಳಿದವರು.

- ಮಹಿಳಾ ಪ್ರಾತಿನಿಧ್ಯಕ್ಕಾಗಿ ಲೋಕಸಭೆ ಮತ್ತು ಶಾಸನಸಭೆ ಕ್ಷೇತ್ರಗಳನ್ನು ಮೀಸಲಿಡಬೇಕು. ಸೂಕ್ತ ಸಂದರ್ಭವರಿತು ಕ್ಷೇತ್ರವನ್ನು ಬದಲಾಯಿಸಬಹುದು.

- ವರದಿ : ವೆಂ. ವನಜ

* ರಾಜಕೀಯವಾಗಿ ಸರಿ ಎಂಬ ಕಾರಣಕ್ಕಾಗಿ, ಮಹಿಳಾ ಮೀಸಲಾತಿ ಬಿಲ್ ಅನ್ನು ಬಿ.ಜೆ.ಪಿ., ಸಿ.ಪಿ.ಎಂ. ಹಾಗು ಇತರೆ ಪಕ್ಷಗಳು ಬೆಂಬಲಿಸುತ್ತವೆ. ಆದರೆ ವೈಯಕ್ತಿಕವಾಗಿ ಬಿಲ್ ಜಾರಿಗೆ ಬರುವುದು ಅವರಿಗೆ ಬೇಕಿಲ್ಲ. ಬೇಕೆಂದರೆ ಹಗಲು-ರಾತ್ರಿ ದುಡಿದು ಬಿಲ್ ಜಾರಿಗೆ ಬರದಂತೆ ನೋಡಿಕೊಳ್ಳುತ್ತಾರೆ. ಆದರೆ ಸಾರ್ವಜನಿಕವಾಗಿ ವಿರೋಧಿಸಲು ಅವರಿಗೆ ಆಗುವುದಿಲ್ಲ.

- ಮನೇಕಾ ಗಾಂಧಿ

* ಮಹಿಳೆಯರು, ಮಹಿಳಾ ವಿಭಾಗಕ್ಕಷ್ಟೇ ಸೀಮಿತವಾಗಿರಬೇಕೆಂದು ಪುರುಷರು ಬಯಸುತ್ತಾರೆ. ಉಳಿದ ಮೀಸಲು ಸ್ಥಾನಗಳೆಲ್ಲವೂ ನಮಗೇ ಮೀಸಲು ಎಂಬ ಭಾವನೆ ಅವರದು.

- ಮಧುರೇಶ್ವರ್, 'ಮಾನುಷಿ' ಪತ್ರಿಕೆಯ ಸಂಪಾದಕಿ

ಮೀಸಲಾತಿ ಈ ದೇಶದ ಸಮಾಜದ ಬೇರುಗಳ ಸಡಿಲಿಸಲು ಒಂದು ಸಣ್ಣ ಕಿಂಡಿಯಾಗಬಹುದೆ?

- ಉತ್ತನೂರು ರಾಜಮ್ಮ ವಿ. ಶೆಟ್ಟಿ,

ಮೂಲಭೂತವಾಗಿ ಮನುಷ್ಯ ಬದುಕಿನ ಎಚ್ಚರದಿಂದ ತನ್ನ ಚೌಕಟ್ಟಿನ ಎಲ್ಲೆ ಮೀರುತ್ತ ಎಂದಿನ ಸ್ಥಗಿತತೆಗಿಂತ ಭಿನ್ನ ಅಭಿವೃದ್ಧಿಯತ್ತ ಮುನ್ನಡೆಯುವುದು ಅದೊಂದು ಸಹಜ ಕ್ರಿಯೆಯಾಗುತ್ತದೆ. ಇಂತಹ ಕ್ರಿಯೆಗೆ ಒಂದು ವಾತಾವರಣ ಸಿದ್ಧತೆ ಸಹ ಬಹುಮುಖ್ಯ ಕಾರಣವಾಗಿ (ಎನ್ವ್ರನ್ಮೆಂಟ್ ರೀಜನ್) ಪರಿಣಮಿಸುತ್ತದೆ.

'ಮೀಸಲಾತಿ' ವಿಷಯದಲ್ಲಿ ಮಹಿಳೆಯರಿಗೆ ಎಂತು? ಹೇಗೆ ಯೋಚನೆ ಮಾಡುವಾಗ ಶತಮಾನಗಳ ಅಂತರದಲ್ಲಿ, ಅದರಲ್ಲೂ ಭಾರತೀಯ ಸಾಮಾಜಿಕ ಹಿನ್ನೆಲೆಯಲ್ಲಿ ಕೆಲವು ವರ್ಗಗಳ ಪುರುಷರಿಗೇ ಹಕ್ಕು ಭಾಧ್ಯತೆಗಳ ಏನೇನೂ ಅರಿವಿಲ್ಲದ 'ತಳವರ್ಗ' (ಗ್ರಾಸ್‌ರೂಟ್ ಲೆವಲ್) ಒಂದು ಕಡೆ, ಅಷ್ಟೇ ಹಿಂದಕ್ಕೆ ತಳ್ಳಲ್ಪಟ್ಟಿರುವ ಹೆಣ್ಣು ಸಮಾಹ ಒಂದು ಕಡೆ ಹೀಗಿರುವಾಗ ಹೆಣ್ಣು ಸಮಾನ ಹರಿಯುವಿಕೆಗೆ ತನ್ನನ್ನು ಒಡ್ಡಿಕೊಳ್ಳುವುದು ಯಾವಾಗ? ಸಾಧ್ಯವಾಗುವುದು ಎಂದಿಗೆ? ನಲವತ್ತು ವರ್ಷದ ದೊಡ್ಡ ಹೆಂಗಸು ಲಚ್ಚುಮಕ್ಕ ಮಣ್ಣು, ಗಾರೆ, ಕಲ್ಲು ಭಾರ ಹೊತ್ತು ಇಡೀ ದೇಹ ದಂಡಿಸುವ ಕೆಲಸ ಮಾಡಿದರೂ, ತನಗಿಂತ ಎಷ್ಟೋ ಪಾಲು ಚಿಕ್ಕವನಾದ ಹದಿನಾರು ಹದಿನೇಳು ವರ್ಷದ ಗೋವಿಂದನ ಕರಣೆ ಆಡಿಸುವ ಹುಡುಗನ ಸಂಬಳದ ಕಾಲುಭಾಗದ ಸಂಬಳಕ್ಕೂ ಅರ್ಹತೆ ಪಡೆಯುವುದಿಲ್ಲದ ಮೇಲೆ 'ಮೀಸಲಾತಿ' ಈ ದೇಶದ, ಈ ಸಮಾಜದ ಬೇರುಗಳ ಸಡಿಲಿಸಲು ಒಂದು ಸಣ್ಣ ಕಿಂಡಿಯಾದರೂ ಆದೀತು ಅಲ್ಲವೆ?

ಮಹಿಳೆ ಮತ್ತು ರಾಜಕೀಯ ಮೀಸಲಾತಿ, ಯೋಚಿಸುವಾಗ ಮುಖ್ಯವಾಗಿ ಗ್ರಾಮೀಣ ಪರಿಸರದ ಹೆಣ್ಣು ಪಂಚಾಯ್ತಿ ನಡೆಯುವ ಚಾವಡಿ ಕಡೆ ಸಿಕ್ಕಿ ನೋಡುವುದೂ ಸಹ ಅಪರಾದವೆನ್ನುವ ಕಾಲ ಮೊನ್ನೆ ಮೊನ್ನೆಯವರೆವಿಗೂ ಚಾಲ್ತಿಯಲ್ಲಿತ್ತು. ಆದರೆ ಈಗ ಪರಿಸ್ಥಿತಿ ಹಾಗಿಲ್ಲ. ಲಕ್ಷಣವಾಗಿ ಚೆಂಡುಹೂ ಮುಡಿದು, ಕಿವಿ ತುಂಬ ಓಲೆಗೊಲಸು, ಕೈತುಂಬ ಕರಿಬಳೆ ತೊಟ್ಟು, ಕಾಲುಂಗರ, ತಾಳಿಸರ ಸಂಭ್ರಮದೊಂದಿಗೆ ಗೃಹಿಣಿತನದೊಂದಿಗೆ ಊರ ಅಭಿವೃದ್ಧಿ ಪಂಚಾಯ್ತಿ ಕೆಲಸಗಳನ್ನು ನಿರ್ವಹಿಸುತ್ತಿದ್ದಾಳೆ ಹೆಣ್ಣು. ವಿಶ್ಲೇಷಣೆ ಮಾಡುವುದಾದರೆ, ಶತಮಾನಗಳ ಅಂತರದಲ್ಲಿ ಕಟ್ಟಿಹಾಕಿದ ಪುರುಷ ಪ್ರಧಾನ ವ್ಯವಸ್ಥೆಯ ಕಬ್ಬಿಣ ಸರಳುಗಳನ್ನು ಮುರಿದ ಹೆಣ್ಣಿನ ಸಹಜ ಪ್ರತಿಭೆ, ಶಕ್ತಿ, ಕಲೆ, ನೈಪುಣ್ಯ ಎಲ್ಲವು ಇಡೀ ಬದುಕಿನ ಮಾನವೀಯ ಸತ್ವಕ್ಕೆ, ಜಗತ್ತಿನ ಎಲ್ಲಾ ಒಳ್ಳೆಯ ವಿಕಾಸಕ್ಕೆ ರೂವಾರಿಯಾಗಿದ್ದಾಳೆ.

ಒಂದು ಸಹಜ ಮೂಲನೆಲೆ ಒಂದು ಕುಟುಂಬ, ಹಳ್ಳಿ, ತನ್ನ ಮನೆಯ ಚಾಲನೆಯಲ್ಲಿ ಹೆಣ್ಣಿನ ಕೈ ಸ್ಥಗಿತವಾದರೆ, ಅಹಂಕೊಟ್ಟುವ ಮೀಸೆ ತಿರುಚುವ ಗಂಡು ಕೈಕಾಲು ನಿಂತವನಂತಾಗುತ್ತಾನಲ್ಲ.

ಗ್ರಾಮ ಸಮುದಾಯದ ಇಡೀ ಶ್ರಮ, ದುಡಿಮೆ. ಅಚ್ಚುಕಟ್ಟುತನಕ್ಕೆ ತನ್ನದೆಲ್ಲವನ್ನು ಧಾರೆ ಎರೆಯುವ ಹೆಣ್ಣು ರಾಜಕೀಯವೂ ಸೇರಿದಂತೆ ಎಲ್ಲಾ ರಂಗಗಳಲ್ಲೂ ತನ್ನ ಒಪ್ಪು, ಓರಣ ಛಾತಿ ತುಂಬಬಲ್ಲಳು ಎಂಬುದರಲ್ಲಿ ಯಾವ ಸಂಶಯವೂ ಇಲ್ಲ.

'ಮಹಿಳೆಯರ ರಾಜಕೀಯ ಮೀಸಲಾತಿ' ಮಹಿಳಾ ಸಮಾವೇಶ ಶಿವಮೊಗ್ಗ (5-2-97)ದಲ್ಲಿನ ಚರ್ಚೆಗಳಲ್ಲಿ ಕರ್ನಾಟಕ ಮಹಿಳಾ ಆಯೋಗದ ಅಧ್ಯಕ್ಷೆ ಎಂ. ಪ್ರಭಾವತಿಯವರು, ಹೇಳಿದಂತೆ ಮೀನ ಮೇಷ ಎಣಿಸುತ್ತ, ಚಿವುಟಿ, ಹಾಡುತ್ತ ಕುಂತಿರುವ ಪುರುಷ ಮುಷ್ಟಿಯ ರಾಜಕಾರಣ ವೇದಿಕೆ ನಮಗೆ ಹಕ್ಕುಗಳನ್ನು ಕೊಡಬೇಕಾಗಿಲ್ಲ. ನಮ್ಮ ಸಹಜ ಹಕ್ಕುಗಳನ್ನು ನಾವೇ ಪಡೆದುಕೊಳ್ಳಲು ಶಕ್ತರಾಗಿದ್ದೇವೆ. ಸಂಘಟಿತ ಮಾರ್ಗ ಬೇಕಾಗಿದೆ ಎಂಬ ವಿಶ್ಲೇಷಣೆ ಖಂಡಿತ ಸರಿಯಾಗಿದೆ. ಪಿ. ಲಂಕೇಶರ ಒಂದು ಚಿಂತನೆ ಗಮನಿಸಬಹುದು. ಹ್ಯಾಂಡಿಕ್ಯಾಪಿಂಗ್‌ನ್ನೇ ಸಾಮಾಜಿಕ ಏರ್ಪಾಡಿನಲ್ಲಿ 'ಮೀಸಲಾತಿ' ಎನ್ನುವುದು. ಜಾತಿ, ಭಾಷೆ, ಹಣದ ಬಲವುಳ್ಳ ಒಬ್ಬ ಹೆಚ್ಚು ನಂಬರ್ ತೆಗೆಯುವುದು ಸಾಧ್ಯವಾಗುತ್ತದೆ; ಅದಾವುದೂ ಇಲ್ಲದ ಹುಡುಗನಿಗೆ ಹೊಣೆಯರಿತ ಸರ್ಕಾರ ನೆರವಾಗಬೇಕಾಗುತ್ತದೆ. 19-2-97, ಲಂಕೇಶ್ ಪತ್ರಿಕೆ.

ಗ್ರಾಮ ಪಂಚಾಯ್ತಿ, ತಾಲ್ಲೂಕ ಪಂಚಾಯ್ತಿ, ಜಿಲ್ಲಾ ಪಂಚಾಯ್ತಿ, ಪುರಸಭೆ, ನಗರಸಭೆಗಳಲ್ಲಿ ಆರಂಭದಲ್ಲಿ ಮಹಿಳೆಯ ಸುತ್ತ ಕಂಡುಬರುವ ಗಂಡು ಸದಸ್ಯರ ತಾತ್ಸಾರ, ಉದಾಶೀನತೆ, ಸಹಾನುಭೂತಿ ಮುಂತಾದುವನ್ನು ಮೀರುವ ಗಟ್ಟಿತನ, ರೂಢಿಗೊಳ್ಳುತ್ತ ಹೋಗುತ್ತಿರುವ ಈ ಸಂದರ್ಭದಲ್ಲಿ ವಿಧಾನಸಭೆ, ಲೋಕಸಭೆಯ ಹಿಡಿತ ಹೆಣ್ಣಿನ ನೈಜ ಕ್ರಿಯಾಶೀಲತೆಗೆ ಅಸಾಧ್ಯವಾದದ್ದೇನು ಅಲ್ಲ.

●

ಮೀಸಲಾತಿ - ಮಹಿಳಾ ಚಳುವಳಿಯ ಅಲ್ಪಾವಧಿ, ದೀರ್ಘಾವಧಿ ತಂತ್ರಗಳ ಒಂದು ಭಾಗ ಮಾತ್ರ

ಸಹೇಲಿ

ಮಹಿಳಾ ಸಂಪನ್ಮೂಲ ಕೇಂದ್ರ, ನವದೆಹಲಿ

ಸಾರ್ವಜನಿಕ ಚರ್ಚೆಯಾಗಿರುವ 'ಪಾರ್ಲಿಮೆಂಟಿನಲ್ಲಿ ಮಹಿಳಾ ಮೀಸಲಾತಿ' ವಿಷಯವನ್ನು ಮಹಿಳೆಯರ ಬದುಕಿನ ವಾಸ್ತವಿಕತೆಯ ಸಂದರ್ಭದಲ್ಲಿಟ್ಟು ನೋಡಬೇಕು. ಅಲ್ಲದೆ ಮೀಸಲಾತಿಯಿಂದ ಎಷ್ಟರಮಟ್ಟಿನ ಬದಲಾವಣೆಯನ್ನು ನಿರೀಕ್ಷಿಸಬಹುದು ಎಂದು ನೋಡುವ ಅಗತ್ಯವಿದೆ.

ಮೀಸಲಾತಿಯ ಚರ್ಚೆಯು, ಚುನಾವಣಾ ರಾಜಕೀಯದಲ್ಲಿ ಮಹಿಳೆಯರಿಗೂ ಪುರುಷರಿಗೂ ನಡುವೆ ಇರುವ ಅಸಮಾನತೆಯ ಬಗ್ಗೆ ಗಮನಹರಿಸುತ್ತದೆ. ರಾಜ್ಯಾಂಗಕ್ಕೆ 50 ವರ್ಷಗಳಲ್ಲಿ ಮಹಿಳಾ ಸಮಾನತೆಯ ಆಶ್ವಾಸನೆಯನ್ನು ಪೂರೈಸಲಾಗಿಲ್ಲ, ಅದೂ ಸಂವಿಧಾನದ ಬೆಂಬಲವಿದ್ದರೂ, ಕಾನೂನಿನ ಮಧ್ಯಸ್ಥಿಕೆ ಇದ್ದರೂ ಸಹ. ಪುರುಷರಿಗೆ ಹೋಲಿಸಿದರೆ ಗಣನೀಯವಾಗಿ ಇಳಿಯುತ್ತಿರುವ ಮಹಿಳಾ ಸಂಖ್ಯೆ, ಮಹಿಳೆಯರ ಮೇಲೆ ಹೆಚ್ಚಾಗುತ್ತಿರುವ ಹಿಂಸೆ, ಜೀವನದ ಪ್ರತಿ ಸ್ತರದಲ್ಲೂ ಮಹಿಳೆಯರು ಅನುಭವಿಸುತ್ತಿರುವ ಲೈಂಗಿಕ ಕಿರುಕುಳ, ಮಹಿಳೆಯರ ಕೈಬಿಟ್ಟು ಹೋಗುತ್ತಿರುವ ಉತ್ಪಾದನಾ ಸಂಪನ್ಮೂಲಗಳು, ವೈಯಕ್ತಿಕ ಕಾನೂನುಗಳ ಹೆಸರಿನಲ್ಲಿ ಮಹಿಳೆಯರ ಮೇಲಾಗುತ್ತಿರುವ ಅನ್ಯಾಯ - ಇವೆಲ್ಲವೂ ಮಹಿಳೆಯರ ಬಗ್ಗೆ ಇರುವ ಸಮಾಜದ ದೃಷ್ಟಿಕೋನವನ್ನು ತೋರಿಸುತ್ತದೆ. ಸಾಂಪ್ರದಾಯಿಕ ಸಮಾಜವು ಸಂತಾನೋತ್ಪತ್ತಿಗಾಗಿ ಮಹಿಳೆಯರನ್ನು ಶ್ಲಾಘಿಸಿದರೆ, ಮಾರುಕಟ್ಟೆ ವ್ಯವಸ್ಥೆ ಹಾಗು ವ್ಯಾಪಾರೀಕರಣ (Commodification)ವು ಉತ್ಪಾದಕರಾಗಿ ಮಹಿಳೆಯರು ನೀಡುವ ಕೊಡುಗೆಯನ್ನು ಸಂಪೂರ್ಣವಾಗಿ ಕಡೆಗಣಿಸಿ ಬಲವಂತವಾಗಿ ಅವರನ್ನು ಕೇವಲ ಗ್ರಾಹಕರನ್ನಾಗಿಸುತ್ತಿವೆ. ಈ ಎಲ್ಲಾ ವಿಶಾಲ ಹಿನ್ನೆಲೆಯಲ್ಲಿ ಶೇ. 33 ಸ್ಥಾನಗಳ ಮೀಸಲಾತಿಯನ್ನು ವಿಶ್ಲೇಷಿಸುವ ಅಗತ್ಯವಿದೆ.

ಪಂಚಾಯ್ತಿಯಿಂದ ಪಾರ್ಲಿಮೆಂಟಿನವರೆಗಿನ ಮೀಸಲಾತಿಯ ಬಗ್ಗೆ ಮೊದಲು ಚರ್ಚೆಯಾದುದು National Perspective for Women 1989ರಲ್ಲಿ ಪಂಚಾಯ್ತಿಯಲ್ಲಿ ಶೇ. 33 ಮೀಸಲಾತಿಯ ಆಶ್ವಾಸನೆ ನೀಡುವ 73ನೇ ತಿದ್ದುಪಡಿಯ ಸಂಘಟಿತ ವಿರೋಧದಿಂದಾಗಿ ತಡೆಯಲ್ಪಟ್ಟಿತ್ತು. ಅಂತಿಮವಾಗಿ, ಅದನ್ನು 1991ರಲ್ಲಿ ಜಾರಿಗೆ ತರಲಾಯಿತು. ಅಲ್ಲಿಂದ ಸುಮಾರು 1 ಮಿಲಿಯನ್ ಮಹಿಳೆಯರು ಸ್ಥಳೀಯ ಸಂಸ್ಥೆಗಳಿಗೆ ಆಯ್ಕೆಗೊಂಡಿದ್ದಾರೆ. ಸಂಯುಕ್ತರಂಗ ಸರ್ಕಾರವು ಚುನಾವಣಾ ಪ್ರಣಾಳಿಕೆಯಲ್ಲಿ ಮಹಿಳಾ ಮೀಸಲಾತಿಗೆ ಆದ್ಯತೆ ನೀಡಿದರೂ, 81ನೇ ಸಂವಿಧಾನ ತಿದ್ದುಪಡಿ ಮಸೂದೆಯನ್ನು ಮತ ಚಲಾವಣೆಗಾಗಿ ಪಾರ್ಲಿಮೆಂಟಿನಲ್ಲಿ ಮಂಡಿಸುವಾಗ ಧೈರ್ಯ ತೋರಿಸಲಿಲ್ಲ. 31 ಸದಸ್ಯರ ಸಂಸದೀಯ ಮಂಡಳಿಯು ಮಸೂದೆಯನ್ನು ಶೀಘ್ರವೇ ಜಾರಿಗೆ ತರಬೇಕೆಂಬ ವರದಿಯನ್ನು ಸಲ್ಲಿಸಿದ ಮೇಲೂ ಹಾಗು ಬಹಳಷ್ಟು ಬೆಂಬಲವಿದ್ದಾಗೂ ಸಹ ಧೈರ್ಯ ತೋರಲಿಲ್ಲ.

ಮಹಿಳಾ ಮೀಸಲಾತಿಗೆ ಸಂಬಂಧಪಟ್ಟಂತೆ ಸಾಮಾನ್ಯವಾಗಿ ಕೇಳಿ ಬರುವ ವಿರೋಧವೆಂದರೆ - ಶಿಕ್ಷಣದ ಕೊರತೆ, ಅಂತಿಮವಾಗಿ ಕುಟುಂಬದ ಗಂಡಸರೇ ಅಧಿಕಾರ ನಡೆಸುವರೆಂಬ ವಾಸ್ತವಾಂಶ, ಮಹಿಳೆಯರಿಗೆ ರಾಜಕೀಯ ಹೊಂದುವುದಿಲ್ಲ ಇತ್ಯಾದಿ. ಮಹಿಳೆಯರ ಸಾಮರ್ಥ್ಯವನ್ನೆ ಹಿನ್ನೆಲೆಗೆ ತಳ್ಳುವ ಮೇಲಿನ ಹೇಳಿಕೆಗಳಲ್ಲಿ ಒಂದು ಮುಖ್ಯ ಸಂಗತಿಯನ್ನು ಕಡೆಗಣಿಸಲಾಗಿದೆ. ಅದೆಂದರೆ ಮಹಿಳೆಯರು ಮನೆಯ ನಾಲ್ಕು ಗೋಡೆಯೊಳಗೆ ಸೀಮಿತವಾಗಿದ್ದಾರೆ, ಮನೆಗೆಲಸದ ಸಂಪೂರ್ಣ ಜವಾಬ್ದಾರಿ ಹಾಗು ಮಕ್ಕಳ ಪಾಲನೆಯು ಮಹಿಳೆಯರ ಮೇಲೆ ಹೇರಲ್ಪಟ್ಟಿದೆ ಎಂಬ ಅಂಶ. ಅಲ್ಲದೆ ಮನೆಯ ಹೊರಗಿನ ಪ್ರಪಂಚವು ತಮಗಷ್ಟೇ ಎಂದು ಪುರುಷರು ಪ್ರತಿಷ್ಠಾಪಿಸಿರುವುದು. ಹಿಂದುಳಿದ ಜಾತಿಯವರಿಗೆ ಆದ್ಯತೆ ನೀಡಬೇಕೆಂಬ ಅಂಶವು ಮೀಸಲಾತಿ ವಿಶಯವನ್ನು ಇನ್ನಷ್ಟು ಅಸ್ಪಷ್ಟಗೊಳಿಸಿದೆ. ಆದರೆ ಅಧಿಕಾರದಲ್ಲಿರುವ ಪುರುಷರು ಅಧಿಕಾರ ಕಳೆದುಕೊಳ್ಳುವ ಬಗ್ಗೆ ಭೀತಗೊಂಡಿರುವುದಂತು ಹೆಚ್ಚು ಸ್ಪಷ್ಟ. ಭೀತಗೊಂಡಿರುವುದು ಅಧಿಕಾರವನ್ನು ಮಹಿಳೆಯರೊಂದಿಗೆ ಹಂಚಿಕೊಳ್ಳುವ ವಿಶಯಕ್ಕೆ!

ರಾಜಕೀಯ ಕ್ಷೇತ್ರದಲ್ಲಿ ಮಹಿಳೆಯರ ಪ್ರತಿನಿಧಿತ್ವ ತೀರಾ ಕಡಿಮೆ ಎನ್ನುವುದರ ಬಗ್ಗೆ ಸಂಶಯವೇ ಇಲ್ಲ. ಪಾರ್ಲಿಮೆಂಟಿನಲ್ಲಿ ಮಹಿಳೆಯರ ಸಂಖ್ಯೆಯು ಇಳಿದಿದೆ. 1991ರಲ್ಲಿ 7% ಆದರೆ 1996ರಲ್ಲಿ 6% ಆಗಿದೆ. ಈ ಸಂಖ್ಯೆಯು ಇತರೆ ಮುಂದುವರೆದ ದೇಶಗಳೆಂದು ಕರೆಸಿಕೊಳ್ಳುವ ಫ್ರಾನ್ಸ್‌ನಲ್ಲಿ ಶೇ. 11, ಯುನೈಟೆಡ್ ಕಿಂಗ್‌ಡಂನಲ್ಲಿ ಶೇ. 9, ಯು.ಎಸ್.ಎ.ಯಲ್ಲಿ ಶೇ. 11ಗೆ

ಹೋಲಿಸಿದರೆ ಹೆಚ್ಚಿನಿಸುವುದು. ಆದರೆ ಈ ಸಂಖ್ಯೆಯಲ್ಲಿ ಸ್ವತಂತ್ರ ಸಂಗ್ರಾಮದಲ್ಲಿ ಸಾವಿರಾರು ಸಂಖ್ಯೆಯಲ್ಲಿ ಮಹಿಳೆಯರು ಭಾಗವಹಿಸಿದಂತ ದೇಶಕ್ಕೆ, ಮಹಿಳೆಯರು ಕಾರ್ಮಿಕ ಸಂಘಟನೆ, ರೈತ ಚಳುವಳಿ, ಪರಿಸರ ಚಳುವಳಿಯ ಹಾಗು ಇತರೆ ಸಂಘಟಿತ ಹೋರಾಟಗಳ ಮುಂಚೂಣಿಯಲ್ಲಿರುವಂತ ದೇಶಕ್ಕೆ ಕಡಿಮೆಯೆ.

ಮೀಸಲಾತಿಯು ನಿರ್ಣಯ ಕೈಗೊಳ್ಳುವ ಸಂಸ್ಥೆಗಳಲ್ಲಿ ಚುನಾಯಿತ ಮಹಿಳೆಯರ ಸಂಖ್ಯೆಯನ್ನು ಹೆಚ್ಚಿಸುವುದು ನಿಜವೇ ಆದರೂ, ಆ ರೀತಿಯ ಪ್ರತಿನಿಧಿತ್ವದ ಸ್ವರೂಪ ಹಾಗು ಮಿತಿಗಳ ಬಗ್ಗೆ ಗಮನ ಹರಿಸುವುದಿಲ್ಲ. ಮೊದಲಿಗೆ ಬರುವ ಪ್ರಶ್ನೆಯೆಂದರೆ ಶೇ. 33 ಮೀಸಲಾತಿಯೇ ಏಕೆ? 33ರ ಹಿಂದೆ ಸಮರ್ಪಕ ತರ್ಕವಿಲ್ಲ, ಪರಿಶಿಷ್ಟ ಜಾತಿ/ಪಂಗಡಗಳ ಜನಸಂಖ್ಯೆಯನ್ನು ಆಧರಿಸುವ ಇತ್ಯಾತ್ಮಕ ತಾರತಮ್ಯ (Positive Discrimination)ದಂತೆ ಹೊರಟರೆ ಮಹಿಳೆಯರಿಗೆ ಶೇ. 50% ಮೀಸಲಾತಿಯನ್ನು ನೀಡಬೇಕಾಗುತ್ತದೆ. ಮಹಿಳಾ ಸಶಕ್ತತೆಗೆ ಕೇವಲ ಬಾಯಿ ಮಾತಿನ ಸೇವೆಯನ್ನ ನೀಡುವುದಷ್ಟೇ ರಾಜ್ಯಾಂಗದ ಉದ್ದೇಶವೆಂಬುದು ಇಲ್ಲಿ ಸ್ಪಷ್ಟ. ಸಮಾನತೆ ನೀಡುವುದು ಅದರ ಉದ್ದೇಶವಲ್ಲ.

ಮಸೂದೆಯ ಇನ್ನೊಂದು ಮಿತಿಯೆಂದರೆ ರಾಜಕೀಯ ಪಕ್ಷಗಳ ನಿರ್ಣಯ ಕೈಗೊಳ್ಳುವ ಸಮಿತಿಗಳಲ್ಲಿ ಮಹಿಳೆಯರ ಸಂಖ್ಯೆಯನ್ನು ಹೆಚ್ಚಿಸಲು ಯಾವುದೇ ಶಿಫಾರಸ್ಸುಗಳು ಇಲ್ಲದಿರುವುದು. ಈ ರೀತಿಯ ಪ್ರಯತ್ನಗಳಾಗದಿದ್ದಲ್ಲಿ ವಿಶಯಗಳ ಕುರಿತು ನಿರ್ಣಯ ಕೈಗೊಳ್ಳುವ ಹಾಗು ಯಾವ ಅಭ್ಯರ್ಥಿಗೆ ಟಿಕೇಟು ನೀಡಬೇಕೆನ್ನುವ ಆಯ್ಕೆ - ಇತ್ಯಾದಿ ವಿಶಯಗಳು, ಪಾರ್ಟಿಯಲ್ಲಿರುವ ಮಹಿಳೆಯರ ಹತೋಟಿಯ ಹೊರಗುಳಿದು ಬಿಡುತ್ತದೆ. ಸದ್ಯದ ಪರಿಸ್ಥಿತಿಯಲ್ಲಿ ಎಲ್ಲಾ ರಾಜಕೀಯ ಪಕ್ಷಗಳಲ್ಲಿ ಮಹಿಳೆಯರು ಕಡೆಗಣಿಸಲ್ಪಟ್ಟಿದ್ದಾರೆ. ಸಾಮರ್ಥ್ಯದ ಆಧಾರದ ಮೇಲೆ ಮಹಿಳಾ ಅಭ್ಯರ್ಥಿಗಳನ್ನು ಆರಿಸುವುದು ಯಾವ ರಾಜಕೀಯ ಪಕ್ಷಕ್ಕೂ ಇಷ್ಟವಿಲ್ಲ, ಇತ್ತೀಚೆಗೆ ಪಾರ್ಲಿಮೆಂಟಿನ ಅಧಿವೇಶನದಲ್ಲಿ, ಪುರುಷ ಸದಸ್ಯರು ಸಭೆಯಿಂದ ಹೊರನಡೆದ ಘಟನೆಯು ರಾಜಕೀಯ ಪಕ್ಷಗಳೊಳಗೆ ಇರುವ ಪ್ರತಿರೋಧವನ್ನು ತೋರಿಸುತ್ತದೆ. ಅದೇ ರೀತಿ ಬರಿ ಮೀಸಲಾತಿಯನ್ನು ಜಾರಿಗೊಳಿಸುವುದರಿಂದ, ಪುರುಷರು ಮಹಿಳಾ ಸಂಬಂಧಿ ವಿಶಯಗಳನ್ನು ಮೇಲೆತ್ತುವ ಜವಾಬ್ದಾರಿಯಿಂದ ಸಂಪೂರ್ಣ ಕೊಡವಿಕೊಳ್ಳಬಹುದು. ಮುಂದೆ ಮೀಸಲಾತಿಯು ಮಹಿಳೆಯರು ಮೀಸಲು ಕ್ಷೇತ್ರದಿಂದ ಮಾತ್ರ ಸ್ಪರ್ಧಿಸಬೇಕೆಂಬ ಆಲೋಚನೆಗೆ ಎಡೆಮಾಡಿಕೊಡಬಹುದು. ಸಾಮಾನ್ಯ ಕ್ಷೇತ್ರಗಳಲ್ಲಿ ಚುನಾವಣೆಗೆ ನಿಲ್ಲುವ ಅವಕಾಶ ದೂರವೇ ಆಗಬಹುದು. ಈ ರೀತಿಯ ಆಲೋಚನೆಯನ್ನು ಸಾರಿಗೆ ಬಸ್‌ಗಳಲ್ಲಿ ನಾವು ಕಾಣಬಹುದು. ಮಹಿಳೆಯರಿಗೆ ಮೀಸಲಿಟ್ಟ 4-5 ಸೀಟುಗಳನ್ನು ಬಿಟ್ಟು, ಉಳಿದ ಸೀಟುಗಳಲ್ಲಿ ಮಹಿಳೆಯರು ಕುಳಿತುಕೊಳ್ಳ ಬಾರದೆಂಬ ಆಲೋಚನೆ ಅನೇಕರದು.

ಮಹಿಳೆಯರ ಜೀವನದಲ್ಲಿ, ಮೀಸಲಾತಿಯು ಎಂತಹ ಬದಲಾವಣೆಯನ್ನು ತರಬಲ್ಲದು ಎಂಬ ಆಧಾರದ ಮೇಲೆ ಮೀಸಲಾತಿಯ ಉಪಯುಕ್ತತೆಯನ್ನು ನೋಡಬೇಕು. ಮೀಸಲಾತಿಯು ಕೆಲವು ಮಹಿಳೆಯರ ರಾಜಕೀಯ ಪ್ರವೇಶವನ್ನು ಖಚಿತಪಡಿಸುವುದು ನಿಜವಾದರು, ಅವರ ಜೊತೆಯಲ್ಲೆ ಆ ರೀತಿಯ ಪ್ರತಿನಿಧಿತ್ವದ ಪರಿಣಾಮವು ಮಹಿಳೆಯರ ನಿತ್ಯ ಬದುಕಿನಲ್ಲಿ ಎಷ್ಟು ಬದಲಾವಣೆಯನ್ನು ತರಬಲ್ಲದು ಎಂಬುದರ ಪರಿಶೀಲನೆಯಾಗಬೇಕು. ಇಂದಿನ ರಾಜಕೀಯ ವಾತಾವರಣವು ಭ್ರಷ್ಟ, ಅಧಿಕಾರ ಲಾಲಾಸೆಯ 'ಗಣ್ಯರು' ಹಾಗು ಗೂಂಡಾಗಳ ಪ್ರಭಾವದಲ್ಲಿದೆ ಎಂಬುದೆ ಪ್ರತಿಭಟಿಸಬೇಕಾದ ವಿಷಯ. ಕ್ರಮೇಣ ಕುಸಿಯುತ್ತಿರುವ ಪ್ರಜಾಶಾಸನ ಸಂಸ್ಥೆಗಳು ಹಾಗು ಪ್ರಜಾಸತ್ತಾತ್ಮಕ ಕಾರ್ಯ ವಿಧಾನಗಳು ಜನರ ಪ್ರತಿನಿಧಿತ್ವವನ್ನು ಹಾಸ್ಯಾಸ್ಪದ ಮಾಡಿವೆ. ಇಡಿ ವ್ಯವಸ್ಥೆಯನ್ನೆ ದೊಡ್ಡ ಪ್ರಮಾಣದಲ್ಲಿ ಬದಲಾಯಿಸುವ ಅಗತ್ಯವಿದೆ. ಕಂತಿನಲ್ಲಿ ಮಾಡುವ ಬದಲಾವಣೆಗಳು ಯಾವ ಪರಿಣಾಮವನ್ನೂ ಉಂಟು ಮಾಡುವುದಿಲ್ಲ. ಮೀಸಲಾತಿಯು ಮಹಿಳಾ ಚಳುವಳಿಯ ಶಕ್ಯತೆಯನ್ನು Co-opt ಮಾಡಿಕೊಂಡು ಬಿಡುವ ಭಯ ನಿಜವಾದುದೇ. ಲೋಕಸಭೆ, ವಿಧಾನಸಭೆಗಳಲ್ಲಿನ ಮಹಿಳಾ ಸದಸ್ಯೆಯರು, ಚಳುವಳಿಯ ದನಿಗೆ ಸ್ಪಂದಿಸದೆ ಹೋದಲ್ಲಿ ಬದಲಾವಣೆಯ ಸಾಧ್ಯತೆ ಬಹಳ ಕಡಿಮೆ. ಬೇಡಿಕೆಗಳು ತಳಮಟ್ಟದಿಂದ ಬರಬೇಕು ಆಗಲೇ ಅಧಿಕಾರ ಸ್ಥಾನಗಳಲ್ಲಿ ಮಹಿಳೆಯರಿದ್ದು ಉಪಯುಕ್ತ. ಕೇವಲ ಮಹಿಳೆಯರ ಹಾಜರಿಯು ಮಹಿಳಾ ಪ್ರಶ್ನೆಗಳನ್ನು ಎತ್ತುವ ಗ್ಯಾರಂಟಿಯನ್ನೇನು ನೀಡುವುದಿಲ್ಲ. ಸಾಮಾಜಿಕ ಬದಲಾವಣೆಗಾಗಿ ದುಡಿಯುವ ಪ್ರಬಲ ಚಳುವಳಿಯ ಬೆಂಬಲವಿಲ್ಲದಿದ್ದರೆ ಹಾಜರಿಯಿಂದೇನೂ ಪ್ರಯೋಜನವಾಗುವುದಿಲ್ಲ. ಮೀಸಲಾತಿಯು ಮಹಿಳಾ ಚಳುವಳಿಯ ಧೀರ್ಘಾವಧಿ, ಅಲ್ಪಾವಧಿ ತಂತ್ರಗಳ ಒಂದು ಪುಟ್ಟ ಭಾಗವಷ್ಟೇ. ಯೋಜನೆಗಳಲ್ಲಿ ಹಾಗು ಮಹಿಳಾ ಹಕ್ಕುಗಳು ಮಹಿಳಾ ಸಮಾನತೆಯ ಕುರಿತು ಗುಣಾತ್ಮಕ ಹಾಗು ಪ್ರಗತಿಪರ ಬದಲಾವಣೆಯಾಗಬೇಕಾಗಿರುವುದು ಅವಶ್ಯಕ. ಇದು ಸಾಧ್ಯವಾಗುವುದು ಸಂಘಟಿತ ಚಳುವಳಿಯಲ್ಲಿನ ಹೋರಾಟದಿಂದ ಮಾತ್ರ. ಸಾಮಾಜಿಕ ಬದಲಾವಣೆಯಲ್ಲಿ ಅಧಿಕಾರದಲ್ಲಿರುವ ಮಹಿಳೆಯರು ಎಷ್ಟರಮಟ್ಟಿಗೆ ಉಪಯುಕ್ತ ಪಾತ್ರವಹಿಸಬಲ್ಲರು ಎಂಬುದನ್ನು ನೋಡಬೇಕು. ●

ಮಾನಸ ಪತ್ರಿಕೆ ಯಾವ ಸಂಸ್ಥೆಯ, ಸರ್ಕಾರದ ನೆರವಿಲ್ಲದೇ ಪ್ರಕಟವಾಗುತ್ತಿರುವ ಮಹಿಳೆಯರೇ ನಡೆಸುತ್ತಿರುವ ಸ್ವತಂತ್ರ ಪತ್ರಿಕೆ. ಓದುಗರು ಹಾಗೂ ಸಹೃದಯರು ನೀಡುವ ಆರ್ಥಿಕ ನೆರವೇ ಪತ್ರಿಕೆಯ ಜೀವಾಳ. ಚಂದಾದಾರರಿಗೆ ಚಂದಾ ಅವಧಿ ಮುಕ್ತಾಯವಾದುದರ ಬಗ್ಗೆ ಸೂಚನೆಯನ್ನು ನೀಡಲಾಗುತ್ತದೆ. ಓದುಗರು ತಕ್ಷಣ ಚಂದಾ ನವೀಕರಿಸಬೇಕೆಂದು ಕೋರುತ್ತೇವೆ. ಪತ್ರಿಕೆಯು ಉಳಿದು ಬೆಳೆಯಬೇಕಾದರೆ ಓದುಗರ ಸಹಕಾರ ಅತ್ಯಗತ್ಯ.

ವಾರ್ಷಿಕ ಚಂದಾ : 40 ರೂ.

ಸಂಸ್ಥೆಗಳಿಗೆ : 75 ರೂ.

ಸಂ. ಮಂಡಳಿ

REGD NO. KRNA 271

BOOK-POST
PRINTED MATTER

ವಿಳಾಸ :
ಮಾನಸ
ಪಂಚಾಯಿತಿ ರಸ್ತೆ
ಕಾಡುಗೋಡಿ
ಬೆಂಗಳೂರು - 560 067